# ಉಪನಿಷತ್ತಿನ ಕಥೆಗಳು

ಲೇಖಕರು :
ವಿದ್ವಾನ್ ರಂಗನಾಥಶರ್ಮಾ

ಪ್ರಕಾಶಕರು :
ಶ್ರೀ ಶಾರದಾ ಟ್ರಸ್ಟ್,
4581, "ಗೋಮತಿ" ನರಸಿಂಹರಾಜ ಮೊಹಲ್ಲಾ,
ಮೈಸೂರು-570 004

# ಉಪನಿಷತ್ತಿನ ಕಥೆಗಳು

ಲೇಖಕರು :
ವಿದ್ವಾನ್ ರಂಗನಾಥಶರ್ಮಾ

ಪ್ರಕಾಶಕರು :
ಶ್ರೀ ಶಾರದಾ ಟ್ರಸ್ಟ್,
4581, "ಗೋಮತಿ" ನರಸಿಂಹರಾಜ ಮೊಹಲ್ಲಾ,
ಮೈಸೂರು–570 007

ಉಪನಿಷತ್ತಿನ ಕಥೆಗಳು—ಲೇಖಕರು : ವಿದ್ವಾನ್ ರಂಗನಾಥಶರ್ಮ

© ಎಲ್ಲಾ ಹಕ್ಕುಗಳೂ ಪ್ರಕಾಶಕರದು

ಬೆಲೆ : 8-00 ರೂಪಾಯಿ

ಮುದ್ರಕರು ;
ಶ್ರೀ ಶಾರದ ಮುದ್ರಣ ಪ್ರಕಾಶನಾಲಯ (ಪ್ರೈ.) ಲಿ., ಮೈಸೂರು–570 004

॥ श्री शृङ्गेरी श्रीजगद्गुरुमहासंस्थानम् ॥

श्री
विद्या-
शंकर

श्रीमत्परमहंसपरिव्राजकाचार्यवर्य पदवाक्यप्रमाणपारावारपारीण यमनियमासनप्राणायामप्रत्याहाराधारणाध्यानसमाध्यष्टाङ्गयोगानुष्ठाननिष्ठ तपश्चक्रवर्त्यनाद्यविच्छिन्न श्रीशङ्कराचार्यगुरुपरम्पराप्राप्त षड्दर्शनस्थापनाचार्य व्याख्यानसिंहासनाधीश्वर सकल निगमागमसारहृदय सांख्यत्रयप्रतिपादक वैदिकमार्गप्रवर्तक सर्वतन्त्रस्वतन्त्रादिराजधानीविद्यानगरमहाराजधानीकर्णाटकसिंहासनप्रतिष्ठापनाचार्य श्रीमद्राजाधिराजगुरुभूमण्डलाचार्य ऋष्यशृङ्गपुरवराधीश्वर तुङ्गभद्रतीरवासि श्रीमद्विद्याशङ्करपादपद्माराधक श्रीजगद्गुरु श्रीमदभिनवविद्यातीर्थस्वामिगुरुकरकमलसञ्जात

॥ श्री जगद्गुरु शृङ्गेरी श्रीमद्भारतीतीर्थस्वामिभिः ॥

# ಸಂದೇಶ

**ನಿಖಿಲಾಸ್ತಿಕಮಹಾಜನೇಷು ನಾರಾಯಣಸ್ಮರಣ ಪೂರ್ವಕಂ ವಿರಚಿತಾ ಆಶಿಷಸ್ಸಮುಲ್ಲಸಂತು.**

ಪರಮಪುರುಷಾರ್ಥವಾದ ಮೋಕ್ಷ ಪ್ರಾಪ್ತಿಗೆ ಸಾಧನವನ್ನುಪದೇಶಿಸುವುದೇ ಉಪನಿಷತ್ತುಗಳ ಪ್ರಧಾನ ಲಕ್ಷ್ಯವಾಗಿದೆ. ಆ ಉಪನಿಷತ್ತುಗಳನ್ನು ಶ್ರೀಮಚ್ಛಂಕರ ಭಗವತ್ಪಾದರ ಭಾಷ್ಯ ಸಹಾಯದಿಂದ ಅರ್ಥಮಾಡಿಕೊಂಡರೇ ಮೋಕ್ಷಸ್ವರೂಪ ಮತ್ತು ಮೋಕ್ಷ ಸಾಧನೆಗಳು ಕರತಲಾಮಲಕವಾಗುತ್ತವೆ. ಉಪನಿಷತ್ತುಗಳಲ್ಲಿ ಆತ್ಮತತ್ತ್ವವನ್ನು ತಿಳಿಸುವ ಸಂದರ್ಭಗಳಲ್ಲಿ ಅಲ್ಲಲ್ಲಿ ಕೆಲವು ಕಥೆಗಳು ಬರುತ್ತವೆ. ಕಥೆಯ ಮೂಲಕವಾಗಿ ತತ್ತ್ವವನ್ನು ತಿಳಿಯುವುದು ಸಾಮಾನ್ಯ ಜನರಿಗೂ ಅಭೀಪ್ಸಿತವಾಗಿರುತ್ತೇ. ಆದರೂ ಕಥೆಗಳಿಗೆ ತಾತ್ಪರ್ಯವನ್ನು ಭಗವತ್ಪಾದರು "ವಿದ್ಯಾಪ್ರಾಪ್ತ್ಯುಪಾಯಪ್ರದರ್ಶನಾರ್ಥೈವ ಆಖ್ಯಾಯಿಕಾ" "ಆಖ್ಯಾಯಿಕಾತು ವಿದ್ಯಾಸಂಪ್ರದಾನಗ್ರಹಣವಿಧಿಪ್ರಕಾಶನಾರ್ಥ" "ಕೇವಲ ತರ್ಕಬುದ್ಧಿನಿಷೇಧಾರ್ಥಾ ಚಾಖ್ಯಾಯಿಕಾ" ಇತ್ಯಾದಿ ವಾಕ್ಯಗಳಿಂದ ತಿಳಿಸಿದ್ದಾರೆ. ಗುರುವಿನಿಂದಲೇ ತತ್ತ್ವವನ್ನು ತಿಳಿಯಬೇಕು. ತತ್ತ್ವಜ್ಞರಾದ ಮಹಾತ್ಮರ ಸಂಪರ್ಕವಿರಬೇಕು. ಸ್ವಬುದ್ಧಿಯಿಂದಲೇ ತತ್ತ್ವವನ್ನು ತಿಳಿಯಲು ಸಾಧ್ಯವಾಗುವುದಿಲ್ಲ. ಮುಂತಾದ ವಿಷಯಗಳನ್ನು ತಿಳಿಸುವ ಸಲುವಾಗಿಯೇ ಈ ಆಖ್ಯಾಯಿಕೆಗಳು ಹೇಳಲ್ಪಟ್ಟಿವೆ.

ಈ ರೀತಿಯ ಆಖ್ಯಾಯಿಕೆಗಳನ್ನು ಜನರಿಗೆ ಸುಲಭವಾದ ರೀತಿಯಲ್ಲಿ ತಿಳಿಸಿದರೇ ತುಂಬಾ ಉಪಕಾರವಾಗುತ್ತದೆಂಬ ಅಭಿಪ್ರಾಯದಿಂದ ವಿದ್ವಾನ್ ರಂಗನಾಥಶರ್ಮರು ಉಪನಿಷತ್ತಿನ ಕಥೆಗಳು ಎಂಬ ಗ್ರಂಥವನ್ನು ಬರೆದಿರುವುದು ತುಂಬಾ ಪ್ರಶಂಸನೀಯವಾಗಿದೆ. ಈ ಗ್ರಂಥವನ್ನು ನಾವು ನೋಡಿ ಸಂತೋಷ ಪಟ್ಟಿದ್ದೇವೆ. ಈ ಪುಸ್ತಕವು ಆಸ್ತಿಕ ಜನರಿಗೆ ಉಪಕಾರಕವಾಗಿ ಬೆಳಗಲಿ ಎಂದು ಆಶೀರ್ವದಿಸುತ್ತಿದ್ದೇವೆ.

ಇತಿ ನಾರಾಯಣಸ್ಮರಣಂ

ಶ್ರೀ

ಶೃಂಗೇರಿ
ಶ್ರೀಮುಖ ಶ್ರಾವಣ ಪೂರ್ಣಿಮಾ ಸೋಮವಾರ
2-8-1993

# ನಿವೇದನೆ

ಪ್ರತಿಯೊಂದು ವೇದದ ಅಂತ್ಯ ವಿಭಾಗದಲ್ಲಿ ಬರತಕ್ಕದ್ದು ಉಪನಿಷತ್ತು. ಆದ್ದರಿಂದ ಉಪನಿಷತ್ತಿಗೆ ವೇದಾಂತವೆಂದು ಹೆಸರಿದೆ. ಅಥವಾ ವೇದಗಳ ಅಂತ = ಸಿದ್ಧಾಂತವೇ ವೇದಾಂತವೆಂದೂ ಹೇಳಬಹುದು. ಈ ವೇದೋಪನಿಷತ್ತುಗಳು ಮನುಷ್ಯರಿಂದ ನಿರ್ಮಿತವಾಗಿಲ್ಲವೆಂದು ಇವು ಅಪೌರುಷೇಯಗಳೆಂದು ಭಾರತೀಯರ ದೃಢವಾದ ವಿಶ್ವಾಸ. ಕಶ್ಯಪಾದಿ ಋಷಿಗಳು ಇವನ್ನು ರಚಿಸಲಿಲ್ಲ. ಅವರು ವೇದಗಳ ಕರ್ತಾರರಲ್ಲ. ಕೇವಲ ದ್ರಷ್ಟಾರರು. ತಪೋನಿರತರಾಗಿದ್ದಾಗ ಅವರ ಬುದ್ಧಿಗೆ ಇವು ಹೊಳೆದವು. ಮಾನವರ ಕಲ್ಯಾಣಕ್ಕಾಗಿ, ಮಾನವರ ಉದ್ಧಾರವಾಗಲೆಂದು ಪರಮಾತ್ಮನೇ ಈ ವೇದೋಪನಿಷತ್ತುಗಳನ್ನು ಋಷಿಗಳಿಗೆ ಗೋಚರಿಸುವಂತೆ ಮಾಡಿದನೆಂದು ತಾತ್ಪರ್ಯ. ಇವು ನಿತ್ಯವೂ ಅನಂತವೂ ಆಗಿದ್ದು ಪರಮಾರ್ಥ ಸತ್ಯವನ್ನು ತಿಳಿಸಿಕೊಡುತ್ತವೆ ಯೆಂಬುದು ನಮ್ಮ ಅಚಲವಾದ ನಂಬಿಕೆ.

ಉಪನಿಷತ್–ಎಂಬ ಶಬ್ದದ ಅರ್ಥವೇನು ? ಉಪ, ನಿ–ಎಂಬ ಎರಡು ಉಪಸರ್ಗಗಳಿಂದ ಸಹಿತವಾದ 'ಸದ್' ಧಾತುವಿನಿಂದ ಈ ಶಬ್ದವು ನಿಷ್ಪನ್ನವಾಗಿದೆ. 'ಸದ್' ಧಾತುವಿಗೆ ವಿಶರಣ, ಗತಿ, ಅವಸಾದನ ಎಂಬ ಮೂರು ಅರ್ಥಗಳಿವೆ. 'ಷದ್ಲ– ವಿಶರಣ ಗತ್ಯವಸಾದನೇಷು' ಎಂದು ಧಾತುಪಾಠದಲ್ಲಿದೆ. ವಿಶರಣ = ವಿನಾಶ. ಗತಿ = ಹೋಗು, ಸೇರು. ಅವಸಾದನ = ಶಿಥಿಲವಾಗು. ಈ ಅರ್ಥಗಳನ್ನು ಅನುಸರಿಸಿ ಉಪನಿಷಚ್ಛಬ್ದಕ್ಕೆ ಅನೇಕ ವಿಧವಾಗಿ ಅರ್ಥಮಾಡಬಹುದು. ಶ್ರೀ ಶಂಕರ ಭಗವತ್ಪಾದರು ಕೆಳಗೆ ಕಂಡಂತೆ ಅರ್ಥವನ್ನು ಹೇಳಿದ್ದಾರೆ—

೧. ಶ್ರದ್ಧಾಭಕ್ತಿಪೂರ್ವಕವಾಗಿ ಆತ್ಮಭಾವದಿಂದ ಅರಿತು ಹೇಳುವವರ ಹುಟ್ಟು, ಮುಪ್ಪು, ರೋಗ ಮುಂತಾದ ಅನರ್ಥಗಳನ್ನು ಯಾವುದು ಉಪನಿಷಾದಯತಿ = ವಿನಾಶ ಮಾಡುತ್ತದೆಯೋ ಅದು ಉಪನಿಷತ್ = ಅದೇ ಬ್ರಹ್ಮವಿದ್ಯೆ.

೨. ಮಾನವರ ಸಂಸಾರಬೀಜವಾದ ಅವಿದ್ಯೆಯನ್ನು ಯಾವುದು ಉಪನಿಷಾದಯತಿ = ನಾಶಗೊಳಿಸುತ್ತದೆಯೋ ಅದು ಉಪನಿಷತ್ = ಅದೇ ಬ್ರಹ್ಮವಿದ್ಯೆ.

೩. ಅಂತಹ ಶ್ರದ್ಧಾಭಕ್ತಿಸಂಪನ್ನರನ್ನು ಯಾವುದು, ಉಪಸಾದಯತಿ ಪರಂಬ್ರಹ್ಮ = ಪರಬ್ರಹ್ಮದಲ್ಲಿ ಸೇರಿಸಿಬಿಡುತ್ತದೆಯೋ ಅದು ಉಪನಿಷತ್ = ಬ್ರಹ್ಮವಿದ್ಯೆ.

೪. ಅಗ್ನಿವಿದ್ಯೆ ಮುಂತಾದ ಉಪಾಸನಾರೂಪವಾದ ಕೆಲವು ವಿದ್ಯೆಗಳೂ ಈ ಉಪನಿಷತ್ತುಗಳಲ್ಲಿವೆ. ಅವು ಉಪಾಸಕರಿಗೆ ಸ್ವರ್ಗಾದಿಲೋಕಗಳ ಮೂಲಕ ಕಾಲಕ್ರಮದಲ್ಲಿ ಪರಂಪರೆಯಿಂದ ಮೋಕ್ಷವನ್ನೀಯುತ್ತವೆ. ಬ್ರಹ್ಮವಿದ್ಯೆಯಂತೆ ನೇರವಾಗಿ

ಅಲ್ಲ. ಅವು ಉಪನಿಷತ್ತುಗಳೆನಿಸಿಕೊಂಡಿರುವುದರಿಂದ, ಗರ್ಭವಾಸ–ಮುಪ್ಪು–ಅವಿದ್ಯಾ ಬೀಜಗಳನ್ನು ಶಿಥಿಲಗೊಳಿಸುತ್ತವೆಯಾದ್ದರಿಂದ ಉಪನಿಷತ್ ಎಂದೂ ಅರ್ಥವನ್ನು ವಿವರಿಸಬಹುದು.

—ಕಾಠಕ ಮುಂಡಕೋಪನಿಷತ್ತುಗಳ ಭಾಷ್ಯದ ಆದಿಯಲ್ಲಿ.

೫. ಉಪನಿಷೀದತಿ ಎಂಬುದಕ್ಕೆ ಉಪಸರ್ಗವಶದಿಂದ ಇರು, ದೃಢವಾಗಿ ನಿಲ್ಲು, ಕುಳಿತಿಕೊ ಎಂಬ ಅರ್ಥವೂ ಇದೆ. ಈ ಬ್ರಹ್ಮವಿದ್ಯೆಯಲ್ಲಿ ಪರಮಶ್ರೇಯಸ್ಸು ದೃಢವಾಗಿ ನಿಂತಿದೆಯಾದ್ದರಿಂದ ಉಪನಿಷತ್ ಎಂದೂ ಹೇಳಬಹುದು. (ಪರಂ ಶ್ರೇಯಃ ಅಸ್ಯಾಮುಪನಿಷಣ್ಣಮಿತಿ ವಾ–ಆನಂದವಲ್ಲೀ ಭಾಷ್ಯದ ಅಂತ್ಯದಲ್ಲಿ)

ಒಟ್ಟಿನಲ್ಲಿ ಉಪನಿಷತ್ ಎಂದರೆ ಬ್ರಹ್ಮವಿದ್ಯೆಯೆಂದರ್ಥ. ಇದು ಯಾವ ಗ್ರಂಥದಲ್ಲಿ ಪ್ರತಿಪಾದಿತವಾಗಿದೆಯೋ ಆ ವೇದಭಾಗವೂ ಉಪನಿಷತ್ ಎನಿಸಿಕೊಂಡಿದೆ. ಇದು ಲಾಕ್ಷಣಿಕವಾಗಿ ರೂಢಿಗೆ ಬಂದ ಪ್ರಯೋಗ.

ಪರಮರ್ಷಿಗಳ ತಪಃಸಿದ್ಧಿಯಾಗಿ ಲೋಕೋತ್ತರವಾದ ಈ ಉಪನಿಷದ್ವಾಙ್ಮಯವು ಮನುಷ್ಯನಿಗೆ ದೇವದತ್ತವಾದ ವರ. ಭಾಷ್ಯಕಾರರು ಈ ವಾಙ್ಮಯವನ್ನು ವ್ಯಾಖ್ಯಾನಿಸಿ ಪರಮೋಪಕಾರ ಮಾಡಿದ್ದಾರೆ. ಈ ಗ್ರಂಥಗಳನ್ನು ವ್ಯಾಸಂಗಮಾಡುವುದು ಮನುಷ್ಯನ ಕರ್ತವ್ಯವೆಂದರೆ ಅತಿಶಯೋಕ್ತಿಯೇನಲ್ಲ. ಲೋಕವ್ಯವಹಾರ, ಉದ್ಯೋಗ, ಧನಾರ್ಜನೆ–ಮೊದಲಾದವು ತ್ಯಾಜ್ಯಗಳೆಂದು ಯಾರೂ ಹೇಳುವುದಿಲ್ಲ. ಅವನ್ನು ಧರ್ಮಪೂರ್ವಕವಾಗಿ ಆಚರಿಸುತ್ತ, ಬಿಡುವು ದೊರಕಿದ ಸಮಯದಲ್ಲಿ ವ್ಯರ್ಥವಾಗಿ ಕಾಲಯಾಪನೆ ಮಾಡದೆ, ಉಪನಿಷತ್ತುಗಳನ್ನು ಅವುಗಳ ಕಡೆಗೆ ಕೈದೋರಿಸುವ ಮಹಾಭಾರತಾದಿ ಸದ್ಗ್ರಂಥಗಳನ್ನು ಅಭ್ಯಾಸ ಮಾಡಬೇಕೆಂದು ಹಿರಿಯರು ಉಪದೇಶಿಸಿರುವುದುಂಟು. ತನ್ನ ಶ್ರೇಯಸ್ಸು ಯಾವುದರಲ್ಲಿದೆಯೆಂಬುದನ್ನು ಕಂಡುಕೊಳ್ಳುವುದು ವಿವೇಕಿಯ ಲಕ್ಷಣ.

ಈಶಕೇನಕಠಪ್ರಶ್ನಮುಂಡಮಾಂಡೂಕ್ಯತಿತ್ತಿರಿ ।
ಐತರೇಯಂ ಚ ಛಾಂದೋಗ್ಯಂ ಬೃಹದಾರಣ್ಯಕಂ ತಥಾ ॥

ಇವು ದಶೋಪನಿಷತ್ತುಗಳೆಂದು ಪ್ರಸಿದ್ಧವಾಗಿವೆ. ಶ್ವೇತಾಶ್ವತರೋಪನಿಷತ್ತು ಸಹ ಪ್ರಸಿದ್ಧವಾದದ್ದು.

ಬ್ರಹ್ಮವಿದ್ಯೆಗೆ ಸಾಧನಗಳಾದ ಶ್ರದ್ಧೆ, ಭಕ್ತಿ, ಶಮ ದಮಾದಿಗಳನ್ನೂ ಉಪನಿಷತ್ತು ಬೋಧಿಸುತ್ತವೆ. ಗಹನವಾದ ಅರ್ಥವನ್ನು ತಿಳಿಸಿಕೊಡುವುದಕ್ಕಾಗಿಯೂ ಸಹ ಹಲವು ಮಾರ್ಗಗಳನ್ನು ಉಪನಿಷತ್ತುಗಳು ಆಶ್ರಯಿಸುತ್ತವೆ. ಅಂತಹ ಒಂದು ಮಾರ್ಗೋಪಾಯವೆಂದರೆ ಕಥೆ ಹೇಳುವುದು. ಈ ಕಥೆಯನ್ನು ಉಪಾಖ್ಯಾನ,

ಆಖ್ಯಾಯಿಕೆಯೆಂದೂ ಕರೆಯುವುದುಂಟು. ಪ್ರಸಿದ್ಧವಾದ ಉಪನಿಷತ್ತುಗಳಿಂದ ಅಂತಹ ಹನ್ನೊಂದು ಕಥೆಗಳನ್ನಾರಿಸಿ ಈ ಪುಸ್ತಕದಲ್ಲಿ ಕೊಡಲಾಗಿದೆ. ಇವು ಆಬಾಲ ವೃದ್ಧರಿಗೂ ಹಿಡಿಸತಕ್ಕ ಕಥೆಗಳು, ಇವುಗಳನ್ನೋದುವುದರಿಂದ ಶ್ರೇಯೋಮಾರ್ಗದಲ್ಲಿ ಹೋಗಬೇಕೆಂಬ ಪ್ರಚೋದನೆಯುಂಟಾದರೆ ನನ್ನ ಶ್ರಮಸಾರ್ಥಕ.

ಶ್ರೀ ಶೃಂಗೇರಿ ಜಗದ್ಗುರುಗಳ ಕೃಪೆಯಿಂದ ನಡೆಯುತ್ತಿರುವ ಶ್ರೀ ಶಂಕರ ಕೃಪಾ ಮಾಸಪತ್ರಿಕೆಯಲ್ಲಿ ಈ ಕಥೆಗಳು ಕ್ರಮವಾಗಿ ಮೊದಲು ಪ್ರಕಟವಾದವು. ಇವನ್ನು ಪುಸ್ತಕರೂಪದಲ್ಲಿ ತರಲು ಸಹಕಾರ ಪ್ರೇರಣೆಯನ್ನಿತ್ತ ಪತ್ರಿಕಾ ಸಂಪಾದಕರಾದ ಶ್ರೀ ಎಸ್. ರಾಮಚಂದ್ರಶಾಸ್ತ್ರಿ, ಎಂ. ಎ. ಅವರಿಗೂ ಪ್ರಕಾಶಕರಾದ ಶ್ರೀ. ಪಿ. ಆರ್. ಹರಿಹರನ್ ಅವರಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನರ್ಪಿಸುತ್ತೇನೆ.

ಬೆಂಗಳೂರು
ತಾ|| 20-8-1992

ವಿದ್ವಾನ್ ಎಸ್. ರಂಗನಾಥಶರ್ಮಾ

# ಉಪನಿಷತ್ತಿನ ಕಥೆಗಳು

## ೧ ದೇವತೆಗಳ ವಿಜಯ (ಕೇನೋಪನಿಷತ್ತು)

ಜಗತ್ತಿನ ಸೃಷ್ಟಿಕರ್ತನೂ ವಿಶ್ವನಿಯಾಮಕನೂ ಆದ ಪರಮಾತ್ಮನೊಬ್ಬನಿದ್ದಾನೆ. ಅವನು ಸರ್ವಶಕ್ತ, ಸರ್ವಜ್ಞ, ಆ ಪರಮೇಶ್ವರನ ಸ್ವರೂಪವನ್ನರಿಯುವುದೇ ಮನುಷ್ಯ ಜನ್ಮದ ಮುಖ್ಯವಾದ ಗುರಿ. ಅದೇ ಪರಮಪುರುಷಾರ್ಥ. ಪರಮಾತ್ಮನನ್ನು ಪರ ಬ್ರಹ್ಮನೆಂದೂ ಹೇಳುತ್ತಾರೆ. ಪರಬ್ರಹ್ಮವು ಅವ್ಯಕ್ತವೂ ಅಮೂರ್ತವೂ ಅದೃಶ್ಯವೂ ನಿರ್ಗುಣವೂ ನಿರ್ವಿಶೇಷವೂ ಆಗಿದೆ. ಅದನ್ನರಿಯಲು ಶಮಾದಮಾದಿ ಸಾಧನ ಸಂಪತ್ತು ಗಳು ಬೇಕು. ರಾಗ, ದ್ವೇಷ, ಅಹಂಕಾರ ಅಭಿಮಾನಾದಿಗಳಿದ್ದರೆ ಬ್ರಹ್ಮಜ್ಞಾನ ವಾಗದು. ಬ್ರಹ್ಮಜ್ಞಾನವೇ ಬ್ರಹ್ಮವಿದ್ಯೆ, ಗುರೂಪದೇಶದಿಂದಲೂ ಶಾಸ್ತ್ರಾಧ್ಯಯನ ದಿಂದಲೂ ಅದು ಲಭ್ಯ, ಮುಖ್ಯವಾಗಿ ಪರಮೇಶ್ವರನ ಅನುಗ್ರಹಬೇಕು.

ಅವ್ಯಕ್ತವೂ ನಿರ್ವಿಶೇಷವೂ ಆದ ಪರಬ್ರಹ್ಮದ ಉಪಾಸನೆ ಕಠಿಣವಾದದ್ದು. ಆದ್ದರಿಂದಲೇ **"ಅವ್ಯಕ್ತಾ ಹಿ ಗತಿರ್ದುಃಖಂ ದೇಹವದ್ಭಿರವಾಪ್ಯತೇ"**– ಎಂದು ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳಿದ್ದಾನೆ. ಆದ್ದರಿಂದ ಸಾಮಾನ್ಯ ಜನರೂ ಉದ್ಧಾರವಾಗಲೆಂದು ಈಶ್ವರನ ಸಗುಣೋಪಾಸನೆಯನ್ನು ಉಪನಿಷತ್ತು ಬೋಧಿ ಸುತ್ತದೆ.

ಲೋಕದಲ್ಲಿ ಇಬ್ಬಗೆಯ ಜನರೂ ಇರುತ್ತಾರೆ. ಕೆಲವರು ದೈವೀಸಂಪತ್ತಿನವರು, ಕೆಲವರು ಆಸುರೀಸಂಪತ್ತಿನವರು. **"ದ್ವೌಭೂತಸರ್ಗೌ ಲೋಕೇsಸ್ಮಿನ್"**– ಎಂದು ಗೀತಾಚಾರ್ಯನೇ ಹೇಳಿದ್ದಾನೆ. ಶಮದಮಾದಿಗಳು ದೈವೀಸಂಪತ್ತಿಗೆ ಸೇರಿ ದವು. ನಾಸ್ತಿಕತೆ, ದುರಹಂಕಾರ, ದುರಭಿಮಾನ, ಕಾಮ, ಕ್ರೋಧ– ಮೊದಲಾದವು ಆಸುರೀಸಂಪತ್ತಿಗೆ ಸೇರಿದವು. ನಾನೇ ಕರ್ತಾ, ನಾನೇ ಭೋಕ್ತಾ, ನನಗೆ ಸಮಾನರು ಯಾರು ? ಎಲ್ಲವೂ ನನ್ನಿಂದಲೇ ನಡೆಯುತ್ತದೆ–ಎಂದು ಬೀಗತಕ್ಕವರೇ ಲೋಕದಲ್ಲಿ ಅಧಿಕ.

**ಅಸೌಮಯಾ ಹತಃ ಶತ್ರುರ್ಹನಿಷ್ಯೇ ಚಾಪರಾನಪಿ ।**
**ಈಶ್ವರೋsಹಮಹಂ ಭೋಗಿ ಸಿದ್ಧೋsಹಂ ಬಲವಾನ್‌ಸುಖೀ ॥**

–ಎಂದು ಮೆರೆಯುತಕ್ಕವರೇ ಹೆಚ್ಚು. ಜಗತ್ತಿನ ಸೂತ್ರಧಾರನಾದ ಭಗವಂತನನ್ನು ಇವರು ಅಲಕ್ಷಿಸುತ್ತಾರೆ. ಇದೆಲ್ಲವನ್ನೂ ತಿಳಿಸಿಕೊಡುವುದಕ್ಕಾಗಿ ಉಪನಿಷತ್ತಿನಲ್ಲಿ ಒಂದು ಆಖ್ಯಾಯಿಕೆ ಬಂದಿದೆ.

# 2

ಒಮ್ಮೆ ದೇವತೆಗಳಿಗೂ ಅಸುರರಿಗೂ ಯುದ್ಧ ನಡೆಯಿತು. ದೇವತೆಗಳು ಗೆದ್ದರು. ಅಸುರರು ಸೋತರು. ದೇವತೆಗಳು ಹರ್ಷದಿಂದ ಬೀಗುತ್ತಾ ವಿಜಯೋತ್ಸವವನ್ನು ಆಚರಿಸಿದರು.—"ಓಹೋ ! ಅಸುರರನ್ನು ನಾವು ಸದೆಬಡಿದೆವು. ನಾವು ವಿಜಯಿಗಳಾದೆವು. ನಮ್ಮದೆ ವಿಜಯ. ನಮ್ಮ ಸಾಮರ್ಥ್ಯವನ್ನು ನೋಡಿರಿ· ನಮ್ಮದೆ ಮಹಿಮೆ ಇದು" ! ಎಂದು ಘೋಷಿಸುತ್ತಾ ಮೆರೆದಾಡಿದರು. ಪರಮಾತ್ಮನು ಕೃಪೆಯಿಂದ ನಮಗೆ ವಿಜಯವನ್ನು ಗಳಿಸಿಕೊಟ್ಟನೆಂಬುದನ್ನು ಲಕ್ಷಿಸದೆ, ವಿಜಯವನು ಗಳಿಸಿದವರು ನಾವೇ ಎಂದು ಮಿಥ್ಯಾಭಿಮಾನವನ್ನು ಪ್ರಕಟಿಸಿದರು. ಅಸುರರನ್ನು ಗೆದ್ದು ಆಸುರೀ ಸಂಪತ್ತನ್ನುಗಳಿಸಿದರು. ಸುರರಲ್ಲಿ ಅಸುರಭಾವ ಕಾಣಿಸಿಕೊಂಡಿತು! ಇದೆಲ್ಲವೂ ಸರ್ವಜ್ಞನಾದ ಈಶ್ವರನಿಗೆ ತಿಳಿಯಿತು. "ಈ ದೇವತೆಗಳು ನನ್ನ ಭಕ್ತರು. ಇವರಿಗಾದ ವಿಜಯ ನನ್ನ ಅನುಗ್ರಹದಿಂದ ದೊರಕಿದೆ ಎಂಬುದನ್ನು ಮರೆತು ದುರಹಂಕಾರದಿಂದ ಮೆರೆಯುತ್ತಿರುವರಲ್ಲ! ಹೀಗಿದ್ದರೆ ಇವರು ಮತ್ತೆ ಅಸುರರ ಕೈಯಿಂದ ಪೆಟ್ಟು ತಿನ್ನುವರು. ಈ ದೇವತೆಗಳ ಮಿಥ್ಯಾಭಿಮಾನವನ್ನು ಹೋಗಲಾಡಿಸಬೇಕು" —ಎಂದು ಆ ದಯಾಮಯನು ಆಲೋಚಿಸಿ, ಒಬ್ಬ ಯಕ್ಷನ ರೂಪದಿಂದ ದೂರದಲ್ಲಿ ಅವರಿಗೆ ಕಾಣಿಸಿಕೊಂಡನು. ಯಕ್ಷನೆಂದರೆ ಪೂಜ್ಯ ಭಾವವನ್ನುಂಟುಮಾಡುವ ವ್ಯಕ್ತಿ. ಅದ್ಭುತಾಕಾರನಾದ ಅಂತಹ ಯಕ್ಷನನ್ನು ದೇವತೆಗಳು ಕಂಡಿರಲಿಲ್ಲ. ಈ ಯಕ್ಷನು ಯಾರೆಂಬುದಾಗಿ ತಿಳಿಯಬೇಕೆಂದು ಅವರಿಗೆ ಇಚ್ಛೆಯಾಯಿತು. ಹತ್ತಿರ ಹೋಗಲು ಎಲ್ಲರಿಗೂ ಹೆದರಿಕೆ ! ಕಡೆಗೆ ಅಗ್ನಿಯನ್ನು ಪುಸಲಾಯಿಸಿ—"ಆ ಯಕ್ಷನು ಯಾರೆಂದು ತಿಳಿದುಕೊಂಡು ಬಾ" ಎಂದು ಅವನನ್ನು ಕಳುಹಿಸಿದರು. ಅಗ್ನಿಯು ಹೇಗೊ ಧೈರ್ಯ ತಂದುಕೊಂಡು ಯಕ್ಷನೆದುರಿಗೆ ಹೋಗಿ ನಿಂತನು. ಬಾಯಿಂದ ಒಂದು ಮಾತು ಹೊರಡಲಿಲ್ಲ. ಆಗ ಯಕ್ಷನೇ— "ನೀನು ಯಾರು ?"—ಎಂದು ಅಗ್ನಿಯನ್ನು ಕೇಳಿದನು. ಅಗ್ನಿಯು— "ನಾನು ಅಗ್ನಿ ವೇದಾರ್ಥಗಳನ್ನೆಲ್ಲ ಬಲ್ಲೆನಾದ್ದರಿಂದ "ಜಾತವೇದ" ಎಂದು ಪ್ರಸಿದ್ಧನಾಗಿದ್ದೇನೆ"— ಎಂದನು. ಯಕ್ಷನು— "ನಿನ್ನ ಸಾಮರ್ಥ್ಯವೇನು ?" ಎಂದು ಕೇಳಲಾಗಿ, "ಈ ಜಗತ್ತಿನಲ್ಲಿರುವ ಸಮಸ್ತ ಪದಾರ್ಥಗಳನ್ನೂ ಸುಟ್ಟು ಬೂದಿ ಮಾಡಬಲ್ಲೆನು" ಎಂದು ಅಗ್ನಿಯು ಉತ್ತರಿಸಿದನು. ಆಗ ಯಕ್ಷನು ಒಂದು ಹುಲ್ಲು ಕಡ್ಡಿಯನ್ನು ಆತನ ಮುಂದಿಟ್ಟು—"ಎಲ್ಲಿ, ಇದನ್ನು ಸುಡು ನೋಡೋಣ !" ಎಂದನು· ಅಗ್ನಿಯು ತನ್ನ ಸಾಮರ್ಥ್ಯವನ್ನೆಲ್ಲ ಬಳಸಿ ಹುಲ್ಲುಕಡ್ಡಿಯ ಮೇಲೆರಗಿದನು. ಹುಲ್ಲು ಕಡ್ಡಿ ಅಲುಗಾಡಲಿಲ್ಲ. ಅದು ಇದ್ದ ಹಾಗೆಯೇ ಇತ್ತು. ಅಗ್ನಿಯು ನಾಚಿಕೆಯಿಂದ ಬೆಪ್ಪಾಗಿ ತಲೆ ಬಗ್ಗಿಸಿಕೊಂಡು ದೇವತೆಗಳ ಬಳಿಗೆ ಹಿಂದಿರುಗಿ ಅದು ಯಾವ ಯಕ್ಷನೋ ತಿಳಿಯಲಾಗಲಿಲ್ಲ ಎಂದು ಉಸುರಿದನು. ಆಮೇಲೆ ದೇವತೆಗಳು ವಾಯುವನ್ನು ಯಕ್ಷನ ಬಳಿಗೆ ಕಳುಹಿಸಿದರು. ವಾಯುವು ಯಕ್ಷನೆದುರಿಗೆ ಬಂದು ನಿಂತುಕೊಳ್ಳಲು, ಹೀಗೆ ಪ್ರಶ್ನೋತ್ತರ ನಡೆಯಿತು.

"ಯಾರು ನೀನು ?'

"ನಾನು ವಾಯು, ಆಕಾಶದಲ್ಲಿಯೂ ತಡೆ ಇಲ್ಲದೆ ಸಾಗಬಲ್ಲೆ. ಆದ್ದರಿಂದ ಮಾತರಿಶ್ವಾ ಎಂದು ವಿಖ್ಯಾತನಾಗಿದ್ದೇನೆ."

"ನಿನ್ನ ಸಾಮರ್ಥ್ಯವೇನು ?"

"ಈ ಪೃಥ್ವಿಯಲ್ಲಿರುವ ಎಷ್ಟು ಭಾರವಾದ ಪದಾರ್ಥವನ್ನಾದರೂ ಎತ್ತಿ ಹಾರಿಸಬಲ್ಲೆ."

"ಎಲ್ಲಿ, ಈ ಹುಲ್ಲುಕಡ್ಡಿಯನ್ನು ಹಾರಿಸು ನೋಡೋಣ ?"

ಯಕ್ಷನು ಮುಂದಿಟ್ಟ ಹುಲ್ಲುಕಡ್ಡಿಯನ್ನು ಹಾರಿಸುವುದಕ್ಕಾಗಿ ವಾಯುವು ಪ್ರಚಂಡ ವೇಗದಿಂದ ನುಗ್ಗಿದನು, ಹುಲ್ಲುಕಡ್ಡಿ ಜಪ್ಪೆನ್ನಲಿಲ್ಲ. ಇದ್ದಲ್ಲಿಯೇ ಇತ್ತು. ವಾಯುವಿಗೆ ಮುಖಭಂಗವಾಗಿ ಲಜ್ಜೆಯಿಂದ ಹಿಂತಿರುಗಿದನು. ಆಮೇಲೆ ದೇವತೆಗಳು ಇಂದ್ರನನ್ನು ಕಳುಹಿಸಿದರು. ದೇವೇಂದ್ರನು ಯಕ್ಷನ ಮುಂದೆ ಬಂದು ನಿಂತೊಡನೆ, ಯಕ್ಷನು ಕಾಣದಂತೆ ಅಂತರ್ಧಾನ ತಳೆದನು. ದೇವೇಂದ್ರನಾದರೋ ಅದೇ ಸ್ಥಳದಲ್ಲಿ ನಿಂತು ಭಕ್ತಿಪೂರ್ಣನಾಗಿ ಬೆರಗಾಗಿ ನೋಡುತ್ತಿದ್ದನು. ಅಷ್ಟರಲ್ಲಿ ಅವನಿಗೆ ಓರ್ವ ಸ್ತ್ರೀದೇವತೆ ಗೋಚರಿಸಿದಳು. ಅವಳೇ ಹೈಮವತಿಯಾದ ಉಮಾದೇವಿ. ಸುವರ್ಣಾಭರಣಗಳನ್ನು ಧರಿಸಿ ಮಿಂಚಿನಂತೆ ಹೊಳೆಯುತ್ತಿದ್ದಳು. ಸರ್ವಜ್ಞನಾದ ಪರಮೇಶ್ವರನ ಸಂನಿಧಿಯಲ್ಲಿ ಸದಾ ಇರತಕ್ಕವಳು: ಈಶ್ವರನಾದರೋ **"ಈಶಾನಃ ಸರ್ವವಿದ್ಯಾನಾಂ ಈಶ್ವರಃ ಸರ್ವ ಭೂತಾನಾಂ"** ಉಮಾದೇವಿಯೋ ಬ್ರಹ್ಮವಿದ್ಯೆ. ದೇವೇಂದ್ರನು ಭಕ್ತಿಭಾವದಿಂದ ಅವಳಿಗೆ ಕೈಮುಗಿದು "ದೇವಿ, ಇಲ್ಲಿ ಒಬ್ಬ ಯಕ್ಷನು ಇದ್ದನಲ್ಲ, ಅವನು ಯಾರು ? ಎಂದು ಕೇಳಿದನು. ಆಗ ಉಮೆಯು—"ಆತನೇ ಪರಬ್ರಹ್ಮ, ಸಗುಣರೂಪವನ್ನು ಧರಿಸಿ, ನಿಮಗೆ ಕಾಣಿಸಿಕೊಂಡಿದ್ದಾನೆ. ಆತನ ಮಹಿಮೆಯಿಂದಲೇ ನೀವು ಅಸುರರನ್ನು ಗೆದ್ದಿರುವಿರಿ ವಿಜಯವು ಪರಬ್ರಹ್ಮನದು, ನಿಮ್ಮದಲ್ಲ"— ಎಂದಳು.

ಆಗ ದೇವೇಂದ್ರನಿಗೆ ದುರಭಿಮಾನವು ತೊಲಗಿತು, "ಪರಮಾತ್ಮನ ಕೃಪೆಯಿಂದ ನಾವು ಜಯಗಳಿಸಿದೆವು. ಅವಿವೇಕದಿಂದ ನಾವು ಅಹಂಕಾರಿಗಳಾದೆವು. ಭಗವಂತನ ಭಕ್ತವಾತ್ಸಲ್ಯವು ಅಪಾರವಾದದ್ದು. ನನ್ನ ಅಜ್ಞಾನವನ್ನು ದೂರಮಾಡಿದನು" ಎಂದು ಕೊಂಡು, ಈ ಸಂಗತಿಯನ್ನು ಅಗ್ನಿ ವಾಯುಗಳಿಗೂ ದೇವತೆಗಳಿಗೂ ತಿಳಿಸಿಕೊಟ್ಟನು. ಪರಬ್ರಹ್ಮದ ಸಮೀಪಕ್ಕೆ ಹೋದ್ದರಿಂದಲೇ ಇಂದ್ರ, ಅಗ್ನಿ, ವಾಯುಗಳು ದೇವತೆಗಳಲ್ಲಿ ಶ್ರೇಷ್ಠರೆನಿಸಿದರು. ಬ್ರಹ್ಮವಸ್ತುವನ್ನು ತಿಳಿಯಲು ಪ್ರಯತ್ನಿಸುವ ಜಿಜ್ಞಾಸುಗಳು ಮನುಷ್ಯರಲ್ಲಿ ಶ್ರೇಷ್ಠರು, ಉತ್ತಮರು. ಜ್ಞಾನಿಗಳು ಸರ್ವೋತ್ತಮರು.

**ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ ||**
**ಜ್ಞಾನೀ ತ್ವಾತ್ಮೈವ ಮೇಮತಮ್ ||**

ಭಗವದ್ಗೀತಾ.

## ೨ ನಚಿಕೇತ (ಕಠೋಪನಿಷತ್)

ಗೌತಮ ಗೋತ್ರಕ್ಕೆ ಸೇರಿದ ವಾಜಶ್ರವಸನೆಂಬ ಋಷಿಯ ಮಗ ನಚಿಕೇತ. ಅವನು ಬಾಲಕನಾಗಿದ್ದರೂ ತುಂಬ ಮೇಧಾವಿ; ವಿಚಾರಶೀಲ. ಅವನ ತಂದೆ ವಾಜಶ್ರವಸನು ಕರ್ಮಠನಾಗಿದ್ದು ಯಜ್ಞಯಾಗಾದಿಕರ್ಮಕಾಂಡದಲ್ಲಿ ನಿರತನಾಗಿದ್ದನು. ಒಂದ ಸಲ ಆ ಋಷಿ ವಿಶ್ವಜಿತ್ ಎಂಬ ಒಂದು ಯಾಗವನ್ನು ನಡೆಸಿದ. ಆ ಯಾಗದಲ್ಲಿ ತನ್ನಲ್ಲಿರುವ ಸರ್ವಸ್ವವನ್ನೂ ದಾನಮಾಡಬೇಕಾಗುತ್ತದೆ. ಆಗ ವಾಜಶ್ರವಸನು ಮಾಡಿದ ದಾನಗಳಲ್ಲಿ ಕೆಲವು ಮುದಿ ಹಸುಗಳು ಇದ್ದವು. ಅವುಗಳಿಗೆ ಸರಿಯಾಗಿ ತಿರುಗಾಡುವ ಶಕ್ತಿ ಸಹ ಇರಲಿಲ್ಲ. ಅವನ್ನು ನೋಡಿದರೆ ಹುಲ್ಲುನೀರಿನ ಋಣ ಆ ಹಸುಗಳಿಗೆ ಮುಗಿದುಹೋದಂತೆ ಕಾಣುತ್ತಿತ್ತು ! ಇನ್ನು ಅಷ್ಟು ವಯಸ್ಸಾದ ಹಸುಗಳು ಹಾಲನ್ನು ಕೊಡುತ್ತವೆಯೇ ?

ಅದನ್ನು ನೋಡಿದ ನಚಿಕೇತನ ಮನಸ್ಸಿನಲ್ಲಿ– "ಅಯ್ಯೋ ಇಂಥ ಗೋವುಗಳನ್ನು ದಾನಮಾಡಿದರೆ ಯಾವ ಫಲ ದೊರಕೀತು ? ದಾನಮಾಡತಕ್ಕವನಿಗೆ ಅನಂದ ಎಂಬ ದುಃಖಪ್ರಾಯವಾದ ಲೋಕವೇ ಪ್ರಾಪ್ತವಾಗುತ್ತದೆ," ಎಂಬ ಚಿಂತೆ ಹುಟ್ಟುತ್ತದೆ. "ನಾನು ತಂದೆಯ ಆಸ್ತಿಯಾಗಿದ್ದೇನೆ. ನನ್ನನ್ನಾದರೂ ದಾನಮಾಡಿ ತಂದೆಯು ಪುಣ್ಯವನ್ನುಗಳಿಸಲಿ" ಎಂಬ ಶ್ರದ್ಧಾಭಾವವು ಮೂಡುತ್ತದೆ. ಅವನು ತಂದೆಯ ಬಳಿಗೆ ಹೋಗಿ– "ಅಪ್ಪ ನನ್ನನ್ನೂ ದಾನಮಾಡು. ನನ್ನನ್ನು ಯಾರಿಗೆ ಕೊಡುತ್ತೀಯೆ ?" ಎಂದು ಕೇಳುತ್ತಾನೆ.. ಆ ಮುಗ್ಧ ಬಾಲಕನ ಪ್ರಶ್ನೆಗೆ ವಾಜಶ್ರವನು ಯಾವ ಉತ್ತರವನ್ನೂ ಕೊಡುವುದಿಲ್ಲ. ನಚಿಕೇತನು ಮತ್ತೆ ಮತ್ತೆ ಹೀಗೆಯೇ ಕೇಳಲಾಗಿ, ವಾಜಶ್ರವನಿಗೆ ಸಿಟ್ಟುಬಂದು– "ನಿನ್ನನ್ನು ಮೃತ್ಯುವಿಗೆ ಕೊಡುತ್ತೇನೆ" ಎಂದು ಹೇಳಿಬಿಡುತ್ತಾನೆ ! ಅವನು ಸುಲಭವಾಗಿ ಕೋಪಗೊಳ್ಳುವ ದುಡುಕಿನ ಸ್ವಭಾವದವನೆಂದು ಕಾಣುತ್ತದೆ.

ಆಗ ನಚಿಕೇತನು "ನನ್ನ ತಂದೆ ನನ್ನನ್ನು ಯಮನಿಗೆ ಕೊಡುತ್ತಾನೆ. ತಂದೆಯ ಮಾತು ಸುಳ್ಳಾಗದು. ಆದರೆ, ಯಮನಿಗೆ ನನ್ನಿಂದ ಯಾವ ಪ್ರಯೋಜನಉಂಟು ? ಪ್ರತಿದಿನವೂ ಜನರು ಸತ್ತು ಯಮನ ಬಳಿಗೆ ಹೋಗುತ್ತಲೇ ಇದ್ದಾರೆ ! ಮುಂದೆ ಹೋಗಲಿರುವ ಬಹು ಜನರಲ್ಲಿ ಈಗ ನಾನು ಮೊದಲನೆಯವನಾದೇನು. ಹಿಂದೆ ಹೋಗಿರ ತಕ್ಕವರನ್ನು ಗಣಿಸಿದಾಗ ನಾನು ಮಧ್ಯಮನಾಗುತ್ತೇನೆ. ನನ್ನನ್ನು ದಾನಮಾಡಿದ್ದರಿಂದ ಯಮನಿಗೆ ಆಗುವ ಉಪಕಾರವೇನು?"– ಎಂದು ಆಲೋಚಿಸುತ್ತಾನೆ. ಅಷ್ಟರಲ್ಲಿ ವಾಜಪ್ರವಸನಿಗೆ ತಾನು ಆಡಿದ ಮಾತಿಗಾಗಿ ಬಹಳ ಪಶ್ಚಾತ್ತಾಪವಾಗುತ್ತದೆ. ಮಗನನ್ನು ಮೃತ್ಯುವಿಗೆ ಕೊಡುತ್ತೇನೆ ಎಂದುಬಿಟ್ಟೆನಲ್ಲ–ಎಂದು ಅತೀವ ವಿಷಣ್ಣನಾಗು

ತ್ತಾನೆ. ಆಗ ನಚಿಕೇತನು ತಂದೆಗೆ ಹೇಳುವ ಸಾಂತ್ವನ ವಾಕ್ಯವಿದು – "ಅಪ್ಪ, ಇದಕ್ಕಾಗಿ ವ್ಯಥೆಪಡಬೇಡ. ಒಂದಲ್ಲ ಒಂದು ದಿನ ಎಲ್ಲರೂ ಮೃತ್ಯುವಶರಾಗಲೇಬೇಕು ನಿನ್ನ ತಂದೆ–ಅಜ್ಜ ಮೊದಲಾದವರು ಹೀಗೆಯೇ ಹೋದರೆಂಬುದನ್ನೂ, ಮುಂದಿನವರೂ ಹಾಗೆಯೇ ಹೋಗುತ್ತಾರೆಂಬುದನ್ನೂ ಗಮನಿಸು. ಸಸ್ಯದ ತೆ ಮನುಷ್ಯನು ಜೀರ್ಣನಾಗಿ ಸಾಯುತ್ತಾನೆ. ಕಾಲಬಂದಾಗ ಮತ್ತೆ ಸಸ್ಯದಂತೆ ಹುಟ್ಟಿ ಬರುತ್ತಾನೆ." ನಚಿಕೇತನು ಷ್ಟು ವಿಚಾರ ಪರನೆಂಬುದು ಇದರಿಂದ ಗೊತ್ತಾಗುತ್ತದೆ.

ಅನಂತರ ನಚಿಕೇತನು ತಂದೆಯ ಮಾತಿನಂತೆ ಯಮಲೋಕಕ್ಕೆ ಹೋಗುತ್ತಾನೆ. ಅವನು ಹೋದದ್ದು ಹೇಗೆ ಎಂಬುದು ನಮಗೆ ಸರಿಯಾಗಿ ತಿಳಿಯುವುದಿಲ್ಲ. ಬಹುಶಃ ವಾಜಶ್ರವಸ ಋಷಿಯು ತನ್ನ ತಪೋಬಲದಿಂದ ಕಳುಹಿಸಿರಬಹುದು. ಅವನು ಸಶರೀರನಾಗಿಯೇ ಹೋದದ್ದರಿಂದ ಅದೊಂದು ವಿಶೇಷ ಘಟನೆಯಾಗಿರಬೇಕು. ಅವನು ಮೃತನಾಗಿ ಹೋಗದ ಪ್ರಯುಕ್ತ ಯಮದೂತರ ಕಟ್ಟಿಗೆ ಸಿಕ್ಕದೆ ನೇರವಾಗಿ ಯಮನ ಅರಮನೆಗೆ ಹೋಗುತ್ತಾನೆ. ಯಮನು ಮನೆಯಲ್ಲಿರುವುದಿಲ್ಲ. ಅತಿಥಿಯಾಗಿ ಬ್ರಾಹ್ಮಣನು ಬಂದನೆಂದು ಯಮನ ಪರಿಚಾರಕರು ಅವನನ್ನು ಉಪಚರಿಸಲು ಬರುತ್ತಾರೆ. ನಚಿಕೇತನು ಅನ್ನಪಾನಾದಿಗಳನ್ನು ಸ್ವೀಕರಿಸದೆ ಉಪವಾಸವಿರುತ್ತಾನೆ. ಮೂರು ರಾತ್ರಿಗಳು ಹೀಗೆ ಕಳೆದ ಮೇಲೆ ಯಮನು ಮನೆಗೆ ಹಿಂದಿರುತ್ತಾನೆ.

ಅವನ ಅಮಾತ್ಯರು ಯಮನನ್ನು ಕುರಿತು– "ಹೇವೈವಸ್ವತ,ಒಬ್ಬ ಬ್ರಾಹ್ಮಣನು ಅತಿಥಿಯಾಗಿ ನಿನ್ನ ಮನೆಗೆ ಬಂದಿದ್ದಾನೆ. ಅತಿಥಿಯೆಂದರೆ ಸಾಕ್ಷಾತ್ ವೈಶ್ವಾನರಾಗ್ನಿಯಿದ್ದಂತೆ, ಮೂರು ರಾತ್ರಿಗಳು ಉಪವಾಸವಿದ್ದಾನೆ. ಅವನಿಗೆ ಪಾದ್ಯಾದಿಗಳನ್ನಿತ್ತು ಉಪಚರಿಸು" ಎಂದು ಹೇಳಿದರು. ಒಡನೆಯೆ ಯಮನು ಅರ್ಘ್ಯಪಾದ್ಯಾದಿಗಳನ್ನು ತೆಗೆದುಕೊಂಡು ಹೋಗಿ ನಚಿಕೇತನನ್ನು ಉಪಚರಿಸಿದನು. ಅನಂತರ, "ಹೇ ಬ್ರಾಹ್ಮಣ, ನಮಸ್ಕಾರ ಯೋಗ್ಯನಾದ ಅತಿಥಿ ನೀನು. ಇದೋ ನಿನಗೆ ನಮಸ್ಕರಿಸುತ್ತೇನೆ. ನನಗೆ ಒಳ್ಳೆಯದಾಗಲೆಂದು ನೀನು ಹರಸು. ನನ್ನ ಮನೆಯಲ್ಲಿ ಮೂರು ದಿನಗಳವರೆಗೆ ನೀನು ಉಪವಾಸವಿರುವಂತಾಯಿತಲ್ಲವೇ? ಅದಕ್ಕಾಗಿ ವ್ಯಥೆಪಡುತ್ತೇನೆ. ಅದರ ಪರಿಹಾರಕ್ಕಾಗಿ ಮೂರು ವರಗಳನ್ನು ನಿನಗೆ ಕೊಡುತ್ತೇನೆ. ಇಷ್ಟ ಬಂದ ವರಗಳನ್ನು ಕೇಳಿಕೋ" ಎಂದು ನುಡಿದನು.

ಯಮನನ್ನು ಮೃತ್ಯುದೇವತೆ ಎನ್ನುತ್ತಾರೆ. ಅವನು ಕ್ರೂರಿಯೆಂದು ಜನರು ತಿಳಿದು ಕೊಂಡಿರುವುದು ಸರಿಯಲ್ಲ. ಅವನು ಧರ್ಮರಕ್ಷಣೆಯ ಅಧಿಕಾರಿ. ಪಾಪ ಕರ್ಮಿಗಳನ್ನು ದಂಡಿಸುವುದು ಅವನ ಕರ್ತವ್ಯ. ಯಮನಿಗೆ ಧರ್ಮರಾಜನೆಂಬ ಹೆಸರಿದೆ. ಪಾಪಕರ್ಮಿಗಳಿಗೆ ಶಿಕ್ಷೆಯನ್ನಿತ್ತು ಧರ್ಮವನ್ನು ಸಂರಕ್ಷಿಸತಕ್ಕವನು ಧರ್ಮ ರಾಜ. ಅಲ್ಲದೆ ಆತನು ಬ್ರಹ್ಮಜ್ಞಾನಿ. ಅವನನ್ನು ಬ್ರಹ್ಮವಿದ್ಯಾಚಾರ್ಯನೆಂದು

ಶ್ರೀ ಶಂಕರಾಚಾರ್ಯರು ಗೌರವಿಸಿದ್ದಾರೆ. ಆತ್ಮಜ್ಞಾನಿಯಾದರೂ ವಸಿಷ್ಠನಾರದಾದಿಗಳಂತೆ ಆಧಿಕಾರಿಕ ಪುರುಷನಾಗಿ, ಈಶ್ವರನ ಆಜ್ಞೆಯಂತೆ, ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾನೆಂದುತಿಳಿಯಬೇಕು.

ಆಗ ನಚಿಕೇತನು ಕೇಳಿಕೊಂಡ ಮೊದಲನೆಯ ವರ ಇದು– "ಯಮರಾಜ, ನನ್ನ ತಂದೆಯು ಚಿಂತಾಕ್ರಾಂತನಾಗಿ ನನ್ನ ಪುತ್ರನ ಗತಿ ಏನಾಗಿರಬಹುದೆಂದು ಪರಿತಪಿಸುತ್ತಿದ್ದಾನೆ. ಅವನ ಮನಸ್ಸಿಗೆ ಶಾಂತಿಯೊದಗಿ, ಚಿತ್ತವು ಪ್ರಸನ್ನವಾಗಿರಲಿ. ನೀನು ಒಂದು ವೇಳೆ ಭೂಲೋಕಕ್ಕೆ ಹಿಂದಿರುಗುವಂತೆ ನನ್ನನ್ನು ಕಳುಹಿಸಿದ ಪಕ್ಷದಲ್ಲಿ, ಆತನು ನನ್ನನ್ನು ಗುರುತಿಸಿ ಸ್ವಾಗತಿಸಿ ಪ್ರೀತಿಯಿಂದ ಮಾತಾಡುವಂತಾಗಲಿ, ನನ್ನ ತಂದೆಯ ಕೋಪ ಸ್ವಭಾವವು ಹೋಗಬೇಕು. ಇದು ನಾನು ಕೇಳತಕ್ಕ ಮೊದಲನೆಯ ವರ–" ಎಂದನು. ಅದಕ್ಕೆ ಯಮನು – "ಆಗಬಹುದು ನಚಿಕೇತ. ನಿನ್ನ ತಂದೆ ವಾಜಶ್ರವಸನು ಚಿತ್ತಶಾಂತಿಯನ್ನು ಪಡೆದು ರಾತ್ರಿಯಲ್ಲಿ ಸುಖವಾಗಿ ನಿದ್ರಿಸುವನು. ಅವನ ಕೋಪ ಸ್ವಭಾವ ತೊಲಗುವುದು. ನಿನ್ನನ್ನು ನಿನ್ನ ತಂದೆಯ ಮನೆಗೆ ವಾಪಸು ಕಳಿಸುವುದು ನನ್ನ ಉದ್ದೇಶವಾಗಿದೆ. ನಿನ್ನನ್ನು ಅವನು ಗುರುತಿಸಿ ಸ್ವಾಗತಿಸುತ್ತಾನಲ್ಲದೆ, ಪ್ರೀತಿಯಿಂದ ನಿನ್ನೊಡನೆ ಮಾತಾಡುವನು. ಈ ವರವನ್ನು ಸಲ್ಲಿಸಿದ್ದೇನೆ. ಇನ್ನು ಎರಡನೆಯ ವರವನ್ನು ಕೇಳಿಕೋ" ಎಂದನು. ತಂದೆಯು ಪ್ರಸನ್ನ ಚಿತ್ತನಾದನೆಂಬುದನ್ನು ತಿಳಿದ ನಚಿಕೇತನು ಸಂತುಷ್ಟನಾಗಿ "ಹೇ ಮೃತ್ಯುದೇವ, ಸ್ವರ್ಗಲೋಕದಲ್ಲಿ ರೋಗಾದಿ ಭಯ ಯಾವುದೂ ಇಲ್ಲವೆಂದು ಕೇಳಿದ್ದೇನೆ. ಅಲ್ಲಿರತಕ್ಕವರಿಗೆ ಮುಪ್ಪು ಬರುವುದಿಲ್ಲ. ಅಲ್ಲಿ ನಿನ್ನಿಂದ ಮರಣಭಯವೂ ಇಲ್ಲ. ಹಸಿವು-ಬಾಯಾರಿಕೆಗಳು ಅಲ್ಲಿ ಪೀಡಿಸುವುದಿಲ್ಲವಂತೆ. ಸ್ವರ್ಗಕ್ಕೆ ಹೋದವರು ಶೋಕರಹಿತರಾಗಿ ಆನಂದದಲ್ಲಿರುತ್ತಾರೆಂದು ಹೇಳುತ್ತಾರೆ. ಯಮದೇವ ಸ್ವರ್ಗಪ್ರಾಪ್ತಿಕರವಾದ ಯಾವ ಹೋಮವನ್ನು ಯಾವ ಅಗ್ನಿಯಲ್ಲಿ ಮಾಡಬೇಕೆಂಬುದನ್ನು ನೀನು ಬಲ್ಲೆ. ಸ್ವರ್ಗಲೋಕಕ್ಕೆ ಹೋಗಿ ದೇವತೆಗಳಾಗುವ ವಿಧಾನವಾವುದೆಂದು ನಿನಗೆ ಗೊತ್ತಿದೆ. ಆ ವಿಧಿಯನ್ನು ತಿಳಿಯಬೇಕೆಂಬ ಆಸಕ್ತಿ ನನಗೆ ಹುಟ್ಟಿದೆ. ಅದನ್ನು ಕೃಪೆಯಿಂದ ನನಗೆ ತಿಳಿಸಿಕೊಡು. ಇದು ನನ್ನ ಎರಡನೆಯ ವರ" ಎಂದನು.

ಯಮನು ಇಂತೆಂದನು–ನಚಿಕೇತ ಈ ವಿಧಾನವನ್ನು ಹೇಳುವೆನು. ಗಮನವಿಟ್ಟು ಕೇಳು. ಸ್ವರ್ಗಪ್ರಾಪ್ತಿಕರವಾದ ಈ ಅಗ್ನಿಯು ಜಗದಾದಿಯಾದ ವಿರಾಟ್ ಸ್ವರೂಪವೆಂದು ತಿಳಿ. ಪ್ರಥಮ ಶರೀರಿಯಾದ ವಿರಾಟ್ ಪುರುಷನು ಅಗ್ನಿ, ವಾಯು, ಆದಿತ್ಯರೂಪಗಳಿಂದ ವ್ಯವಸ್ಥಿತನಾಗಿದ್ದಾನೆ." ಹೀಗೆ ನುಡಿದು ಹೋಮಾರ್ಥವಾಗಿ ಬೇಕಾದ ಇಷ್ಟಕಗಳು, ಹೋಮಕುಂಡದ ರಚನೆ, ಅಗ್ನಿಚಯನ, ಆಹುತಿಗಳ ಪ್ರಕಾರ– ಇವೆಲ್ಲವನ್ನೂ ಆಯಾ ಮಂತ್ರಗಳನ್ನು ಹೇಳಿಕೊಟ್ಟನು. ಅದೆಲ್ಲವನ್ನೂ ತಾನು ಚೆನ್ನಾಗಿ ಗ್ರಹಿಸಿದ್ದೇನೆಂದು ತೋರಿಸುವುದಕ್ಕಾಗಿ ನಚಿಕೇತನು, ಯಮನು ಬೋಧಿಸಿದ

ಎಲ್ಲ ವಿವರಗಳನ್ನೂ ತಾನು ಪುನರುಚ್ಚರಿಸಿ ಪಾಠ ಒಪ್ಪಿಸಿದನು. ಮಹಾತ್ಮನಾದ ಯಮನಿಗೆ ಅದರಿಂದ ಬಹಳ ಸಂತೋಷವಾಯಿತು. ಅವನು "ನಚಿಕೇತ, ನಾಲ್ಕನೆಯ ದಾಗಿ ಇನ್ನೊಂದು ವರವನ್ನು ನಾನಾಗಿ ಕೊಟ್ಟು ಬಿಡುತ್ತೇನೆ. ಈ ಅಗ್ನಿಯು ನಿನ್ನ ಹೆಸರಿನಿಂದಲೇ ಲೋಕದಲ್ಲಿ ನಾಚಿಕೇತಾಗ್ನಿಯೆಂದು ಪ್ರಸಿದ್ಧವಾಗಲಿ ! ಈ ಅಗ್ನಿಚಯನ ವನ್ನು ಶಾಸ್ತ್ರೋಕ್ತವಾಗಿ ಮೂರು ಸಲ ಮೂರು ಪ್ರಕಾರಗಳಿಂದೊಡಗೂಡಿ ಯಾವನು ನಡೆಸುತ್ತಾನೋ ಅವನು "ತ್ರಿಣಾಚಿಕೇತ" ಎನಿಸಿಕೊಳುತ್ತಾನೆ. ಅವನಿಗೆ ಮೃತ್ಯು ಭಯವಿಲ್ಲ. ಚಿರಶಾಂತಿಯು ದೊರೆಯುವುದು. ಅವನು ವಿರಾಟ್‌ಸ್ವರೂಪ ವನ್ನರಿತು ಸರ್ವಜ್ಞನೆನಿಸಿ ವೈರಾಜ ಲೋಕದಲ್ಲಿ ಆನಂದದಿಂದ ನೆಲಸುವನು. ನಚಿಕೇತ ಪಾರಿತೋಷಕವಾಗಿ ಈ ರತ್ನಹಾರವನ್ನು ಸ್ವೀಕರಿಸು. ಇದು ನಾನಾಗಿ ಕೊಟ್ಟ ವರವಾಯಿತು. ಇನ್ನು ನಿನ್ನ ಮೂರನೆಯ ವರವನ್ನು ಕೇಳಿಕೋ" ಎಂದನು.

ಮುಂದೆ ಬರುವುದು ಕಠೋಪನಿಷತ್ತಿನ ಸಾರವಾದ ಭಾಗ. ತನ್ನ ಒಂದು ಪ್ರಶ್ನೆಗೆ ಉತ್ತರವನ್ನು ಹೇಳಬೇಕೆಂಬುದೇ ನಚಿಕೇತನು ಕೇಳಿಕೊಂಡ ವರ. ಅವನ ಪ್ರಶ್ನೆಯು ಯಮನಿಗೆ ಆಶ್ಚರ್ಯವನ್ನುಂಟು ಮಾಡುತ್ತದೆ. ಆ ಪ್ರಶ್ನೆಗೆ ಉತ್ತರ ವನ್ನು ಹೇಳಲು ಇಷ್ಟಪಡದೆ, ಬೇರೆ ಯಾವುದಾದರೂ ವರವನ್ನು ಕೇಳಿಕೊಳ್ಳುವಂತೆ ನಚಿಕೇತನಿಗೆ ಹೇಳುತ್ತಾನೆ. ನಾನಾ ಪ್ರಲೋಭನೆಗಳನ್ನು ಒಡ್ಡುತ್ತಾನೆ. ನಚಿಕೇತನು ಯಾವುದಕ್ಕೂ ಜಗ್ಗದೆ, ಆ ವರವನ್ನೇ ಸಲ್ಲಿಸಬೇಕೆಂದು ಪಟ್ಟು ಹಿಡಿಯುತ್ತಾನೆ. ಯಮ ನನ್ನು ಅವನ ಮಾತಿಗೇ ಕಟ್ಟುಹಾಕಿ. ಉತ್ತರವನ್ನು ಹೇಳಿಸುತ್ತಾನೆ. ಈ ಸಂದರ್ಭ ದಲ್ಲಿ ಅವರಿರ್ವರಿಗೆ ನಡೆದ ಸಂಭಾಷಣೆಯು ರೋಚಕವಾಗಿದೆ.

**ನಚಿಕೇತ :** ಮನುಷ್ಯನು ಸತ್ತಮೇಲೆ ಅವನ ಕಥೆ ಮುಗಿಯಿತು. ಅವನು ಇನ್ನೂ ಇರುವುದಿಲ್ಲ–ಎಂದು ಕೆಲವರು ಹೇಳುತ್ತಾರೆ. ಸಾಯುವುದು ದೇಹ. ದೇಹಾತಿರಿಕ್ತ ವಾದ ಜೀವಾತ್ಮನು ಇದ್ದೇ ಇರುತ್ತಾನೆ–ಎಂದು ಇತರರು ಹೇಳುತ್ತಾರೆ. ಇದೊಂದು ದೊಡ್ಡ ಸಂಶಯದ ವಿಷಯವಾಗಿದೆ. ಇದರ ಸತ್ಯಾಂಶವನ್ನು ನಿನ್ನಿಂದ ತಿಳಿಯಲು ಬಯಸುತ್ತೇನೆ. ಇದೇ ನನ್ನ ಮೂರನೆಯ ವರ.

ಇಲ್ಲಿ ಒಂದು ವಿಷಯವನ್ನು ನಾವು ಗಮನಿಸಬೇಕು. ಹಿಂದೆ ನಚಿಕೇತನು ಯಮ ಲೋಕ, ಸ್ವರ್ಗಲೋಕಗಳ ವಿಷಯದಲ್ಲಿ ವಿಶ್ವಾಸವನ್ನಿಟ್ಟೇ ಮಾತನಾಡಿದ್ದಾನೆ. ಆದ್ದ ರಿಂದ ದೇಹಾತಿರಿಕ್ತನಾದ ಜೀವನ ಪರಮಾರ್ಥ ಸ್ವರೂಪವೇನೆಂದು ತಿಳಿಯುವುದೇ ಅವನ ಪ್ರಶ್ನೆಯ ಮುಖ್ಯ ಉದ್ದೇಶವಾಗಿರುತ್ತದೆ. ಮುಂದೆ ಯಮಧರ್ಮನು ಹೇಳುವ ಉತ್ತರದಿಂದಲೂ ಇದು ದೃಢವಾಗುತ್ತದೆ. ದೇಹಕ್ಕಿಂತ ಬೇರೆಯಾಗಿ ಆತ್ಮನಿದ್ದಾನೆ– ಎಂದಿಷ್ಟೇ ಹೇಳುವುದಾದರೆ, ಅದೇನೂ ಗೋಪ್ಯವಾದ ವಿಷಯವಾಗುತ್ತಿರಲಿಲ್ಲ.

**ಯಮ :** ಈ ವಿಷಯದಲ್ಲಿ ದೇವತೆಗಳಿಗೆ ಸಹ ಸಂಶಯವಿದೆ. ಅದನ್ನು ತಿಳಿಯಲು

ಅವರೂ ಪ್ರಯತ್ನಿಸುತ್ತಿದ್ದಾರೆ. ಆತ್ಮವಿಚಾರ ಬಹಳ ಸೂಕ್ಷ್ಮವಾದುದ್ದು. ಹಾಗೆಲ್ಲ ತಿಳಿಯುವಂತಹುದಲ್ಲ. ನಚೀಕೇತ ಬೇರೆಯ ವರವನ್ನು ಕೇಳಿಕೋ. ಇದಕ್ಕಾಗಿ ಒತ್ತಾಯ ಮಾಡಬೇಡ.

**ನಚೀಕೇತ :—**ಯಮರಾಜ, ದೇವತೆಗಳೂ ಈ ವಿಷಯವನ್ನು ತಿಳಿಯಲು ಬಯಸು ತ್ತಾರಲ್ಲವೇ ? ಆತ್ಮವಿಚಾರವು ದುಜ್ಞೇಯವೆಂದು ನೀನೇ ಹೇಳುತ್ತಿದ್ದೀಯೆ ಮೃತ್ಯು ದೇವತೆಯಾದ ನೀನಲ್ಲದೆ ಈ ಮರಣೋತ್ತರ ವಿಚಾರವನ್ನು ತಿಳಿಸಿಕೊಡತಕ್ಕ ವರು ಇನ್ನು ಯಾರಿದ್ದಾರೆ ? ಇದಕ್ಕಿಂತ ಉತ್ತಮವಾದ ಇನ್ನೊಂದು ವರವೇ ಇಲ್ಲ!

**ಯಮ :—**ಪೂರ್ಣಾಯಸ್ಸನ್ನು ಪಡೆದು ನೂರು ವರ್ಷಗಳ ಕಾಲ ಬಾಳುವ ಪುತ್ರ ಪೌತ್ರರನ್ನು ಕೇಳಿಕೋ, ಬೇಕಾದಷ್ಟು ದನ ಕರುಗಳನ್ನೂ ಆನೆ ಕುದುರೆಗಳನ್ನೂ ಕೊಡುವೆನು. ನೀನು ಬಯಸುವಷ್ಟು ಐಶ್ವರ್ಯವನ್ನು ನೀಡುವೆನು. ಭೂಲೋಕ ದಲ್ಲಿ ವಿಶಾಲವಾದ ಭವನವನ್ನು ವಾಸಕ್ಕಾಗಿ ಕೊಡುವೆನು. ಎಷ್ಟು ವರ್ಷಗಳವರೆಗೆ ನೀನು ಜೀವಿಸಲು ಅಪೇಕ್ಷಿಸುತ್ತೀಯೋ ಅಷ್ಟು ವರ್ಷಗಳವರೆಗೆ ದೀರ್ಘಾಯುಸ್ಸನ್ನು ಪಡೆದು ಬಾಳುತ್ತಿರು. ನಚಿಕೇತ, ಇದೇ-ರೀತಿಯಲ್ಲಿ ನಿನಗೆ ಏನೇನು ಬೇಕೋ ಅದೆಲ್ಲ ವನ್ನೂ ಕೇಳಿಕೋ. ನಿಶ್ಚಯವಾಗಿ ಕೊಡುತ್ತೇನೆ. ಪೃಥ್ವಿಯಲ್ಲಿ ಮಹಾರಾಜನಾಗಿ ದಿವ್ಯಭೋಗಗಳನ್ನು ಅನುಭವಿಸುತ್ತಿಯೋ ? ಆಗಬಹುದು ; ಸತ್ಯವಾಗಿಯೂ ಈ ವರ ವನ್ನು ಸಲ್ಲಿಸುತ್ತೇನೆ. ಭೂಲೋಕದಲ್ಲಿ ದುರ್ಲಭವಾದ ಯಾವ ಯಾವ ಭೋಗ ಸಾಮಗ್ರಿಗಳಿವೆಯೋ ಅವನ್ನು ನೀನು ಯಥೇಚ್ಛವಾಗಿ ಕೇಳಿಕೊಳ್ಳಬಹುದು. ಇಲ್ಲಿ ನೋಡು ಸುಂದರಿಯರಾದ ಈ ಅಪ್ಸರ ಸ್ತ್ರೀಯರನ್ನು, ದಿವ್ಯರಥಗಳನ್ನು, ಗಾಂಧರ್ವ ಗಾನವಾದ್ಯಗಳನ್ನು ; ಮನುಷ್ಯರಿಗೆ ಇವು ಎಂದಿಗೂ ದೊರಕತಕ್ಕವುಗಳಲ್ಲ. ಇವನ್ನು ನಿನಗೆ ಕೊಡುತ್ತೇನೆ. ಯಥೇಷ್ಟವಾಗಿ ಅನುಭವಿಸು. ಆದರೆ, ನಚೀಕೇತ, ಮರಣದ ವಿಷಯವನ್ನು ಮಾತ್ರ ಕೇಳಬೇಡ.

**ನಚಿಕೇತ :—** ಹೇ ಸ್ವಾಮಿ, ಅಂತಕ, ಇದೆಲ್ಲವೂ ಇಂದು ಇದ್ದು ನಾಳೆ ಹೋಗ ತಕ್ಕವು ; ಈ ಭೋಗ ಸಾಮಗ್ರಿಗಳಿಂದ ಏನಾದೀತು ? ಇಂದ್ರಿಯ ಶಕ್ತಿಗಳನ್ನೆಲ್ಲ ಇವು ಉಡುಗಿಸಿ ಬಿಡುತ್ತದೆ. ಧರ್ಮ, ವೀರ್ಯ, ಬುದ್ಧಿ, ತೇಜಸ್ಸು, ಕೀರ್ತಿಗಳನ್ನು ಹಾಳು ಮಾಡತಕ್ಕವುಗಳು ಇವು. ಎಷ್ಟು ಆಯುಸ್ಸಿದ್ದರೇನು ? ಬ್ರಹ್ಮನ ಆಯುಸ್ಸು ಕೂಡ ಅಲ್ಪವೇ. ಈ ದಿವ್ಯ ರಥಗಳೂ, ನೃತ್ಯಾದಿಗಳೂ ನಿನ್ನ ಬಳಿಯಲ್ಲಿಯೇ ಇರಲಿ! ಯಮರಾಜ ! ಮನುಷ್ಯನಿಗೆ ಹಣದಿಂದ ಎಂದಿಗಾದರೂ ತೃಪ್ತಿಯಾದೀತೇ ? ಮಹಾತ್ಮನಾದ ನಿನ್ನನ್ನು ಕಂಡ ಮೇಲೆ ಎಲ್ಲ ಬಗೆಯ ಐಶ್ವರ್ಯವೂ ನಮಗೆ ದೊರಕಿ ದಂತೆಯೇ ಸರಿ. ಮೃತ್ಯು ಲೋಕದಲ್ಲಿ ನೀನು ಪ್ರಭುವಾಗಿರುವಾಗ ನಿನ್ನನ್ನು ಸಾಕ್ಷಾತ್ಕರಿಸಿಕೊಂಡವನು ಅಲ್ಪಾಯುಷ್ಕನಾಗುತ್ತಾನೆ. ಇಷ್ಟಾಗಿ ಅತಿ ದೀರ್ಘಕಾಲ ಮನುಷ್ಯನು ಬದುಕಿದ್ದರೆ ಅದರಲ್ಲಿ ಯಾವ ಸಂತೋಷವಿದ್ದೀತು ?

ಆದ್ದರಿಂದ, ಅನಿತ್ಯವಾದ ಈ ವಸ್ತುಗಳನ್ನು ನಾನು ಎಂದಿಗೂ ಬಯಸತಕ್ಕವನಲ್ಲ. ಪರಲೋಕದ ವಿಷಯವಾಗಿ ಆತ್ಮಜ್ಞಾನದ ನಿರ್ಣಯವೇನುಂಟೋ ಅದನ್ನು ನನಗೆ ಉಪದೇಶಿಸು.

ಈ ಸಂಭಾಷಣೆಯಿಂದ, ನಚೀಕೇತನಿಗೆ ಆತ್ಮಜ್ಞಾನವನ್ನು ಪಡೆಯಲು ಎಂತಹ ಶ್ರದ್ಧಾದರಗಳಿದ್ದವು–ಎಂಬುದು ಗೋಚರವಾಗುತ್ತದೆ. ಇಹಾಮುತ್ರಾರ್ಥ ಫಲಭೋಗ ವಿರಾಗ್ರ ಎಂಬುದು ಶಿಷ್ಯನಿಗಿರಬೇಕಾದ ಅಧಿಕಾರ ಸಂಪತ್ತು, ಇಹಲೋಕ–ಪರಲೋಕಗಳ ಸುಖದಲ್ಲಿ ತೀವ್ರವಾದ ವೈರಾಗ್ಯವೇ ಅದು. ಇಂದ್ರಿಯ ಚಾಪಲ್ಯದಿಂದಾಗುವ ಈ ಸುಖವನ್ನು ಪ್ರೇಯಸ್ಸು ಎನ್ನುತ್ತದೆ. ನಚಿಕೇತನಿಗೆ ಪ್ರೇಯಸ್ಸು ಬೇಕಾಗಿಲ್ಲ. ಅವನಿಗೆ ಬೇಕಾದದ್ದು ಶ್ರೇಯಸ್ಸು. ಅದೇ ಮೋಕ್ಷನೆಂಬ ಪರಮ ಪುರುಷಾರ್ಥ. ಮೊದಲು ಸ್ವರ್ಗಫಲವನ್ನು ಕೊಡುವ ನಾಚಿಕೇತಾಗ್ನಿಯ ವಿಷಯವಾಗಿ ಆತನು ಕೇಳಿದ್ದು ಸ್ವರ್ಗವನ್ನು ಬಯಸುವ ಸಾಮಾನ್ಯ ಜನರ ಹಿತಕ್ಕಾಗಿ, ತನಗಾಗಿ ಅಲ್ಲ.

ಶಿಷ್ಯನನ್ನು ಪರೀಕ್ಷಿಸಿದ್ದಾಯಿತು. ಅವನು ಬ್ರಹ್ಮವಿದ್ಯೆಗೆ ಅಧಿಕಾರಿ ಎಂಬುದು ನಿಶ್ಚಿತವಾದ ಮೇಲೆ, ಬ್ರಹ್ಮವಿದ್ಯಾಚಾರ್ಯನಾದ ಯಮಧರ್ಮ ರಾಜನು ಆತ್ಮನ ಪಾರಮಾರ್ಥಿಕ ಸ್ವರೂಪವನ್ನು ತಿಳಿಸಿಕೊಡುತ್ತಾನೆ. ಆತನ ಉಪದೇಶವನ್ನು ಪ್ರಕೃತದಲ್ಲಿ ಹೀಗೆ ಸಂಗ್ರಹಿಸಬಹುದು.

"ದೇಹಾತಿರಿಕ್ತನಾದ ಜೀವಾತ್ಮನಿದ್ದಾನೆ. ಅವನು ಅಜ್ಞಾನದಿಂದ ಕರ್ಮಬಂಧಕ್ಕೆ ಒಳಗಾಗಿ, ಕರ್ಮಾನುಗುಣವಾದ ದೇಹಾಂತರವನ್ನು ಪಡೆಯುತ್ತಾನೆ. ಪರಲೋಕವಿಲ್ಲವೆಂದು ಯಾವನು ತಿಳಿಯುತ್ತಾನೋ, ಅವನು ಮತ್ತೆ ಮತ್ತೆ ನನ್ನ (ಯಮನ) ವಶಕ್ಕೆ ಬರುತ್ತಲೇ ಇರುತ್ತಾನೆ. ಇವೆಲ್ಲವೂ ಅವಿದ್ಯಾ ಸ್ಥಿತಿಯಲ್ಲಿ ನಡೆಯತಕ್ಕದ್ದು. ಆತ್ಮನು ನಿತ್ಯನೂ ಸರ್ವವ್ಯಾಪಿಯೂ ಆಗಿದ್ದಾನೆ. ಅವನು ಸಾಕ್ಷಿಯಾಗಿ ಸರ್ವರ ಹೃದಯದಲ್ಲಿಯೂ ನೆಲೆಸಿದ್ದಾನೆ. ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳು ಯಾವುವೂ ಅವನಿಗಿಲ್ಲ. ಸೂಕ್ಷ್ಮದರ್ಶಿಗಳಾದ ಜ್ಞಾನಿಗಳಿಗೆ ಮಾತ್ರ ಆತನು ಗೋಚರಿಸತಕ್ಕವನು. ಸಮಸ್ತ ವೇದಗಳೂ ಆತ್ಮನನ್ನೇ ಸ್ತುತಿಸುತ್ತವೆ. ಆತ್ಮನು **"ಅಣೋರಣೀಯಾನ್ ಮಹತೋಮಹೀಯಾನ್"**. ಪರಮಾರ್ಥದಲ್ಲಿ ಆತನಿಗೆ ಸಂಸಾರದ ಲೇಪವಿಲ್ಲ. ತರ್ಕಕ್ಕೆ ಆತ್ಮನು ಗೋಚರಿಸತಕ್ಕವನಲ್ಲ. ಯಾರು ಪರಮಾತ್ಮನ ಅನುಗ್ರಹವನ್ನು ಸಂಪಾದಿಸುತ್ತಾರೋ, ಅವರಿಗೆ ಮಾತ್ರ ಲಭ್ಯ" ಇತ್ಯಾದಿ.

ಹೀಗೆ ನಚಿಕೇತನು ಯಮರಾಜನ ಬೋಧನೆಯಿಂದ ಬ್ರಹ್ಮ ವಿದ್ಯೆಯನ್ನು ಪಡೆದು ಬ್ರಹ್ಮಜ್ಞಾನಿಯಾಗಿ ಮುಕ್ತನಾದನು. ಈ ಪ್ರಕಾರದಲ್ಲಿ ಯಾರು ಬ್ರಹ್ಮಜ್ಞಾನವನ್ನು ಗಳಿಸುತ್ತಾರೋ ಅವರು ಜನನ–ಮರಣಗಳಿಂದ ಬಿಡುಗಡೆ ಹೊಂದಿ ಮುಕ್ತರಾಗುತ್ತಾರೆ.

## 3. ಉಷಸ್ತಿ (ಛಾಂದೋಗ್ಯ)

ಒಂದು ಸಲ ಕುರುದೇಶದಲ್ಲಿ ಬರಗಾಲವು ಬಂದಿತು. ಬೆಳೆಯೆಲ್ಲವೂ, ಮಟಚೀಹತ ವಾಗಿದ್ದಿತು. ಮಟಚೀಯೆಂದರೆ, ಸಿಡಿಲು ಅಥವಾ ಆಲಿಗಲ್ಲಿನ ಮಳೆ. ಅದರಿಂದ ಬೆಳೆಯು ನಾಶವಾಗಿತ್ತು. ಆ ದೇಶದ ಪ್ರದ್ರಾಣಕವೆಂಬ ಕುಗ್ರಾಮದಲ್ಲಿ ಉಷಸ್ತಿ ಯೆಂಬ ಬ್ರಹ್ಮಜ್ಞಾನಿಯಾದ ವಿದ್ವಾಂಸನಿದ್ದನು. ಅವನು ಚಕ್ರನೆಂಬ ಋಷಿಯ ಮಗ ನಾದ್ದರಿಂದ ಚಾಕ್ರಾಯಣನೆಂದೂ ಅವನನ್ನು ಕರೆಯುತ್ತಿದ್ದರು. ಅವನ ಮಡದಿ ಇನ್ನೂ ಚಿಕ್ಕಪ್ರಾಯದವಳು. ಆತನು ಒಮ್ಮೆ ಆಹಾರಾರ್ಥವಾಗಿ ತಿರುಗುತ್ತಿದ್ದಾಗ ಆ ಗ್ರಾಮದ ಅಧಿಪತಿಯು ಒಂದು ಕಡೆ ಪಾತ್ರೆಯಲ್ಲಿ ಕುಲ್ಮಾಷಗಳನ್ನು ತುಂಬಿಕೊಂಡು ತಿನ್ನುತ್ತಿರುವುದು ಕಾಣಿಸಿತು. ಕುಲ್ಮಾಷವೆಂದರೆ ಕಾಡು ಉದ್ದಿನಕಾಳು, ಅಥವಾ ಕೆಟ್ಟು ಹೋದ ಉದ್ದಿನಕಾಳು. ಉಷಸ್ತಿ ಮುನಿಯು ಅವನ ಬಳಿಗೆ ಹೋಗಿ–" ನನಗೆ ಸ್ವಲ್ಪ ಕುಲ್ಮಾಷವನ್ನು ಕೊಡು " ಎಂದು ಕೇಳಿದನು. ಗ್ರಾಮಾಧಿಪತಿಯು–" ಅಯ್ಯಾ, ಈ ಪಾತ್ರೆಯಲ್ಲಿ ಮಾತ್ರ ಈ ಕಾಳು ಇದೆ. ಇದನ್ನು ನಾನು ತಿನ್ನುತ್ತಿದ್ದೇನೆ. ಉಚ್ಛಿಷ್ಟ ವನ್ನು ಹೇಗೆ ಕೊಡಲಿ ? "–ಎಂದನು. ಅದಕ್ಕೆ ಉಷಸ್ತಿಯು–" ಚಿಂತೆ ಇಲ್ಲ. ಅವನ್ನೇ ಕೊಡು"–ಎಂದು ಕೇಳಲು, ಆತನು ಪಾತ್ರೆಯಿಂದ ತೆಗೆದು ಒಂದಿಷ್ಟು ಉದ್ದಿನಕಾಳನ್ನು ಉಷಸ್ತಿಗೆ ನೀಡಿದನು. ಅನಂತರ–" ಬ್ರಾಹ್ಮಣ, ಕಾಳನ್ನು ತಿಂದು, ಈ ನೀರನ್ನು ಕುಡಿ "–ಎಂದು ಹೇಳಿ ತಾನು ಕುಡಿಯುತ್ತಿದ್ದ ನೀರಿನ ಪಾತ್ರೆಯನ್ನು ಮುಂದಿಟ್ಟನು. ಆಗ ಉಷಸ್ತಿಯು–"ಅದು ನೀನು ಕುಡಿದು ಬಿಟ್ಟ ನೀರು. ಉಚ್ಛಿಷ್ಟ ನನಗೆ ಬೇಡ" ಎಂದನು. ಗ್ರಾಮಾಧಿಪತಿಯು–" ಅರೆ, ಕುಲ್ಮಾಷವು ಉಚ್ಛಿಷ್ಟವಲ್ಲವೇ ? ಅದನ್ನು ತಿನ್ನಬಹುದು, ನೀರನ್ನು ಕುಡಿಯಬಾರದೋ ? " ಎಂದನು. ಉಷಸ್ತಿಯು–" ಅಯ್ಯಾ ತಿನ್ನುವುದಕ್ಕೆ ಬೇರೆ ಏನೂ ಸಿಗಲಿಲ್ಲವಾದ್ದರಿಂದ ಕುಲ್ಮಾಷವನ್ನು ತೆಗೆದುಕೊಂಡೆನು. ನೀರಿಗೇನು ? ಎಲ್ಲಾದರೂ ದೊರೆಯುತ್ತದೆ "–ಎಂದುಬಿಟ್ಟನು.

ಆಪತ್ಕಾಲದಲ್ಲಿ ಪ್ರಾಣವನ್ನುಳಿಸಿಕೊಳ್ಳಲು ಏನೂ ದೊರಕದಾಗ ಆಹಾರಕ್ಕೆ ದೋಷವಿಲ್ಲ. ಇದು ನಿಷಿದ್ಧವೆಂದು ಗಣಿಸಬೇಕಾಗಿಲ್ಲ–ಎಂದು ಇದರಿಂದ ಸೂಚಿತ ವಾಗುತ್ತದೆ. ನೀರು ಬೇರೆ ಕಡೆ ಸಿಗುತ್ತಿದ್ದುದರಿಂದ ಉಷಸ್ತಿಯು ಎಂಜಲು ನೀರನ್ನು ಕುಡಿಯಲು ಒಪ್ಪಲಿಲ್ಲ. ಅನಂತರ ಉಷಸ್ತಿಯು ಕುಲ್ಮಾಷದಲ್ಲಿ ಸ್ವಲ್ಪ ಭಾಗವನ್ನು ತಿಂದು ಉಳಿದುದನ್ನು ಮನೆಗೆ ತಂದು ಹೆಂಡತಿಗೆ ಕೊಟ್ಟನು. ಅಷ್ಟರಲ್ಲಿ ಅವಳಿಗೆ ಬೇರೆ ಆಹಾರ ದೊರಕಿದ್ದರಿಂದ ಉಷಸ್ತಿ ಕೊಟ್ಟ ಕಾಳನ್ನು ಒಂದು ಡಬ್ಬದಲ್ಲಿ ತೆಗೆದಿಟ್ಟಳು.

ಮರುದಿನ ಪ್ರಾತಃಕಾಲ ಉಷಸ್ತಿಯು ತನ್ನ ಹೆಂಡತಿಯನ್ನು ಕರೆದು–" ಇಲ್ಲಿಗೆ ಸ್ವಲ್ಪ ದೂರದಲ್ಲಿ ರಾಜನು ಮಳೆಬೆಳೆಗಾಗಿ ಒಂದು ಯಜ್ಞವನ್ನು ನಡೆಸುತ್ತಿದ್ದಾನಂತೆ.

ನಾನು ಅಲ್ಲಿಗೆ ಹೋಗಬೇಕೆಂದಿದ್ದೇನೆ. ಏನಾದರೂ ದಕ್ಷಿಣೆ ದೊರೆಯಬಹುದು. ನನಗೆ ಹಸಿವಾಗುತ್ತಿದೆ. ತಿನ್ನಲು ಏನಿದೆ?" ಎಂದು ಕೇಳಿದನು. ಅವಳು "ನಿನ್ನೆ ನೀವು ಕೊಟ್ಟಿದ್ದ ಕಾಳನ್ನು ತೆಗೆದಿಟ್ಟಿದ್ದೇನೆ. ಅದನ್ನು ಕೊಡುತ್ತೇನೆ"–ಎಂದಳು. ಉಷಸ್ತಿಯು ಆಗಲೆಂದು ನುಡಿದು, ಆ ಕಾಳನ್ನು ತಿಂದು, ರಾಜನು ನಡೆಸುತ್ತಿದ್ದ ಯಜ್ಞಶಾಲೆಗೆ ಹೋದನು.

"**ಅನಾಹೂತೋಽಧ್ವರಂ ಗಚ್ಛೇತ್**"–ಎಂಬ ವಚನದಂತೆ, ಆಹ್ವಾನವಿಲ್ಲದಿದ್ದರೂ ಯಜ್ಞಕ್ಕೆ ಹೋಗಬಹುದು. ಅಂತೆಯೇ ಚಾಕ್ರಾಯಣನು ರಾಜನ ಯಜ್ಞಶಾಲೆಗೆ ಹೋಗಿ ಋತ್ವಿಜರ ಸಮೀಪದಲ್ಲಿ ಕುಳಿತುಕೊಂಡನು. ಯಜ್ಞದಲ್ಲಿ ಪ್ರಸ್ತೋತೃ, ಉದ್ಗಾತೃ, ಪತಿಹರ್ತೃ–ಎಂಬ ಮೂವರು ಋತ್ವಿಜರು ಕಲ್ಪೋಕ್ತವಾದ ಪ್ರಸ್ತಾವಾದಿ ಮಂತ್ರಗಳಿಂದ ಆಯಾ ದೇವತೆಗಳನ್ನು ಸ್ತುತಿಸಬೇಕಾಗುತ್ತದೆ. ಪ್ರಸ್ತೋತನು ಪ್ರಸ್ತಾವ ಮಂತ್ರವನ್ನು ಪಠಿಸಬೇಕಾದ ಸಮಯ ಬಂದಿತು. ಆಗ ಚಾಕ್ರಾಯಣನು ಅವನನ್ನು ತಡೆದು–"ಎಲೈ ಪ್ರಸ್ತೋತ, ಪ್ರಸ್ತಾವ ಮಂತ್ರಕ್ಕೆ ಸಂಬಂಧಿಸಿದ ದೇವತೆ ಯಾರು? ದೇವತಾ ಜ್ಞಾನವಿಲ್ಲದೆ ಸ್ತುತಿಸುವೆಯಾದರೆ ನಿನ್ನ ತಲೆ ಉರುಳಿ ಬಿದ್ದೀತು"–ಎರಿದನು. ಆ ಋತ್ವಿಜನಿಗೆ ದೇವತೆ ಯಾರೆಂಬುದು ಗೊತ್ತಿಲ್ಲದ ಪ್ರಯುಕ್ತ ಸುಮ್ಮನಾದನು. ಅನಂತರ, ಉದ್ಗಾತೃವನ್ನು ಕುರಿತು ಚಾಕ್ರಾಯಣನು–"ಎಲೈ ಉದ್ಗಾತೃ, ಉದ್ಗೀಥಮಂತ್ರದ ದೇವತೆ ಯಾರು? ಅದನ್ನರಿಯದೆ ಸ್ತುತಿಸುವೆಯಾದರೆ ನಿನ್ನ ತಲೆ ಉರುಳಿ ಬಿದ್ದೀತು"–ಎಂದನು. ಆಮೇಲೆ ಪ್ರತಿಹರ್ತಾರನನ್ನು ಉದ್ದೇಶಿಸಿ, ಎಲೈ ಪ್ರತಿಹರ್ತ, ಪ್ರತಿಹಾರ ಮಂತ್ರದ ದೇವತೆ ಯಾರು? ಅದು ಗೊತ್ತಿಲ್ಲದೆ ಪ್ರತಿಹಾರ ಮಂತ್ರವನ್ನು ಹೇಳುವೆಯಾದರೆ, ನಿನ್ನ ತಲೆಯೂ ಉರುಳಿ ಬಿದ್ದೀತು"–ಎಂದನು. ಪ್ರತಿಹರ್ತನು ತೆಪ್ಪಗೆ ಕುಳಿತನು.

ಅವರಾರಿಗೂ ದೇವತಾಜ್ಞಾನವಿರಲಿಲ್ಲ. ಬ್ರಹ್ಮಜ್ಞಾನಿಯಾದ ವಿದ್ವಾಂಸನೆದುರಿಗೆ ಅರ್ಥಜ್ಞಾನವೂ ದೇವತಾಜ್ಞಾನವೂ ಇಲ್ಲದವರು ಶಾಸ್ತ್ರೀಯ ಕರ್ಮವನ್ನು ಉದ್ಧಟತನದಿಂದ ನಡೆಸಬಾರದು. ಅವರು ವಿನಯದಿಂದ ಆ ವಿದ್ವಾಂಸನಿಗೆ ವಂದಿಸಿ, ಅವನ ಅನುಮತಿಯನ್ನು ಪಡೆದು ಕಾರ್ಯಪ್ರವೃತ್ತರಾಗಬೇಕು.

ಇದೆಲ್ಲವನ್ನೂ ನೋಡುತ್ತಿದ್ದ ರಾಜನು ದಿಗ್ಭ್ರಾಂತನಾದನು. ಅವನು ಉಷಸ್ತಿಯ ಬಳಿಗೆ ಹೋಗಿ, "ಭಗವನ್, ನೀನು ಯಾರೆಂಬುದನ್ನು ತಿಳಿಯಲಪೇಕ್ಷಿಸುತ್ತೇನೆ"–ಎಂದನು. ಉಷಸ್ತಿಯು "ರಾಜ, ನಾನು ಉಷಸ್ತಿ, ಚಾಕ್ರಾಯಣನೆಂದೂ ನನ್ನನ್ನು ಕರೆಯುತ್ತಾರೆ"–ಎಂದು ಹೇಳಿದನು. ಆಗ ರಾಜನು "ಭಗವನ್, ನಿಮ್ಮ ಹೆಸರನ್ನು ಕೇಳಿದ್ದೆ. ಈ ಯಜ್ಞದ ಎಲ್ಲ ವಿಧಾನಗಳನ್ನೂ ನಿಮಗೆ ವಹಿಸಿಕೊಡಬೇಕೆಂಬ ಉದ್ದೇಶದಿಂದ ನಿಮ್ಮನ್ನು ಕಾಣಲು ಯತ್ನಿಸಿದೆ. ನೀವು ಎಲ್ಲಿಗೋ ಹೋಗಿದ್ದುದ

ರಿಂದ ಕಾಣಲಾಗಲಿಲ್ಲ. ಆದ್ದರಿಂದ ಈ ಬ್ರಾಹ್ಮಣರಿಗೆ ಇದನ್ನು ವಹಿಸಿದೆ. ಈಗ ನೀವೇ ಈ ಕಾರ್ಯವನ್ನು ನಡೆಸಿಕೊಡಬೇಕು"—ಎಂದು ವಿನಯದಿಂದ ಪ್ರಾರ್ಥಿಸಿದನು. ಅದಕ್ಕೆ ಉಷಸ್ತಿಯು "ರಾಜ, ಒಳ್ಳೆಯದು. ಆದರೆ ಇವರಿಗೆ ನೀನು ಪ್ರವರವನ್ನು ನೀಡಿ ಋತ್ವಿಜರೆಂದು ಗೊತ್ತುಮಾಡಿದ್ದೀಯೆ. ಇವರೇ ಸ್ತುತಿಮಾಡಿ ಮುಂದಿನ ಕಾರ್ಯವನ್ನು ನಡೆಸಲಿ. ನಾನು ಅನುಮತಿಯನ್ನು ನೀಡುತ್ತೇನೆ. ಇವರಿಗೆ ಕೊಡುವಷ್ಟು ಸಂಭಾವನೆಯ ಧನವನ್ನು ನನಗೂ ಕೊಡಬೇಕಾಗುತ್ತದೆ"—ಎಂದು ನುಡಿದನು. ರಾಜನು ಒಪ್ಪಿದನು. ಅನಂತರ, ಪ್ರಸ್ತೋತನು ಉಷಸ್ತಿಗೆ ನಮಸ್ಕರಿಸಿ, ಪ್ರಸ್ತಾವ ಮಂತ್ರವನ್ನು ಪಠಿಸಲು ಅನುಮತಿಯನ್ನು ಕೇಳುತ್ತಾ, "ಆರ್ಯ, ಈ ಪ್ರಸ್ತಾವ ಮಂತ್ರಕ್ಕೆ ಸಂಬಂಧಿಸಿದ ದೇವತೆಯನ್ನು ತಿಳಿಯದೆ ಪಠಿಸಿದರೆ ನಿನ್ನ ತಲೆ ಉರುಳಿ ಬೀಳುವುದು ಎಂದು ಹೇಳಿದಿರಲ್ಲ. ಆ ದೇವತೆ ಯಾರು ?" ಎಂದು ಪ್ರಶ್ನೆಮಾಡಿದನು. ಉಷಸ್ತಿಯು "ಪ್ರಾಣ ಅದರ ದೇವತೆ" ಎಂದು ನುಡಿದು ತನ್ನ ಹೇಳಿಕೆಯನ್ನು ಸಮರ್ಥಿಸಿದನು. ಅಂತೆಯೇ, ಉದ್ಗಾತನಿಗೆ ಆದಿತ್ಯನು ಉದ್ಗೀಥದ ದೇವತೆಯೆಂದೂ, ಪ್ರತಿಹರ್ತನಿಗೆ ಅನ್ನವು ಪ್ರತಿಹಾರ ಮಂತ್ರದ ದೇವತೆ ಎಂದೂ ತಿಳಿಸಿದನು. ಯಜ್ಞವು ಸಾಂಗವಾಗಿ ನಡೆಯಿತು.

ವೇದಾಧ್ಯಯನ ಮಾಡಿದವರು ವೇದದ ಅರ್ಥವನ್ನು ತಿಳಿದಿರುವುದು ಅವಶ್ಯಕವೂ ಹೆಚ್ಚಿನ ಶ್ರೇಯಸ್ಕರವೂ ಆಗಿದೆ. ಯಾಸ್ಕರು ನಿರುಕ್ತದಲ್ಲಿ ಈ ಉಕ್ತಿಯನ್ನು ಉದಾಹರಿಸಿದ್ದಾರೆ—

ಸ್ಥಾಣುರಯಂ ಭಾರಹಾರಃ ಕಿಲಾಭೂತ್
ಅಧೀತ್ಯಂ ವೇದಂ ನ ವಿಜಾನಾತಿ ಯೋಽರ್ಥವ್ ।
ಯೋಽರ್ಥಜ್ಞ ಇತ್ ಸಕಲಂ ಭದ್ರಮಶ್ನುತೇ
ನಾಕಮೇತಿ ಜ್ಞಾನ ವಿಧೂತ ಪಾಪ್ಮಾ ॥

"ಯಾವಾತನು ವೇದವನ್ನು ಕಂಠಪಾಠಮಾಡಿ ಅದರ ಅರ್ಥವನ್ನು ತಿಳಿದುಕೊಳ್ಳದೆ ಇರುತ್ತಾನೋ ಅವನು ಭಾರವನ್ನು ಹೊತ್ತ ಕಂಭದಂತೆಯೇ ಸರಿ ! ಅರ್ಥವನ್ನು ತಿಳಿದವನು ಸಕಲ ಶ್ರೇಯಸ್ಸನ್ನು ಪಡೆದು, ಅರ್ಥಜ್ಞಾನದಿಂದ ಪಾಪವನ್ನು ಹೋಗಲಾಡಿಸಿಕೊಂಡು, ಸ್ವರ್ಗವನ್ನಡರುತ್ತಾನೆ."

## ಜಾನಶ್ರುತಿ (ಛಾಂದೋಗ್ಯ)

ಜಾನಶ್ರುತಿಯೆಂಬ ಒಬ್ಬ ಪುಣ್ಯಾತ್ಮನಾದ ರಾಜನಿದ್ದನು. ಅವನು ಶ್ರದ್ಧೆಯಿಂದ ದಾನ ಧರ್ಮಗಳನ್ನು ಮಾಡುತ್ತಿದ್ದನು. ಅವನ ಅರಮನೆಯಲ್ಲಿ ನಿತ್ಯ ಸಂತರ್ಪಣೆ ನಡೆಯುತ್ತಿತ್ತು. ರಾಜನು ತನ್ನ ರಾಜ್ಯದ ಹಲವಾರು ಸ್ಥಳಗಳಲ್ಲಿ ಅನ್ನ

ಛತ್ರಗಳನ್ನು ಕಟ್ಟಿಸಿದ್ದನು. ಅವನ ಕೀರ್ತಿ ಎಲ್ಲೆಲ್ಲಿಯೂ ಹರಡಿತ್ತು. ಅವನಿಗೆ ಬ್ರಹ್ಮಜ್ಞಾನವನ್ನು ಪಡೆಯುವ ಅರ್ಹತೆ ಬಂದಿತ್ತು. ಆದರೆ ಇನ್ನೂ ಸದ್ಗುರುವಿನ ಲಾಭವಾಗಿರಲಿಲ್ಲ.

ಬೇಸಿಗೆಯ ಕಾಲ. ಸೆಕೆ ಬಹಳವಾದ್ದರಿಂದ ಜಾನಶ್ರುತಿಯು ಅರಮನೆಯ ಮಹಡಿಯ ಮೇಲ್ಚಾವಣಿಯಲ್ಲಿ ಮಲಗುತ್ತಿದ್ದನು. ಹೀಗೆ ಒಂದು ರಾತ್ರಿ ಮಲಗಿರುವಾಗ ಕೆಲವು ಹಂಸಪಕ್ಷಿಗಳು ಆಕಾಶದಲ್ಲಿ ಹಾರುತ್ತಾ ಅರಮನೆಯ ಕಡೆಗೆ ಬಂದವು. ಆ ಹಂಸಗಳು ಜಾನಶ್ರುತಿಯನ್ನು ಅನುಗ್ರಹಿಸುವುದಕ್ಕಾಗಿ ಬಂದ ಋಷಿಗಳೋ ದೇವತೆಗಳೋ ಆಗಿರಬೇಕು. ಜಾನಶ್ರುತಿ ಮಲಗಿದ್ದ ಸ್ಥಳಕ್ಕೆ ನೇರವಾಗಿ ಮೇಲ್ಗಡೆ ಒಂದು ಹಂಸವು ಹಾರುತ್ತಾ ಬಂದಿತು. ಆಗ ಅದರ ಹಿಂದುಗಡೆ ಇದ್ದ ಹಂಸವು "ಹೋಯ್, ಹೋಯ್, ಭಲ್ಲಾಕ್ಷ! ಭಲ್ಲಾಕ್ಷ! ಕೆಳಗೆ ಜಾನಶ್ರುತಿ ಮಹಾರಾಜನು ಮಲಗಿದ್ದಾನೆ. ಅವನ ದಿವ್ಯ ಜ್ಯೋತಿಯು ಆಕಾಶವ್ಯಾಪಿಯಾದದ್ದು. ಮಹಾಪುರುಷರನ್ನು ಹೀಗೆ ದಾಟಿ ಹೋಗಬಾರದು" ಎಂದು ಮುಂದಿನ ಹಂಸಕ್ಕೆ ಎಚ್ಚರಿಕೆ ನೀಡಿತು.

ಭಲ್ಲಾಕ್ಷ ಎಂದರೆ–ಭಲ್ಲೆಯಂತೆ ಹರಿತವಾದ ನೇತ್ರವುಳ್ಳವನು ಎಂದರ್ಥ. ಸೂಕ್ಷ್ಮದರ್ಶಿಯೆಂದು ಅಭಿಪ್ರಾಯ. ಮುಂದಿದ್ದ ಹಂಸವನ್ನು ಹಂಗಿಸುವುದಕ್ಕಾಗಿ ವ್ಯಂಗ್ಯಾರ್ಥದಲ್ಲಿ ಈ ಶಬ್ದವನ್ನು ಬಳಸಲಾಗಿದೆ. "ಕೆಳಗೆ ಮಲಗಿರುವ ಮಹಾರಾಜನು ನಿನಗೆ ಕಾಣಿಸುವುದಿಲ್ಲವೇ, ಅಯ್ಯೋ ದಡ್ಡ ! ಎಂದು ತಾತ್ಪರ್ಯ." ಹಾಗೆ ದಾಟದರೆ ಜಾನಶ್ರುತಿಯ ತೇಜಸ್ಸಿನಲ್ಲಿ ನೀನು ಸುಟ್ಟುಹೋದೀಯೆ" ಎಂದು ಎಚ್ಚರಿಸಿತು. ಆಗ ಮುಂದೆ ಹಾರುತ್ತಿದ್ದ ಹಂಸವು ತನ್ನನ್ನು ಎಚ್ಚರಿಸಿದ ಹಂಸವನ್ನು ಕುರಿತು–"ಎಲೋ ಏನು ಹೇಳುತ್ತೀಯೆ ನೀನು ! ಈ ಜಾನಶ್ರುತಿ ಯಾವ ದೊಡ್ಡ ಮಹಾತ್ಮ? ಇವನೊಬ್ಬ ವರಾಕ–ನಿಕೃಷ್ಟ! ಬಂಡಿಯ ಕೆಳಗೆ ಮಲಗಿರುತ್ತಾನಲ್ಲ, ಆ ರೈಕ್ವ. ಅಂತಹ ರೈಕ್ವನೋ ಎಂಬಂತೆ ಈತನನ್ನು ಹೊಗಳುತ್ತೀಯೆ! ಈ ರಾಜನೂ ಸಮಸ್ತ ಜನರೂ ಮಾಡುವ ಪುಣ್ಯಕಾರ್ಯಗಳು ರೈಕ್ವನ ಒಂದಂಶವೂ ಅಲ್ಲ. ಅವನ ತೇಜಸ್ಸಿನಲ್ಲಿ ಇವೆಲ್ಲವೂ ಅಡಗಿ ಹೋಗುತ್ತವೆ"–ಎಂದು ಹೇಳಿತು. ಹಂಸಗಳು ಹಾರಿಹೋದವು.

ಈ ಪಕ್ಷಿಗಳ ಸಂಭಾಷಣೆ ಜಾನಶ್ರುತಿಗೆ ಕೇಳಿಸಿತು. ರೈಕ್ವನೆಂಬ ಆ ಮಹಾತ್ಮನು ಯಾರಿರಬಹುದು ? ಎಂಬ ಚಿಂತೆ ಅವನನ್ನು ಆವರಿಸಿತು. ನಿದ್ದೆ ಬರಲಿಲ್ಲ. ಬೆಳಗಾದೊಡನೆ ತನ್ನ ಸಾರಥಿಯನ್ನು ಕರೆದು "ಸೂತ, ರೈಕ್ವನೆಂಬ ಒಬ್ಬ ಮಹಾತ್ಮನು ಬಂಡಿಯ ಕೆಳಗೆ ವಾಸವಾಗಿರುತ್ತಾನೆಂದು ತಿಳಿದುಬಂದಿದೆ. ಅವನು ಎಲ್ಲಿದ್ದಾನೆಂದು ಹುಡುಕಿ ತಿಳಿದುಕೊಂಡುಬಾ" ಎಂದು ಅಪ್ಪಣೆ ಮಾಡಿದನು. ಸಾರಥಿಯು ಎಲ್ಲಾ ಗ್ರಾಮ–ನಗರಗಳಲ್ಲಿಯೂ ಸುತ್ತಾಡಿ ಅಲೆದರೂ ರೈಕ್ವನ ಸುದ್ದಿ ತಿಳಿಯಲಿಲ್ಲ. ಕಡೆಗೆ ಹಿಂದಿರುಗಿ ಬಂದು–"ಮಹಾರಾಜ, ಎಲ್ಲ ಗ್ರಾಮಗಳನ್ನೂ ನಗರಗಳನ್ನೂ ಶೋಧಿಸಿಯಾಯಿತು. ಆ ಮಹಾತ್ಮನು ಎಲ್ಲಿದ್ದಾನೆಂದು ಗೊತ್ತಾಗಲಿಲ್ಲ"–ಎಂದು ಜಾನಶ್ರುತಿಗೆ

ನಿವೇದಿಸಿದನು. ಆಗ ರಾಜನು–ಅಯ್ಯಾ, ಜ್ಞಾನಿಗಳಾದ ಅಂತಹ ಮಹಾತ್ಮರು ನಗರದಲ್ಲಾಗಲಿ, ಗ್ರಾಮದಲ್ಲಾಗಲಿ ಸಾಮಾನ್ಯವಾಗಿ ವಾಸಮಾಡುವುದಿಲ್ಲ. ಜನರ ಗದ್ದಲವಿಲ್ಲದ ಏಕಾಂತದಲ್ಲಿರುತ್ತಾರೆ. ಆದ್ದರಿಂದ ವಿಜನವಾದ ಸ್ಥಳದಲ್ಲಿ ಅನ್ವೇಷಿಸು" ಎಂದು ಆದೇಶವಿತ್ತನು. ಆಮೇಲೆ ಸೂತನು ವಿಜನ ಸ್ಥಳಗಳಲ್ಲಿ ಅನ್ವೇಷಿಸುತ್ತಿರುವಾಗ ಒಂದು ಮುರುಕು ಬಂಡಿಯ ಕೆಳಗೆ ಒಬ್ಬ ವ್ಯಕ್ತಿಯು ಕುಳಿತಿರುವುದು ಕಾಣಿಸಿತು. ಅವನ ಮೈಯಲ್ಲಿ ತುರಿ ಕಜ್ಜಿಗಳಾಗಿದ್ದವು. ಮೈಯನ್ನು ಕೆರೆಯುತ್ತಿದ್ದ ಆತನ ಬಳಿಗೆ ಹೋಗಿ ಈ ಸಾರಥಿಯು ವಿನಯದಿಂದ–"ಭಗವನ್, ರೈಕ್ವ ಎಂಬ ಹೆಸರಿನವರು ನೀವೇ" ಎಂದು ಕೇಳಲು, ಹೌದೆಂದು ಆ ವ್ಯಕ್ತಿ ತಲೆಯಾಡಿಸಿದನು. ರೈಕ್ವನಿರುವ ಸ್ಥಳವು ಗೊತ್ತಾದ್ದರಿಂದ ಜಾನಶ್ರುತಿಗೆ ಪರಮ ಹರ್ಷವಾಯಿತು.

"ಈಗ ರೈಕ್ವನ ಬಳಿಗೆ ಹೋಗಿ ಅಧ್ಯಾತ್ಮ ವಿದ್ಯೆಯನ್ನು ಗಳಿಸಬೇಕು. ಆತನಿಂದ ವಿದ್ಯೋಪದೇಶವನ್ನು ಪಡೆಯುವುದು ಹೇಗೆ? ಎಂದು ರಾಜನು ಆಲೋಚಿಸಿದನು. ಶಾಸ್ತ್ರವು ಹೇಳುತ್ತದೆ—

**ಬ್ರಹ್ಮಚಾರೀ ಧನದಾಯೀ ಮೇಧಾವೀ ಶ್ರೋತ್ರಿಯಃ ಪ್ರಿಯಃ ।**
**ವಿದ್ಯಯಾ ವಾ ವಿದ್ಯಾಂ ಪ್ರಾಹ ತಾನಿ ತೀರ್ಥಾನಿ ಷಣ್ಮಮ ॥**

ಇದರ ತಾತ್ಪರ್ಯವೇನೆಂದರೆ—ಬ್ರಹ್ಮಚಾರಿಯಾಗಿ ಗುರುಸೇವೆ ಮಾಡತಕ್ಕವನು, ಪುಷ್ಕಳವಾಗಿ ಧನವನ್ನು ಕೊಡತಕ್ಕವನು, ಅಸಾಧಾರಣ ಬುದ್ಧಿಶಾಲಿ, ವೇದಾಧ್ಯಯನ ಮಾಡಿದವನು, ಅತ್ಯಂತ ಪ್ರಿಯನಾದವನು, ಯಾವುದಾದರೊಂದು ವಿದ್ಯೆಯನ್ನು ಹೇಳಿಕೊಡತಕ್ಕವನು—ಈ ಆರು ಮಂದಿಗೆ ವಿದ್ಯೆಯನ್ನು ಉಪದೇಶಿಸಬಹುದು—ಎಂದು. ಇನ್ನೊಂದು ಶ್ಲೋಕ ಹೀಗಿದೆ—

**ಗುರುಶುಶ್ರೂಷಯಾ ವಿದ್ಯಾ ಪುಷ್ಕಲೇನ ಧನೇನ ವಾ ।**
**ಅಥವಾ ವಿದ್ಯಯಾ ವಿದ್ಯಾ ಚತುರ್ಥೀ ನೋಪಲಭ್ಯತೇ ॥**

ಗುರು ಶುಶ್ರೂಷೆಯಿಂದ, ಬಹಳ ಹಣವನ್ನು ಗುರುದಕ್ಷಿಣೆಯಾಗಿ ಕೊಡುವುದರಿಂದ, ಅಥವಾ ಒಂದು ವಿದ್ಯೆಯನ್ನು ಕಲಿಸುವುದರಿಂದ ವಿದ್ಯೋಪದೇಶವನ್ನು ಪಡೆಯಬಹುದು. ಬೇರೆ ವಿಧದಲ್ಲಿ ವಿದ್ಯಾಪ್ರಾಪ್ತಿ ಇಲ್ಲ.

ಈಗ ಮಹಾರಾಜನಿಗೆ ತೆರೆದಿದ್ದ ಮಾರ್ಗವೆಂದರೆ, ರೈಕ್ವನಿಗೆ ವಿಪುಲವಾಗಿ ಧನವನ್ನು ಕೊಡುವುದು ಮಾತ್ರ. ಆದ್ದರಿಂದ ಜಾನಶ್ರುತಿಯು ಆರುನೂರು ಗೋವುಗಳನ್ನೂ ಕೆಲವು ಚಿನ್ನದ ನಾಣ್ಯಗಳನ್ನೂ ರಥವನ್ನೂ ತೆಗೆದು ಕೊಂಡು ಹೋಗಿ ರೈಕ್ವನಿಗೆ ಅರ್ಪಿಸುತ್ತಾ—"ಭಗವನ್, ಇವುಗಳನ್ನು ಸ್ವೀಕರಿಸಿ. ಆತ್ಮಜ್ಞಾನಕ್ಕೆ ಸಾಧನವಾದ ದೇವತೋಪಾಸನೆಯನ್ನು ನನಗೆ ಉಪದೇಶಿಸಬೇಕು"–ಎಂದು ಪ್ರಾರ್ಥಿಸಿದನು. ರೈಕ್ವನು ಉಪೇಕ್ಷೆಯಿಂದ ನೋಡುತ್ತಾ—"ಎಲೋ ಶೂದ್ರ, ಇವನ್ನು ನೀನೇ ಇಟ್ಟುಕೋ ಹೋಗು"–ಎಂದು ಹೇಳಿ ಬಿಟ್ಟನು. ಜಾನಶ್ರುತಿಗೆ ಬಹು ವಿಷಾದವಾಯಿತು.

ಗುರುದಕ್ಷಿಣೆಯಾಗಿ ತಾನು ತಂದದ್ದು ಅಲ್ಪವೆಂದು ಮನಸ್ಸಿಗೆ ತೋರಿತು. ಅವನು ತನ್ನ ರಾಜಧಾನಿಗೆ ಹೋಗಿ ಒಂದು ಸಾವಿರ ಗೋವುಗಳನ್ನೂ, ಮತ್ತಷ್ಟು ಸುವರ್ಣ ನಾಣ್ಯಗಳನ್ನೂ, ರಥವನ್ನೂ ತಂದನು. ಅಲ್ಲದೆ ತನ್ನೊಡನೆ ತನ್ನ ಮಗಳನ್ನು ಕರೆದು ಕೊಂಡುಬಂದು ರೈಕ್ವನಿಗೆ ನಮಸ್ಕರಿಸಿ—"ಭಗವನ್, ಇಲ್ಲಿ ಒಂದು ಸಾವಿರ ಗೋವುಗಳಿವೆ, ಸುವರ್ಣ ನಾಣ್ಯಗಳೂ ರಥವೂ ಇವೆ. ಇವನ್ನು ಸ್ವೀಕರಿಸಿ. ಈ ನನ್ನ ರಾಜಕುಮಾರಿಯನ್ನು ನಿಮಗೆ ಪತ್ನಿಯಾಗಿ ಮದುವೆ ಮಾಡಿಕೊಡುತ್ತೇನೆ. ಸಮೀಪದಲ್ಲಿರುವ ಗ್ರಾಮವನ್ನು ಜೀವನವೃತ್ತಿಗಾಗಿ ಅರ್ಪಿಸುತ್ತೇನೆ." ಇವೆಲ್ಲವನ್ನೂ ಪರಿಗ್ರಹಿಸಿ ನನಗೆ ವಿದ್ಯೋಪದೇಶ ಮಾಡಬೇಕು ಎಂದು ವಿನಯದಿಂದ ಪ್ರಾರ್ಥಿಸಿದನು. ರೈಕ್ವನು "ಒಳ್ಳೆಯದು. ಶೂದ್ರ ! ಈಗ ನಿನಗೆ ವಿದ್ಯೋಪದೇಶ ಮಾಡುವೆನು"–ಎಂದು ಉದ್ಗರಿಸಿದನು. ರಾಜನು ರೈಕ್ವನಿಗೆ ದಾನ ಮಾಡಿದ ಗ್ರಾಮವು ಮುಂದೆ ರೈಕ್ವಪರ್ಣ ಎಂದು ಪ್ರಸಿದ್ಧವಾಯಿತು. ಜಾನಶ್ರುತಿಯು ಕ್ಷತ್ರಿಯ. ಅವನನ್ನು "ಶೂದ್ರ"ಎಂದು ಕರೆದದ್ದು ಮಹಾರಾಜನ ವಿಷಯದಲ್ಲಿಯೂ ರೈಕ್ವನಿಗಿದ್ದ ಅಸಡ್ಡೆಯನ್ನು ತೋರಿಸುತ್ತದೆ.

ರೈಕ್ವನು ಜಾನಶ್ರುತಿಗೆ ಉಪದೇಶಿಸಿದ್ದು ಸಂವರ್ಗೋಪಾಸನೆ. ಸಮಸ್ತ ವಸ್ತುಗಳನ್ನೂ ತನ್ನಲ್ಲಿ ಅಡಗಿಸಿಕೊಳ್ಳತಕ್ಕದ್ದು ಸಂವರ್ಗ. ವಾಯು ಅಥವಾ ಪ್ರಾಣವೇ ಸಂವರ್ಗ. ಇದರ ವಿವರಣೆ ಉಪನಿಷತ್ತಿನಲ್ಲಿದೆ. ಅಗ್ನಿ ಮೊದಲಾದ ದೇವತೆಗಳೂ ಇಂದ್ರಿಯಗಳೂ ವಾಯು ದೇವತೆಯಲ್ಲಿ ಅಂತರ್ಭಾವ ಹೊಂದುತ್ತವೆ. ವಾಯುವು ವಿರಾಟನಲ್ಲಿಯೂ, ವಿರಾಟ್ ಪರಬ್ರಹ್ಮದಲ್ಲಿಯೂ ಅಡಗಿಹೋಗುತ್ತವೆ. ಕಡೆಗೆ ಉಳಿಯತಕ್ಕದ್ದು ನಿಷ್ಪ್ರಪಂಚವಾದ ಪರಬ್ರಹ್ಮ ಒಂದೇ. ಈ ಬ್ರಹ್ಮಜ್ಞಾನವು ಸಂವರ್ಗ ವಿದ್ಯೆಯ ಮೂಲ ಲಭಿಸಿ, ಇರತಕ್ಕದ್ದು ಅದ್ವಯವಾದ ಬ್ರಹ್ಮ ಒಂದೇ ಎಂಬ ಅರಿವು ದೃಢವಾಗಿ ನಿಲ್ಲುತ್ತದೆ.

ರೈಕ್ವನು ರಾಜಪುತ್ರಿಯನ್ನು ಮದುವೆಯಾದನೋ ಇಲ್ಲವೋ ನನಗೆ ತಿಳಿಯದು. ಈ ಉಪಾಖ್ಯಾನದಿಂದ ತಿಳಿಯಬೇಕಾದದ್ದು ಇಷ್ಟು—

೧. ದಾನ ಧರ್ಮಾದಿ ಪುಣ್ಯ ಕರ್ಮಗಳೆಲ್ಲವೂ ಚಿತ್ತಶುದ್ಧಿಗಾಗಿ. ಚಿತ್ತಶುದ್ಧಿಯಾದಾಗ ಬ್ರಹ್ಮಜ್ಞಾನವನ್ನು ಪಡೆಯಲು ಅರ್ಹತೆ ಬರುತ್ತದೆ.

೨. ಜ್ಞಾನವಾದರೋ ಗುರೂಪದೇಶದಿಂದಲೇ ಪ್ರಾಪ್ತವಾಗುತ್ತದೆ. ನಮ್ಮ ಪುಣ್ಯದಿಂದ ಸದ್ಗುರುವಿನ ಲಾಭ ತಾನಾಗಿಯೇ ಆಗುತ್ತದೆ.

೩. ಗುರುದಕ್ಷಿಣೆಯನ್ನರ್ಪಿಸುವಾಗ ಚೌಕಾಸಿ ಮಾಡತಕ್ಕದ್ದಲ್ಲ. ಎಷ್ಟು ಶಕ್ಯ ಇದೆಯೋ ಅಷ್ಟನ್ನು ಅರ್ಪಿಸಲೇ ಬೇಕು.

೪. ಜ್ಞಾನಿಯನ್ನು ಗುರುತಿಸುವುದು ಕಷ್ಟ. ಪ್ರಾರಬ್ಧ ಕರ್ಮದಿಂದ ಕಜ್ಜಿ ಬುರುಕನಾಗಿದ್ದ ರೈಕ್ವನಂತೆ ಗುರುವಾಗತಕ್ಕವನು ಎಲ್ಲಿಯೋ ಯಾವ ರೂಪದಲ್ಲಿಯೋ ನೆಲಸಿರಬಹುದು.

## ಸತ್ಯಕಾಮ-ಜಾಬಾಲ—೫ (1)-(ಛಾಂದೋಗ್ಯ)

ಹಿಂದಿನ ಕಾಲದಲ್ಲಿ ವಿದ್ಯಾಭ್ಯಾಸವೆಂದರೆ ವೇದಗಳ ಅಧ್ಯಯನ ಮತ್ತು ವ್ಯಾಕರಣಾದಿ ಶಾಸ್ತ್ರಗಳ ಅಭ್ಯಾಸ. ಅದಕ್ಕಾಗಿ ವಿದ್ಯಾರ್ಥಿಯು ಮನೆಯನ್ನು ಬಿಟ್ಟು ಗುರುಕುಲಕ್ಕೆ ಹೋಗಿ ನೆಲಸಬೇಕಾಗಿತ್ತು. ಅಲ್ಲಿ ವಿದ್ಯಾರ್ಥಿಗಳಿಗೆ ಊಟ ಉಪಚಾರಗಳಿಗೆ ಅನುಕೂಲವಾದ ವ್ಯವಸ್ಥೆಯನ್ನು ಮಾಡುವ ಪದ್ಧತಿ ಇರಲಿಲ್ಲ. ಅವರು ಭಿಕ್ಷೆಯನ್ನು ಬೇಡಿ ತಂದು ಜೀವಿಸಬೇಕಾಗಿತ್ತು. ಗುರುಕುಲದ ಆಚಾರ್ಯನು ವಿಧಿಸುವ ಕಾರ್ಯವನ್ನು ಶ್ರದ್ಧೆಯಿಂದ ಮಾಡಿ ಆಚಾರ್ಯನ ಪ್ರೀತಿಯನ್ನು ಗಳಿಸಿದರೆ ಮಾತ್ರ ಅವನಿಗೆ ವಿದ್ಯಾರ್ಜನೆ ಸಾಧ್ಯ. ಶಿಷ್ಯನ ವಿನಯ,- ಶ್ರದ್ಧೆ, ಆರ್ಜವ, ಗುರುಭಕ್ತಿ ಮುಂತಾದುವನ್ನು ಪರೀಕ್ಷೆ ಮಾಡಿ, ಅವನು ಶಿಕ್ಷಣಕ್ಕೆ ಯೋಗ್ಯನೆಂದು ಗುರುವಿಗೆ ನಂಬಿಕೆಯಾದ ಮೇಲೆ ವಿದ್ಯಾಭ್ಯಾಸವು ನಡೆಯುತ್ತಿತ್ತು. ಶಿಷ್ಯನು ಗುಣಸಂಪನ್ನನೆಂದು ನಿಶ್ಚಯವಾದ ಮೇಲೆಯೇ ಆಚಾರ್ಯನು ಶಿಷ್ಯನಿಗೆ ಮೇಲ್ಮಟ್ಟದ ವಿದ್ಯಾಭ್ಯಾಸವನ್ನು ಮಾಡಿಸಿ ತನ್ನ ಜ್ಞಾನ ಸಂಪತ್ತನ್ನು ಪ್ರಿಯ ಶಿಷ್ಯನಿಗೆ ಧಾರೆಯೆರೆಯುತ್ತಿದ್ದನು.

ಒಂದು ಹಳ್ಳಿಯಲ್ಲಿ ಜಬಾಲಾ ಎಂಬ ಬ್ರಾಹ್ಮಣ ವಿಧವೆ ತನ್ನ ಚಿಕ್ಕ ಮಗನೊಂದಿಗೆ ಕಷ್ಟದಿಂದ ಜೀವನ ಮಾಡುತ್ತಿದ್ದಳು. ಅವಳು ಅನಾಥೆಯಾಗಿ ಅತ್ಯಂತ ಬಡತನದಿಂದ ಬದುಕಿದವಳು. ಆಕೆಯ ಮಗನ ಹೆಸರು ಸತ್ಯಕಾಮ. ಅವನ ಸ್ನೇಹಿತರು ಉಪನಯನ ಮಾಡಿಕೊಂಡು ವಿದ್ಯಾಭ್ಯಾಸಕ್ಕಾಗಿ ದೂರದ ಗುರುಕುಲಗಳಿಗೆ ತೆರಳುತ್ತಿದ್ದುದನ್ನು ಕಂಡು, ಸತ್ಯಕಾಮನಿಗೆ ತಾನೂ ವಿದ್ಯಾಭ್ಯಾಸಕ್ಕಾಗಿ ಗುರುಕುಲಕ್ಕೆ ಹೋಗಬೇಕೆನಿಸಿತು. ಅವನಿಗೆ ಇನ್ನೂ ಉಪನಯನವಾಗಿರಲಿಲ್ಲ. ಆದರೂ ಅವನು ವಿದ್ಯಾರ್ಜನೆಗಾಗಿ ಉತ್ಸಾಹಗೊಂಡನು. ಗುರುಕುಲದಲ್ಲಿ ಶಿಷ್ಯರಾಗಿ ಬರತಕ್ಕವರು ತಮ್ಮ ಕುಲ ಗೋತ್ರಗಳನ್ನು ಹೇಳಬೇಕಾಗಿತ್ತು. ಸತ್ಯಕಾಮನು ತನ್ನ ತಾಯಿಯಾದ ಜಬಾಲೆಗೆ ನಮಸ್ಕರಿಸಿ ತಾನು ಗುರುಕುಲಕ್ಕೆ ಹೋಗಲು ಅನುಮತಿಯನ್ನು ಪಡೆದುಕೊಂಡನು. ಆನಂತರ ತಾಯಿಯನ್ನು ಕುರಿತು-"ಅಮ್ಮ, ಅಲ್ಲಿ ಗುರುಗಳು ನನ್ನ ಗೋತ್ರ ಯಾವುದೆಂದು ವಿಚಾರಿಸುತ್ತಾರಂತೆ. ನನ್ನ ಗೋತ್ರ ಯಾವುದಮ್ಮ?" ಎಂದು ಕೇಳಿದನು. ಆಗ ಜಬಾಲೆಯು ಕಣ್ಣೀರು ಸುರಿಸುತ್ತಾ-"ಮಗು, ಚಿಕ್ಕಂದಿನಲ್ಲಿಯೇ ನನ್ನ ಮದುವೆಯಾಯಿತು. ಪತಿಯು ಮನೆಗೆ ಬಂದ ಮೇಲೆ ಸದಾ ಗೃಹಕೃತ್ಯದಲ್ಲಿ ನಿರತಳಾದೆ. ನಾವು ಬಡವರು, ಹೊಟ್ಟೆಪಾಡಿಗಾಗಿ ದುಡಿಯುವುದು, ಮನೆಗೆಲಸ, ಪತಿಶುಶ್ರೂಷೆ, ಅತಿಥಿ ಸತ್ಕಾರ-ಇವುಗಳಲ್ಲಿಯೇ ಹಗಲು ರಾತ್ರಿಗಳು ಕಳೆದು ಹೋಗುತ್ತಿದ್ದವು. ಯಾವುದನ್ನು ವಿಚಾರಿಸುವುದಕ್ಕೂ ಸಮಯವಿರುತ್ತಿರಲಿಲ್ಲ. ಹೀಗಿರುವಾಗ ನನ್ನ ಯೌವನ ಕಾಲದಲ್ಲಿ ನೀನು ಹುಟ್ಟಿದೆ. ನಮ್ಮ ದುರ್ದೈವದಿಂದ ನಿಮ್ಮ ತಂದೆ ಗತಿಸಿ ಹೋದರು. ನನಗೆ ದಾಯಾದಿಗಳಾದ ಬಂಧುಗಳೂ ಇಲ್ಲ. ನಿನ್ನ ಗೋತ್ರ ನನಗೆ ತಿಳಿಯದು. ನಾನು ಏನು ಮಾಡಲಪ್ಪ-"ಎಂದಳು. ಅದಕ್ಕೆ ಸತ್ಯಕಾಮನು-

"ಅಮ್ಮ, ಗುರುಗಳು ಕೇಳಿದರೆ ನಾನು ಏನು ಹೇಳಬೇಕು ?" ಎಂದನು. ಜಬಾಲೆಯು "ಇದ್ದ ಸಂಗತಿಯನ್ನು ತಿಳಿಸು, ಮಗು. ಸತ್ಯವನ್ನು ಹೇಳು. ನಾನು ಜಬಾಲಾ. ನೀನು ನನ್ನ ಮಗನಾದುದರಿಂದ ಜಾಬಾಲಾ. ನನ್ನ ಹೆಸರು ಸತ್ಯಕಾಮ. ಗೋತ್ರವು ಗೊತ್ತಿಲ್ಲ. ನನ್ನ ತಾಯಿ ಹೀಗೆ ಹೇಳಿದಳು"–ಎಂದು ನಿವೇದಿಸು"–ಎಂದಳು.

ಅನಂತರ ಸತ್ಯಕಾಮನು ತಾಯಿಯನ್ನು ಬೀಳ್ಕೊಂಡು, ಹರಿದ್ರುಮತನ ಪುತ್ರನಾದ ಗೌತಮನೆಂಬ ಆಚಾರ್ಯನ ಬಳಿಗೆ ಹೋಗಿ ವಿನಯದಿಂದ ನಮಸ್ಕರಿಸಿ,–"ಭಗವನ್, ವಿದ್ಯಾರ್ಜನೆಗಾಗಿ ತಮ್ಮ ಬಳಿಗೆ ಬಂದಿದ್ದೇನೆ. ತಾವು ಕೃಪೆಯಿಟ್ಟು ನನ್ನನ್ನು ಶಿಷ್ಯನೆಂದು ಸ್ವೀಕರಿಸಿ ಅನುಗ್ರಹಿಸಬೇಕು"–ಎಂದು ಬೇಡಿಕೊಂಡನು. ಗೌತಮನು ಆ ಬಾಲಕನನ್ನು ಕುರಿತು–"ಸೌಮ್ಯ, ನಿನ್ನ ಗೋತ್ರ ಯಾವುದು ? "ಎಂದು ಪ್ರಶ್ನಿಸಿದನು. ಅದಕ್ಕೆ ಸತ್ಯಕಾಮನು–"ಸ್ವಾಮಿ, ನನ್ನ ಗೋತ್ರ ಯಾವುದೆಂಬುದು ನನಗೆ ಗೊತ್ತಿಲ್ಲ. ನನಗೆ ತಂದೆ ಇಲ್ಲ. ತಾಯಿಯನ್ನು ಕೇಳಿದೆ. ಅವಳು ಹೇಳಿದ್ದೇನೆಂದರೆ– "ನಾವು ಬಡವರು. ಸದಾ ಹೊಟ್ಟೆಪಾಡಿಗಾಗಿ ದುಡಿಯುವುದು, ಮನೆಗೆಲಸ–ಇವುಗಳಲ್ಲಿ ನನ್ನ ಕಾಲ ಕಳೆದು ಹೋಯಿತು. ನಿನ್ನ ತಂದೆ ಗತಿಸಿಹೋದರು. ಗೋತ್ರವನ್ನು ನಾನು ವಿಚಾರಿಸಿಲ್ಲ. ಗೋತ್ರ ಗೊತ್ತಿಲ್ಲ' ಎಂಬು ಹೇಳಿದಳು. ನನ್ನ ತಾಯಿಯ ಹೆಸರು ಜಬಾಲಾ. ನಾನು ಅವಳ ಮಗ ಸತ್ಯಕಾಮ–ಜಾಬಾಲಾ" ಎಂದನು.

ಆಗ ಗೌತಮನು ಮನಸ್ಸಿನಲ್ಲಿಯೇ ಯೋಚಿಸಿ–"ನೀನು ಬ್ರಾಹ್ಮಣನೇ ಹೌದು. ಇಲ್ಲದಿದ್ದರೆ, ಇಂತಹ ಕಠೋರ ಸತ್ಯವನ್ನು ಎಂದಿಗೂ ನುಡಿಯುತ್ತಿರಲಿಲ್ಲ. ಒಳ್ಳೆಯದು. ನಿನಗೆ ಉಪನಯನವಾಗಿದೆಯೇನಪ್ಪಾ ?"–ಎಂದನು. ಸತ್ಯಕಾಮನು ತನಗೆ ಉಪನಯನವಾಗಿಲ್ಲವೆಂದು ತಿಳಿಸಿದಾಗ–"ನೀನು ಸತ್ಯವನ್ನೇ ನುಡಿದೆ. ಸತ್ಯಮಾರ್ಗದಿಂದ ಚಲಿಸಲಿಲ್ಲ. ಒಳ್ಳೆಯದು. ನಿನಗೆ ನಾನೇ ಉಪನಯನ ಮಾಡುವೆನು. ಸಮಿತ್ತುಗಳನ್ನು ತೆಗೆದುಕೊಂಡು ಬಾ"–ಎಂದು ಹೇಳಿ, ಸತ್ಯಕಾಮನಿಗೆ ವಿಧಿವತ್ತಾಗಿ ಬ್ರಹ್ಮೋಪದೇಶ ಮಾಡಿ ಉಪನಯನ ಕಾರ್ಯವನ್ನು ನೆರವೇರಿಸಿದನು.

ತರುವಾಯ ಗುರುಕುಲಕ್ಕೆ ಸೇರಿದ ಹಸುಗಳ ಮಂದೆಯಿಂದ ಕೃಶವೂ ದುರ್ಬಲವೂ ಆಗಿದ್ದ ನಾನೂರು ಗೋವುಗಳ ಹಿಂಡನ್ನು ಗೌತಮನು ಪ್ರತ್ಯೇಕಿಸಿ, ಸತ್ಯಕಾಮನನ್ನು ಕುರಿತು–"ಮಗು, ಈ ಗೋವುಗಳನ್ನು ನೀನು ನೋಡಿಕೊಳ್ಳಬೇಕು. ಇವುಗಳನ್ನು ಚೆನ್ನಾಗಿ ಮೇಯಿಸಿ, ಬೆಳಸಿ ಗೋವುಗಳ ಸಂಖ್ಯೆ ಅಧಿಕವಾಗುವಂತೆ ಎಚ್ಚರಿಕೆಯಿಂದ ಪೋಷಿಸು"–ಎಂದು ತಿಳಿಸಿದನು. ಸತ್ಯಕಾಮನು ಸಂತೋಷದಿಂದ ಗುರುಗಳ ಆಜ್ಞೆಯನ್ನು ಶಿರಸಾವಹಿಸಿ– "ಗುರುಗಳೇ, ಈ ಗೋವುಗಳನ್ನು ನಾನು ಸಾಕಿ ಬೆಳೆಸುವೆನು, ಇವುಗಳ ಸಂಖ್ಯೆ ಒಂದು ಸಾವಿರವಾಗುವವರೆಗೆ ನಾನು ಹಿಂದಕ್ಕೆ ಬರುವುದಿಲ್ಲ"–ಎಂದು ನುಡಿದು ಆ ಗೋವುಗಳನ್ನು ಕಾಡಿನೊಳಗೆ ಹೊಡೆದುಕೊಂಡು ಹೋದನು. ಯಥೇಷ್ಟ

ವಾಗಿ ಹುಲ್ಲು ನೀರು ದೊರೆಯುತ್ತಿದ್ದ ಹುಲ್ಲುಗಾವಲಿನಲ್ಲಿ ಅವನ್ನು ಎಚ್ಚರಿಕೆಯಿಂದ ಮೇಯಿಸಿ ಕಾಯತೊಡಗಿದನು. ಹೀಗೆ ಕೆಲವು ವರ್ಷಗಳು ಸಂದವು. ಗೋವುಗಳು ಪುಷ್ಟವಾಗಿ ಬೆಳೆದವು. ಕರುಗಳನ್ನು ಹಾಕಿದವು. ಆವುಗಳ ಸಂಖ್ಯೆ ಒಂದು ಸಾವಿರ ಕ್ಕೇರಿತು.

ಗುರುಭಕ್ತನಾದ ಸತ್ಯಕಾಮನು ಶ್ರದ್ಧೆಯಿಂದ ಹಸುಗಳ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದನಲ್ಲದೆ, ಸಂಧ್ಯೋಪಾಸನೆ, ಅಗ್ನಿಕಾರ್ಯ ಮುಂತಾದ ವಿಧಿಗಳನ್ನು ತಪ್ಪದೆ ನಡೆಸುತ್ತ ಬ್ರಹ್ಮಚರ್ಯವನ್ನು ಪಾಲಿಸಿಕೊಂಡಿದ್ದನು. ಆತನ ಶ್ರದ್ಧಾ ತಪಸ್ಸುಗಳಿಗೆ ವಾಯುದೇವನು ಒಲಿದು ಮಂದೆಯಲ್ಲಿದ್ದ ಒಂದು ಹೋರಿಯಲ್ಲಿ ಆವಿಷ್ಟನಾಗಿ ಸತ್ಯಕಾಮನನ್ನು ಕುರಿತು—"ಓ ಸತ್ಯಕಾಮ, ಈಗ ನಾವು ಒಂದು ಸಾವಿರ ಸಂಖ್ಯೆಯನ್ನು ಮುಟ್ಟಿದ್ದೇವೆ. ನಮ್ಮನ್ನೀಗ ಆಚಾರ್ಯ ಕುಲಕ್ಕೆ ಕರೆದು ಕೊಂಡು ಹೋಗು" ಎಂದು ಉದ್ಗರಿಸಿದನು. ಮತ್ತೆ—"ಹೇ ಸೌಮ್ಯ, ನಿನ್ನ ನಿಷ್ಠಾಭಕ್ತಿಗಳಿಗೆ ದೇವತೆಗಳಾದ ನಾವು ಮೆಚ್ಚಿದ್ದೇವೆ. ನಾನೀಗ ನಿನಗೆ ಪರಬ್ರಹ್ಮದ ಒಂದು ಪಾದವನ್ನು ಉಪದೇಶಿಸುವೆನು" ಎಂದನು. ಸತ್ಯಕಾಮನು—"ಭಗವನ್, ಆಗಬಹುದು"—ಎಂದು ನುಡಿದು ಉಪದೇಶವನ್ನು ಗ್ರಹಿಸಲು ಸಿದ್ಧನಾದನು. ವಾಯುದೇವನು— "ಸತ್ಯಕಾಮ, ಪೂರ್ವದಿಕ್ಕು ಬ್ರಹ್ಮ ಪಾದದ ಒಂದು ಕಲೆ. ಉತ್ತರದಿಕ್ಕೂ ಆದರ ಮಗದೊಂದು ಕಲೆ. ಕಲೆಯೆಂದರೆ ಪಾದದ ನಾಲ್ಕನೇ ಒಂದು ಭಾಗ. ಹೀಗೆ ಪರಬ್ರಹ್ಮಪಾದವು ಚತುಷ್ಕಲವಾಗಿದೆ. ಇದಕ್ಕೆ "ಪ್ರಕಾಶವಾನ್" ಎಂದು ಹೆಸರು. ಇದರ ರಹಸ್ಯಾರ್ಥವನ್ನರಿತ ವಿದ್ವಾಂಸನು ಬ್ರಹ್ಮದ ಚತುಷ್ಕಲವಾದ ಪಾದವು "ಪ್ರಕಾಶವಾನ್" ಎಂದು ಉಪಾಸನೆ ಮಾಡುತ್ತಿದ್ದರೆ, ಆತನು ಈ ಲೋಕದಲ್ಲಿ ಕೀರ್ತಿಶಾಲಿಯಾಗುತ್ತಾನಲ್ಲದೆ ಪರದಲ್ಲಿ ಉತ್ತಮ ಲೋಕವನ್ನು ಪಡೆಯುವನು ಎಂದು ಬೋಧಿಸಿದನು. ಅಲ್ಲದೆ ಇನ್ನೊಂದು ಪಾದವನ್ನು ಅಗ್ನಿಯು ನಿನಗೆ ಉಪದೇಶಿಸುವನು—ಎಂದನು.

ಮರುದಿನ ವಾಯುದೇವನ ಸೂಚನೆಯಂತೆ ಸತ್ಯಕಾಮನು ಎಲ್ಲ ಹಸುಗಳನ್ನು ಗುರುಕುಲಕ್ಕೆ ಹಿಂದಿರುಗಿಸಿ ಕರೆದೊಯ್ಯುತ್ತಿದ್ದನು. ದಾರಿಯಲ್ಲಿ ಸಂಜೆಯಾಯಿತು. ಹಸುಗಳನ್ನು ಒಂದೆಡೆ ತಂಗಿಸಿ, ತಾನು ಸಂಧ್ಯಾವಂದನೆಯನ್ನು ಆಚರಿಸಿ, ಅಗ್ನಿಯಲ್ಲಿ ಸಮಿತ್ತುಗಳನ್ನರ್ಪಿಸುತ್ತಾ ಅಗ್ನಿಕಾರ್ಯವನ್ನು ಪೂರೈಸಿ, ಅಗ್ನಿಯ ಪೂರ್ವಭಾಗದಲ್ಲಿ ಕುಳಿತುಕೊಂಡನು. ಆಗ ಅಗ್ನಿದೇವನು ಪ್ರಸನ್ನನಾಗಿ—"ಸತ್ಯಕಾಮ, ಪರಬ್ರಹ್ಮದ ಇನ್ನೊಂದು ಪಾದವನ್ನು ನಿನಗೆ ಉಪದೇಶಿಸಬೇಕೆಂದಿದ್ದೇನೆ"— ಎಂದನು. ಸತ್ಯಕಾಮನು ಹಾಗೆಯೇ ಆಗಲೆಂದು ವಿಜ್ಞಾಪಿಸಿಕೊಳ್ಳಲು, ಅಗ್ನಿಯು—"ಪೃಥ್ವಿಯು ಬ್ರಹ್ಮಪಾದದ ಒಂದು ಕಲೆ. ಅಂತರಿಕ್ಷವು ಇನ್ನೊಂದು ಕಲೆ. ಪರಮಾಕಾಶವು ಮತ್ತೊಂದು ಕಲೆ. ಸಮುದ್ರ ಮಗದೊಂದು ಕಲೆ. ಸೌಮ್ಯ ! ಚತುಷ್ಕಲವಾದ ಈ ಪಾದಕ್ಕೆ "ಅನಂತವಾನ್" ಎಂದು ಹೆಸರು. ಇದರ ಅರ್ಥವನ್ನರಿತ ಯಾವ ವಿದ್ವಾಂಸನು ಈ ಪರಬ್ರಹ್ಮಪಾದವು

ಚತುಷ್ಕಲವೆಂದು ಉಪಾಸನೆ ಮಾಡುತ್ತಾನೋ ಅವನು ಅನಂತವಾನ್ ಆಗುತ್ತಾನೆ-ಎಂದರೆ ಅವಿಚ್ಛಿನ್ನ ಸಂತತಿಯುಳ್ಳವನಾಗುತ್ತಾನೆ. ಕಡೆಯಲ್ಲಿ ನಾಶರಹಿತವಾದ ಪುಣ್ಯ ಲೋಕವನ್ನು ಪಡೆಯುವನು"-ಎಂದು ಬೋಧಿಸಿದನು. ಅಲ್ಲದೆ ಹಂಸರೂಪಿಯಾದ ಆದಿತ್ಯನು ಬ್ರಹ್ಮದ ಇನ್ನೊಂದು ಪಾದವನ್ನು ತಿಳಿಸುವನು–ಎಂದನು.

ರಾತ್ರಿ ಕಳೆಯಿತು. ಸತ್ಯಕಾಮನು ಪ್ರಾತಃಕೃತ್ಯಗಳನ್ನು ಮುಗಿಸಿ ಹಸುಗಳನ್ನು ಗುರುಕುಲದ ಕಡೆಗೆ ಹೊಡೆದುಕೊಂಡು ಹೋದನು. ಮತ್ತೆ ಸಂಜೆಯಾಯಿತು. ಹಸುಗಳನ್ನು ಒಂದೆಡೆ ಕೂಡಿಹಾಕಿ, ಸತ್ಯಕಾಮನು ಸಾಯಂವಿಧಿಗಳಲ್ಲಿ ನಿರತನಾದನು. ಅಗ್ನಿ ಕಾರ್ಯವನ್ನು ಮುಗಿಸಿ, ಅಗ್ನಿಯ ಪೂರ್ವಭಾಗದಲ್ಲಿ ಕುಳಿತುಕೊಂಡನು. ಆಗ ಸೂರ್ಯನು ಹಂಸ ಪಕ್ಷಿಯ ರೂಪದಲ್ಲಿ ಹಾರಿಬಂದು–"ಸತ್ಯಕಾಮ, ನಿನಗೆ ಬ್ರಹ್ಮದ ಇನ್ನೊಂದು ಪಾದವನ್ನು ಬೋಧಿಸುವೆನು, ಕೇಳು. ಅಗ್ನಿಯು ಬ್ರಹ್ಮಪಾದದ ಒಂದು ಕಲೆ. ಸೂರ್ಯನು ಇನ್ನೊಂದು ಕಲೆ. ಚಂದ್ರನು ಮತ್ತೊಂದು ಕಲೆ. ವಿದ್ಯುತ್ತು ಬ್ರಹ್ಮಪಾದದ ಮಗದೊಂದು ಕಲೆ. ಚತುಷ್ಕಲವಾದ ಈ ಬ್ರಹ್ಮಪಾದಕ್ಕೆ "ಜ್ಯೋತಿಷ್ಮಾನ್" ಎಂದು ಹೆಸರು. ಇದನ್ನರಿತು ಉಪಾಸನೆ ಮಾಡುವ ವಿದ್ವಾಂಸನು ಈ ಲೋಕದಲ್ಲಿ ತೇಜಸ್ವಿಯಾಗಿ ಬಾಳುತ್ತಾನೆ. ಅನಂತರ ಸೂರ್ಯಾದಿ ಲೋಕಗಳನ್ನು ಪಡೆಯುವನು. ಬ್ರಹ್ಮದ ಮಗದೊಂದು ಪಾದವನ್ನು ಜಲಚರ ಪಕ್ಷಿಯೊಂದು ನಿನಗೆ ಉಪದೇಶಿಸುವುದು" ಎಂದನು.

ಮರುದಿನ ಸಂಜೆ ಎಂದಿನಂತೆ ಸತ್ಯಕಾಮನು ಅಗ್ನಿಕಾರ್ಯವನ್ನು ನಡೆಸಿ, ಅಗ್ನಿಯ ಪೂರ್ವಭಾಗದಲ್ಲಿ ಕುಳಿತಿರಲಾಗಿ ಒಂದು ಜಲಚರಪಕ್ಷಿಯು ಹಾರಿ ಬಂದಿತು. ಅದು ಪ್ರಾಣ ದೇವತೆ. ಆ ಪ್ರಾಣ ದೇವನು–"ಸತ್ಯಕಾಮ, ಬ್ರಹ್ಮದ ಮತೊಂದು ಪಾದವನ್ನು ನಿನಗೆ ಉಪದೇಶಿಸುವೆನು. ಪ್ರಾಣವು ಬ್ರಹ್ಮಪಾದದ ಒಂದು ಕಲೆ. ಚಕ್ಷುರಿಂದ್ರಿಯವು ಇನ್ನೊಂದು ಕಲೆ. ಶ್ರೋತ್ರವು ಮತ್ತೊಂದು ಕಲೆ. ಮನಸ್ಸು ಬ್ರಹ್ಮಪಾದದ ನಾಲ್ಕನೆಯ ಕಲೆ. ಹೀಗೆ ಬ್ರಹ್ಮಪಾದವುಚತುಷ್ಕಲವಾಗಿದೆ. ಇದಕ್ಕೆ "ಆಯತನವಾನ್" ಎಂದು ಹೆಸರು. ಇದನ್ನು ಉಪಾಸನೆ ಮಾಡುವ ವಿದ್ವಾಂಸನು ಈ ಲೋಕದಲ್ಲಿ ಗೃಹಾರಾಮಾದಿಗಳನ್ನು ಪಡೆದು ಸುಖಿಯಾಗಿರುತ್ತಾನೆ. ಪರದಲ್ಲಿ ಉತ್ತಮ ಲೋಕವನ್ನು ಪಡೆಯುತ್ತಾನೆ" ಎಂದು ಉಪದೇಶಿಸಿ ನಿರ್ಗಮಿಸಿದನು.

ಇತ್ತಲಾಗಿ ಸತ್ಯಕಾಮನು ಹಸುಗಳನ್ನು ಗುರುಕುಲಕ್ಕೆ ಕರೆತಂದು ಗೌತಮಾಚಾರ್ಯರನ್ನು ಸಂದರ್ಶಿಸಿದನು. ಅವರಿಗೆ ಅಭಿವಾದನೆ ಮಾಡಿ–"ಗುರುಗಳೇ, ತಮ್ಮ ಆಜ್ಞೆಯಂತೆ ಎಲ್ಲ ಹಸುಗಳನ್ನೂ ಮೇಯಿಸಿ ಬೆಳೆಸಿ ಕರೆತಂದಿದ್ದೇನೆ. ಅವುಗಳ ಸಂಖ್ಯೆ ಒಂದು ಸಾವಿರಕ್ಕೇರಿದೆ. ಪರಾಮರ್ಶಿಸಬೇಕು"–ಎಂದು ವಿಜ್ಞಾಪಿಸಿದನು. ಗೌತಮನಿಗೆ ಸಂತೋಷವಾಯಿತು. ಸತ್ಯಕಾಮನು ಒಂದು ಅಪೂರ್ವವಾದ ತೇಜಸ್ಸಿನಿಂದ ಬೆಳ

ಗುತ್ತಿದ್ದುದನ್ನು ಕಂಡು, ಆಚಾರ್ಯನು ಪ್ರೀತಿಯಿಂದ–"ವತ್ಸ ಸತ್ಯಕಾಮ, ನೀನು ಬ್ರಹ್ಮಜ್ಞನಂತೆ ಕಾಣುತ್ತಿರುವೆಯಲ್ಲ ! ಯಾರು ನಿನಗೆ ಬ್ರಹ್ಮೋಪದೇಶ ಮಾಡಿದರು ?–ಎಂದು ಕೇಳಿದನು. ಸತ್ಯಕಾಮನು–"ಗುರುಗಳೇ, ತಮ್ಮ ಶಿಷ್ಯನಾದ ನನಗೆ ಯಾವ ಮಾನವನು ಬ್ರಹ್ಮೋಪದೇಶ ಮಾಡಲು ಮುಂದೆ ಬಂದಾನು ? ವಾಯು–ಮುಂತಾದ ದೇವತೆಗಳು ಪ್ರಸನ್ನರಾಗಿ ತಾವಾಗಿಯೇ ಬಂದು ಷೋಡಶಕಲ ಬ್ರಹ್ಮವನ್ನು ಉಪದೇಶಿಸಿದರು. ಆ ಈ ಬ್ರಹ್ಮೋಪದೇಶವು ತಮ್ಮಿಂದಲೇ ನನಗೆ ಆಗಬೇಕು ಆಚಾರ್ಯರಿಂದ ಉಪದಿಷ್ಟವಾದ ವಿದ್ಯೆಯೇ ಫಲಕಾರಿಯಾಗುತ್ತದೆ–"**ಆಚಾರ್ಯಾದ್ಧೈವ ವಿದ್ಯಾವಿದಿತಾ ಸಾಧಿಷ್ಠ್ಮಪ್ರಾಪತ್**"–ಎಂಬ ಮಾತನ್ನು ತಮ್ಮಂತಹ ಮಹಾತ್ಮರಿಂದ ನಾನು ಕೇಳಿದ್ದೇನೆ" ಎಂದನು. ಗೌತಮಾಚಾರ್ಯನು ಶಿಷ್ಯನ ಶ್ರದ್ಧಾವಿನಯಗಳಿಂದ ಸುಪ್ರಸನ್ನನಾಗಿ ಅದೇ ಷೋಡಶಕಲಬ್ರಹ್ಮದ ಉಪಾಸನಾ ಪದ್ಧತಿಯನ್ನು ಸತ್ಯಕಾಮನಿಗೆ ಉಪದೇಶಿಸಿ, ಅದರ ರಹಸ್ಯಾರ್ಥವನ್ನು ತಿಳಿಸಿಕೊಟ್ಟನು. ಹೀಗೆ ಸತ್ಯಕಾಮನು ಗಳಿಸಿದ ವಿದ್ಯೆ ಯಾವ ಲೋಪವೂ ಇಲ್ಲದೆ ಪರಿಪೂರ್ಣವಾಯಿತು.

## ೬–ಉಪಕೋಸಲ

ಸತ್ಯಕಾಮ ಜಾಬಾಲನು ಗುರುಕುಲದಲ್ಲಿ ಅಧ್ಯಯನ ಮಾಡುತ್ತ ಸರ್ವವಿದ್ಯೆಗಳಲ್ಲಿಯೂ ಪಾರಂಗತನಾಗಿದ್ದುದಲ್ಲದೆ, ಬ್ರಹ್ಮಜ್ಞಾನಿಯೂ ಆದನು. ಅವನು ವಿಧಿವತ್ತಾಗಿ ಸಮಾವರ್ತನೆಯನ್ನು ಮಾಡಿಕೊಂಡು ಮದುವೆಯಾಗಿ ಗೃಹಸ್ಥಾಶ್ರಮವನ್ನು ಸ್ವೀಕರಿಸಿ ಮನೆಗೆ ಬಂದ ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದನು. ಕೆಲವು ದಿನಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಅಧಿಕವಾಗಿ ಒಂದು ಗುರುಕುಲವೇ ಏರ್ಪಟ್ಟಿತು. ಸತ್ಯಕಾಮನ ಕೀರ್ತಿ ಸುತ್ತಲೂ ಹರಡಿತು. ದೂರದೇಶಗಳಿಂದಲೂ ಬಾಲಕರು ಬಂದು ಗುರುಕುಲದಲ್ಲಿ ಶಿಷ್ಯವೃತ್ತಿಯಿಂದಿದ್ದು ವಿದ್ಯಾಪಾರಂಗತರಾಗಿ ಮರಳುತ್ತಿದ್ದರು. ಹೀಗಿರುವಾಗ ಕಮಲನೆಂಬಾತನ ಪುತ್ರನಾದ ಉಪಕೋಸಲನೆಂಬ ಪುತ್ರನು ವಿದ್ಯಾರ್ಜನೆಗಾಗಿ ಬಂದು ಈ ಗುರುಕುಲದಲ್ಲಿ ನೆಲಸಿದ್ದನು. ಸತ್ಯಕಾಮಾಚಾರ್ಯನು ಅಗ್ನಿಹೋತ್ರಿಯಾದ್ದರಿಂದ ಯಾಗ ಶಾಲೆಯಲ್ಲಿ ಗಾರ್ಹಪತ್ಯ, ದಕ್ಷಿಣಾಗ್ನಿ, ಆಹವನೀಯ–ಎಂಬ ಅಗ್ನಿತ್ರಯವನ್ನು ಸ್ಥಾಪಿಸಿ, ಪ್ರತಿದಿನವೂ ವಿಧಿವತ್ತಾಗಿ ಹೋಮ ಮಾಡುತ್ತಿದ್ದನು. ಉಪಕೋಸಲನು ವಿಶೇಷವಾಗಿ ಯಾಗ ಶಾಲೆಯಲ್ಲಿದ್ದು ಹೋಮಕಾರ್ಯದಲ್ಲಿ ಗುರುವಿಗೆ ನೆರವಾಗುತ್ತಿದ್ದನು. ಶ್ರದ್ಧಾಭಕ್ತಿಗಳಿಂದ ಅಗ್ನಿಪರಿಚರ್ಯೆ ಮಾಡುವುದು ಅವನಿಗೆ ಪ್ರಿಯವಾಗಿತ್ತು.

ಗುರುಕುಲದಲ್ಲಿದ್ದು ಬಹುಮಂದಿ ಶಿಷ್ಯರು ವಿದ್ಯಾವಂತರಾಗಿ ಗುರುವಿನ ಅನುಜ್ಞೆಯನ್ನು ಪಡೆದು ಹೊರಟು ಹೋಗುತ್ತಿದ್ದರು. ಹೀಗೆ ಒಬ್ಬರಾದ ಮೇಲೊಬ್ಬರಂತೆ ಅವರು ಹೋಗುತ್ತಿದ್ದರೂ ಉಪಕೋಸಲನಿಗೆ ಗುರುಕುಲದಿಂದ ಹೋಗಲು ಅನುಮತಿ ದೊರೆಯಲೇ ಇಲ್ಲ. ಇದರಿಂದ ಆತನ ಮನಸ್ಸಿಗೆ ಬಹಳ ಖೇದವಾಗಿತ್ತು. ಇದನ್ನು

ಬಾಯಿಬಿಟ್ಟು ಆಚಾರ್ಯನಿಗೆ ಹೇಳಲು ಧೈರ್ಯವಿಲ್ಲ. ಈ ಸಂಗತಿ ಆಚಾರ್ಯ ಪತ್ನಿಗೆ ತಿಳಿದಿತ್ತು. ಒಂದು ಅವಳೇ ಸತ್ಯಕಾಮನನ್ನು ಕುರಿತು "ಉಪಕೋಸಲನು ಬಹು ವರ್ಷಗಳಿಂದ ನಿಮ್ಮ ಸೇವೆ ಮಾಡಿದ್ದಾನೆ. ನಿಷ್ಠೆಯಿಂದ ಅಗ್ನಿ ಶಾಲೆಯಲ್ಲಿದ್ದು ಅಗ್ನಿ ಗಳ ಪರಿಚರ್ಯೆಯನ್ನು ಮಾಡುತ್ತಿದ್ದಾನೆ. ಇನ್ನೂ ನೀವು ಈ ಬ್ರಹ್ಮಚಾರಿಗೆ ಅನು ಗ್ರಹ ಮಾಡಲಿಲ್ಲ. ಇವನು ಬಹಳ ಬೇಜಾರುಪಟ್ಟುಕೊಂಡಿದ್ದಾನೆ. ಈಗಲಾದರೂ ಇವನಿಗೆ ಬ್ರಹ್ಮೋಪದೇಶವನ್ನು ಮಾಡಿ, ಗುರುಕುಲದಿಂದ ಹೋಗಲು ಅನುಜ್ಞೆ ಕೊಡು ವುದು ಒಳ್ಳೆಯದು. ಇಲ್ಲದಿದ್ದರೆ, ಈತನ ಸೇವೆಗೆ ಮೆಚ್ಚಿ ತ್ರೇತಾಗ್ನಿಗಳೇ ಬ್ರಹ್ಮ ಸ್ವರೂಪವನ್ನು ಈತನಿಗೆ ತಿಳಿಸಿಬಿಡಬಹುದು. ಆಗ ನಿಮ್ಮ ಕೀರ್ತಿಗೆ ಅಡ್ಡಿಯಾದೀತು" ಎಂದು ನಿವೇದಿಸಿದಳು. ಅದಕ್ಕೆ ಸತ್ಯಕಾಮನು ಯಾವ ಉತ್ತರವನ್ನೂ ನೀಡದೆ ಪ್ರವಾ ಸದ ಮೇಲೆ ಹೊರಟು ಹೋದನು.

ಇತ್ತ ಉಪಕೋಸಲನು ಅತ್ಯಂತ ದುಃಖತಪ್ತನಾಗಿ ಊಟ ಮಾಡುವುದನ್ನೇ ಬಿಟ್ಟನು. ಗುರುಪತ್ನಿಯು ವಾತ್ಸಲ್ಯದಿಂದ ಬಂದು– "ಮಗು ಊಟ ಮಾಡಪ್ಪ. ಹಸಿ ವಿನಿಂದ ಬಳಲಬೇಡ"–ಎಂದು ಊಟ ಮಾಡಲು ಒತ್ತಾಯಿಸಿದಳು. ಉಪಕೋಸಲನಿಗೆ ಏನೂ ಬೇಡವೆನಿಸಿತು. "ಅಮ್ಮ ನನ್ನನ್ನು ಒತ್ತಾಯಿಸ ಬೇಡಿರಿ. ಮನೋವ್ಯಾಧಿಗಳು ನನ್ನನ್ನು ತಿನ್ನುತ್ತಿವೆ. ನಾನು ಏನನ್ನೂ ತಿನ್ನಲಾರೆ"-ಎಂದು ಬಿಟ್ಟನು.

ಅಗ್ನಿದೇವತೆಗಳು ಈ ಬ್ರಹ್ಮಚಾರಿಯ ದೃಢವಾದ ಭಕ್ತಿ, ಜ್ಞಾನದಲ್ಲಿ ತೀವ್ರ ಆಸಕ್ತಿಗಳಿಂದ ಪ್ರಸನ್ನರಾದರು. ಉಪಕೋಸಲನ ವಿಷಯದಲ್ಲಿ ಅವರಿಗೆ ಕರುಣೆ ಹುಟ್ಟಿತು. "ಆಹಾ ! ಈ ಬ್ರಹ್ಮಚಾರಿ ಭಕ್ತಿಯಿಂದ ನಮ್ಮನ್ನು ಸೇವಿಸಿದ್ದಾನೆ. ತಪ ಸ್ವಿಯೂ ಶ್ರದ್ಧಾವಂತನೂ ಆಗಿದ್ದಾನೆ. ಗುರುವಿನ ಅನುಗ್ರಹವಾಗಲಿಲ್ಲವೆಂದು ದುಃಖಿ ತನಾಗಿದ್ದಾನೆ. ಈತನಿಗೆ ಬ್ರಹ್ಮ ವಿದ್ಯೆಯನ್ನು ಉಪದೇಶಿಸೋಣ"–ಎಂದು ಮಾತಾಡಿ ಕೊಂಡು ಉಪಕೋಸಲನನ್ನು ನೋಡಿ ಹೀಗೆಂದರು–"ಉಪಕೋಸಲ ನಿನಗೆ ಬ್ರಹ್ಮವಿದ್ಯೆ ಯನ್ನು ಬೋಧಿಸುತ್ತೇವೆ, ಕೇಳು. **"ಪ್ರಾಣೋಬ್ರಹ್ಮ, ಕಂ ಬ್ರಹ್ಮ ಖಂ ಬ್ರಹ್ಮ"** ಪ್ರಾಣವು ಬ್ರಹ್ಮವೇ, ಕ ಎಂಬುದೂ ಬ್ರಹ್ಮ, ಖ ಎಂಬುದೂ ಬ್ರಹ್ಮ"—ಎಂದು ಹೇಳಿ ದರು. ಆಗ ಬ್ರಹ್ಮಚಾರಿಯು–"ಪೂಜ್ಯದೇವತೆಗಳೇ ಪ್ರಾಣವು ಬ್ರಹ್ಮವೇ ಎಂಬು ದನ್ನು ಅರ್ಥಮಾಡಿಕೊಂಡೆನು. ಕಂ ಬ್ರಹ್ಮ, ಖಂ ಬ್ರಹ್ಮ—ಎಂಬುದರ ಅಭಿಪ್ರಾಯ ಮಾತ್ರ ಆಗಲಿಲ್ಲ"—ಎಂದನು. ಪ್ರಾಣವು ದೇಹವನ್ನು ಧರಿಸತಕ್ಕದ್ದು. ಅದು ಹೋ ದರೆ ಪ್ರಾಣಿಯು ಸತ್ತನೆಂದೇ ಆಗುತ್ತದೆ. ಅದು ಕ್ರಿಯಾಶೀಲವಾದದ್ದು. ಅದು ಪರ ಮಾರ್ಥದಲ್ಲಿ ಬ್ರಹ್ಮವೇ ಎಂದು ಹೇಳಿದರೆ ಒಂದು ಅಭಿಪ್ರಾಯ ಮೂಡುತ್ತದೆ. ಕ, ಖ, ಗಳ ವಿಷಯ ಹಾಗಲ್ಲ. ಕ ಎಂದರೆ ಸುಖ. ನಾವು ಅನುಭವಿಸುವ ಸುಖವು ಕ್ಷಣಿಕವೂ ಕ್ಷುದ್ರವೂ ಆದದ್ದು. ಖ ಅಂದರೆ ಆಕಾಶ. ಅದು ಅಚೇತನ. ಇವು ಹೇಗೆ ಬ್ರಹ್ಮ ವೆನಿಸುತ್ತವೆ ? ಎಂಬುದು ಉಪಕೋಸಲನ ಶಂಕೆ. ಆಗ ತ್ರೇತಾಗ್ನಿಗಳು–ಓ ಬ್ರಹ್ಮ

ಚಾರಿ, **"ಯದ್ವಾವ ಕಂ ತದೇವ ಖಂ, ಯದೇವ ಖಂ ತದೇವ ಕಂ"**—ಎಂದು ಹೇಳಿದರು. ಬ್ರಹ್ಮಚಾರಿಯು "ತಿಳಿಯಿತು" ಎಂದು ತಲೆಯಾಡಿದನು. ಅಗ್ನಿಗಳ ಮಾತಿನ ಅಭಿಪ್ರಾಯವೇನೆಂದರೆ, "ಆಕಾಶ ವಿಶಿಷ್ಟವಾದ ಸುಖವು ಬ್ರಹ್ಮ, ಸುಖ ವಿಶಿಷ್ಟವಾದ ಆಕಾಶವು ಬ್ರಹ್ಮ"—ಎಂದು ಹೀಗೆ ಉಭಯಕ್ಕೂ ವಿಶೇಷಣಗಳನ್ನು ಕೊಟ್ಟಿದ್ದರಿಂದ ಲೌಕಿಕವಾದ ವಿಷಯ ಸುಖವೂ ಬ್ರಹ್ಮವಲ್ಲ. ಅಚೇತನವಾದ ಭೂತಾಕಾಶವೂ ಬ್ರಹ್ಮವಲ್ಲವೆಂದು ಹೇಳಿದಂತಾಯಿತು. ಮತ್ತೇನೆಂದರೆ, ಹೃದಯದ ದಹರಾಶದಲ್ಲಿ ಆನಂದ ಸ್ವರೂಪವಾದ ಬ್ರಹ್ಮವು ಯೋಗಿಜನಗಮ್ಯವೆಂದು ಶಾಸ್ತ್ರದಲ್ಲಿ ಪ್ರಸಿದ್ಧಿಯುಂಟು. ಆದ್ದರಿಂದ ಆನಂದ ವಿಶಿಷ್ಟವಾದ ದಹರಾಕಾಶವನ್ನೂ ದಹರಾಕಾಶದಲ್ಲಿರುವ ಪ್ರಾಣವನ್ನೂ ಬ್ರಹ್ಮಬುದ್ಧಿಯನ್ನಿಟ್ಟು ಉಪಾಸನೆ ಮಾಡಬೇಕೆಂದು ತ್ರೇತಾಗ್ನಿಗಳ ಉಪದೇಶದ ರಹಸ್ಯ.

ಹೀಗೆ ಮೂರು ಅಗ್ನಿಗಳೂ ಉಪದೇಶಿಸಿದ ಮೇಲೆ ಅವರಲ್ಲೊಬ್ಬನಾದ ಗಾರ್ಹಪತ್ಯಾಗ್ನಿಯು "ಉಪಕೋಸಲ, ನನಗೆ ಪೃಥಿವೀ, ಅಗ್ನಿ ಅನ್ನ, ಆದಿತ್ಯ-ಎಂದು ನಾಲ್ಕು ಶರೀರಗಳುಂಟು. ಇವುಗಳ ನಡುವೆ ಆದಿತ್ಯ ಮಂಡಲದಲ್ಲಿ ಪ್ರಸಿದ್ಧನಾದ ಯಾವ ಪುರುಷನುಂಟೋ ಅವನೇ ನಾನು. ನಾನೇ ಅವನು. ಈ ಪ್ರಕಾರವಾಗಿ ತಿಳಿದು ಯಾವಾತನು ನನ್ನನ್ನು ಉಪಾಸನೆ ಮಾಡುತ್ತಾನೋ ಅವನು ಸಕಲ ಪಾಪಗಳನ್ನೂ ತೊಡೆದುಹಾಕಿ ಕಲ್ಯಾಣ ಭಾಜನನಾಗುತ್ತಾನೆ."-ಎಂದು ತಿಳಿಸಿದನು.

ಆಮೇಲೆ ಆಹಾರ್ಯಪಚನನೆಂಬ ನಾಮಾಂತರವುಳ್ಳ ಗಾರ್ಹಪತ್ಯಾಗ್ನಿಯೂ-"ವತ್ಸ, ನನಗೆ ಜಲ, ದಿಕ್ಕು, ನಕ್ಷತ್ರ, ಚಂದ್ರ- ಎಂಬ ನಾಲ್ಕು ದೇಹಗಳುಂಟು. ಇವುಗಳಲ್ಲಿ ಚಂದ್ರನಲ್ಲಿರುವ ಪುರುಷನೇ ನಾನು. ನಾನೇ ಅವನು. ಇದನ್ನರಿತು ನನ್ನನ್ನು ಉಪಾಸನೆ ಮಾಡಿದರೆ, ಸಕಲ ದೋಷಗಳನ್ನು ಪರಿಹರಿಸಿಕೊಂಡು ನಿಖಿಲ ಶ್ರೇಯಸ್ಸುಗಳನ್ನೂ ಪಡೆಯಬಹುದು."-ಎಂದನು.

ಆಮೇಲೆ ಆಹವನೀಯಾಗ್ನಿಯು- "ಹೇ ಸೌಮ್ಯ, ನನಗೆ ಪ್ರಾಣ, ಆಕಾಶ, ದ್ಯುಲೋಕ, ವಿದ್ಯುತ್ -ಎಂಬ ನಾಲ್ಕು ಶರೀರಗಳುಂಟು. ವಿದ್ಯುತ್ತಿನಲ್ಲಿರುವ ಪುರುಷನೇ ನಾನು. ನಾನೇ ಅವನು. ಇದನ್ನು ತಿಳಿದು ಉಪಾಸನೆ ಮಾಡತಕ್ಕವನು ಸಮಸ್ತ ಅಭ್ಯುದಯಗಳನ್ನು ಪಡೆಯುತ್ತಾನೆ." ಎಂದು ಉಪದೇಶಿಸಿದನು

ಅನಂತರ, ಎಲ್ಲ ಅಗ್ನಿಗಳೂ ಒಟ್ಟಿಗೆ-"ಸೌಮ್ಯ-ಉಪಕೋಸಲ, ಈಗ ನಾವು ಉಪದೇಶಿಸಿರುವ ವಿದ್ಯೆಗೆ ಅಗ್ನಿವಿದ್ಯೆಯೆಂದೂ ಆತ್ಮವಿದ್ಯೆಯೆಂದೂ ಹೆಸರು. ನಿನ್ನ ಆಚಾರ್ಯನು ಉಪಾಸಕನಿಗೆ ದೊರೆಯುವ ಫಲವನ್ನು ತಿಳಿಸಿಕೊಡುವನು. "ಆಚಾರ್ಯಾದ್ಧ್ಯೆವ ವಿದ್ಯಾವಿದಿತಾ ಸಾಧಿಷ್ಠಂ ಪ್ರಾಪತ್"-ಎಂದು ಹೇಳಿ ಸುಮ್ಮನಾದವು. ಉಪಕೋಸಲನು ಅಗ್ನಿ ಪರಿಚರ್ಯೆಯನ್ನು ಮಾಡುತ್ತಾ ಗುರುಕುಲದಲ್ಲಿ ತನ್ನ ಕರ್ತವ್ಯವನ್ನು

ನಿರ್ವಹಿಸುತ್ತಿದ್ದನು. ಕೆಲವು ದಿನಗಳ ನಂತರ ಸತ್ಯಕಾಮಾಚಾರ್ಯನು ತನ್ನ ಆಶ್ರಮಕ್ಕೆ ಹಿಂದಿರುಗಲಾಗಿ, ಉಪಕೋಸಲನು ಹೋಗಿ ಗುರುಗಳಿಗೆ ಅಭಿವಾದನ ಮಾಡಿದನು. ಸತ್ಯಕಾಮನು ಶಿಷ್ಯನ ಮುಖವನ್ನು ನೋಡುತ್ತ–"ಸೌಮ್ಯ ಉಪಕೋಸಲ, ಆತ್ಮಜ್ಞಾನಿಯಂತೆ ಕಾಣುತ್ತಿರುವಿಯಲ್ಲ ! ಯಾರು ನಿನಗೆ ಆತ್ಮವಿದ್ಯೆಯನ್ನು ಉಪದೇಶಿಸಿದರು ?" ಎಂದು ಕೇಳಿದನು. ಉಪಕೋಸಲನು ಕೈಮುಗಿದುಕೊಂಡು– "ಭಗವಾನ್, ನೀವು ಪ್ರವಾಸದ ಮೇಲೆ ಹೋಗಿರುವ ಸಮಯದಲ್ಲಿ ನನಗೆ ಉಪದೇಶ ಮಾಡಲು ಯಾರಿಗೆ ಧೈರ್ಯಬಂದೀತು ? ಇಲ್ಲಿ ನೋಡಿ. ಈ ಅಗ್ನಿಗಳು ನಿಮ್ಮೆದುರಿಗೆ ಹೆದರಿ ನಡುಗುತ್ತಿರು ವಂತೆ ಕಾಣುತ್ತಿವೆ !" ಎಂದನು. ಸತ್ಯಕಾಮನು– "ಅಗ್ನಿದೇವತೆಗಳು ನಿನಗೆ ಏನು ಬೋಧಿಸಿದರು ?" ಎಂದನು. ಅದಕ್ಕೆ ಉಪಕೋಸಲನು –"ಭಗವಾನ್, ತ್ರೇತಾಗ್ನಿಗಳು– **"ಕಂಬ್ರಹ್ಮ, ಖಂಬ್ರಹ್ಮ"**–ಸೂರ್ಯ, ಚಂದ್ರ, ವಿದ್ಯುತ್ತುಗಳಲ್ಲಿ ಕಾಣುವ ಪುರುಷನೇ ಬ್ರಹ್ಮ–ಎಂದು ಹೇಳಿದರು." ಎಂದು ನುಡಿದನು. ಆಗ ಸತ್ಯಕಾಮನು ನಸುನಗುತ್ತ ವಾತ್ಸಲ್ಯದಿಂದ–" ವತ್ಸ ಉಪಕೋಸಲ, ಆ ದೇವತೆಗಳು ಬ್ರಹ್ಮೋಪಾಸನೆಗೆ ಯೋಗ್ಯವಾದ ಸ್ಥಳಗಳನ್ನು ತಿಳಿಸಿದ್ದಾರೆ. ಬ್ರಹ್ಮವನ್ನಲ್ಲ. ಹಾಗೆ ಉಪಾಸನೆ ಮಾಡತಕ್ಕವರು ಅರ್ಚಿರಾದಿ ಮಾರ್ಗದಿಂದ ಕ್ರಮಮುಕ್ತಿಯನ್ನು ಹೊಂದುವರು. ನಾನೀಗ ನಿನಗೆ ಸಾಕ್ಷಾತ್ ಬ್ರಹ್ಮಸ್ವರೂಪವನ್ನು ತಿಳಿಸಿಕೊಡುತ್ತೇನೆ. ಇದನ್ನರಿತರೆ, ತಾವರೆ ಎಲೆಗೆ ಹೇಗೆ ನೀರು ಅಂಟುವುದಿಲ್ಲವೋ ಹಾಗೆ ಯಾವ ಕರ್ಮಫಲವೂ ಅಂಟುವುದಿಲ್ಲ. ಅವಿನಾಶಿಯೂ ಅಭಯವೂ ಆದದ್ದು ಬ್ರಹ್ಮ. ಬ್ರಹ್ಮಚರ್ಯಾದಿ ಸಾಧನ ಸಂಪನ್ನರೂ ಶಾಂತರೂ ವಿವೇಕಿಗಳೂ ಆದವರು ಈ ಪರತತ್ತ್ವವನ್ನು ಕಣ್ಣಿನಲ್ಲಿಯೂ ಕಾಣಬಹುದು. ಅಗ್ನಿದೇವತೆಗಳು ಹೇಳಿದಂತೆ ಚಂದ್ರ, ಸೂರ್ಯಮಂಡಲಗಳಲ್ಲಿಯೂ, ವಿದ್ಯುತ್ತಿನಲ್ಲಿಯೂ ಕಾಣಬಹುದು. ಆದರೆ, ಕಣ್ಣಿನ ಗೋಳಕ ಮೊದಲಾದದ್ದೇ ಬ್ರಹ್ಮವಲ್ಲ. ದೃಷ್ಟಿಗೂ ದ್ರಷ್ಟಾರನಾದ ದೃಕ್ ಎಂಬುದೇ ಬ್ರಹ್ಮ. ಸಮಸ್ತವೂ ಅದೇ. ಇಂತಹ ಬ್ರಹ್ಮವನ್ನರಿತವನು ಮುಕ್ತನೇ ಸರಿ. ಆತನಿಗೆ ಪುನರ್ಜನ್ಮವಿಲ್ಲ ಎಂದು ಉಪದೇಶಿಸಿದನು.

## ೭. ಪ್ರಾಣದ ಶ್ರೇಷ್ಠತೆ (ಛಾಂದೋಗ್ಯೋಪನಿಷತ್)

ಪ್ರಾಣವು ಇಂದ್ರಿಯಗಳಿಂಗಿತ ಶ್ರೇಷ್ಠವಾದದ್ದು. ಪ್ರಾಣೋಪಾಸನೆ ಮಾಡತಕ್ಕವನು ಸಮಾಜದಲ್ಲಿ ಶ್ರೇಷ್ಠವಾದ ಸ್ಥಾನವನ್ನು ಪಡೆದು ಧನಸಂಪತ್ತನ್ನು ಗಳಿಸಬಲ್ಲನು. ಆಗ ಆತನಿಗೆ ಶಾಸ್ತ್ರವಿಹಿತವಾದ ಇತರ ಕರ್ಮಗಳನ್ನು ಆಚರಿಸುವ ಸಾಮರ್ಥ್ಯ ಬರುತ್ತದೆ. ಆದ್ದರಿಂದ ಪ್ರಾಣದ ಶೇಷ್ಠತೆಯನ್ನು ಮನಗಾಣಿಸುವುದಕ್ಕಾಗಿ ಉಪನಿಷತ್ತಿನಲ್ಲಿ ಈ ಆಖ್ಯಾಯಿಕೆ ಬಂದಿದೆ.

ಒಂದು ಸಲ ಪ್ರಾಣಕ್ಕೂ ವಾಗಾದಿ ಇಂದ್ರಿಯಗಳಿಗೂ ಜಗಳ ಹುಟ್ಟಿತು. ಮನುಷ್ಯನ ದೇಹದಲ್ಲಿ ಯಾವುದು ಶ್ರೇಷ್ಠ ? ಎಂದು. ಪ್ರಾಣ ಹೇಳಿತು– "ಈ ದೇಹ

ದಲ್ಲಿ ನಾನೇ ಶ್ರೇಷ್ಠ. ಏಕೆಂದರೆ, ನಾನು ಹಿರಿಯನಾದವನು. ನಾನು ಇಲ್ಲಿಗೆ ಬಂದ ಮೇಲೆ ನೀವು ಇಲ್ಲಿಗೆ ಬಂದು ಸೇರಿಕೊಂಡಿದ್ದೀರಿ. ನಾನಿಲ್ಲದಿದ್ದರೆ, ಈ ದೇಹದ ವ್ಯಾಪಾರ ವೇನೂ ನಡೆಯುವುದಿಲ್ಲ."– ಎಂದು. ಆಗ ವಾಗಿಂದ್ರಿಯವು– "ವಯಸ್ಸಿನಲ್ಲಿ ಹಿರಿಯ ನಾದ ಮಾತ್ರಕ್ಕೆ ಶ್ರೇಷ್ಠತೆ ಬಂದು ಬಿಡುವುದಿಲ್ಲ. ನೀನು ಮಾಡುವ ಕೆಲಸವಾದರೂ ಏನು ? ಒಳಗೆ ಹೊರಗೆ ತಿರುಗಾಡಿಕೊಂಡು ಸುಖವಾಗಿ ಕಾಲಯಾಪನೆ ಮಾಡುತ್ತಿದ್ದೀಯೆ ! ನನ್ನನ್ನು ನೋಡು, ನನ್ನಿಂದಲೇ ಮನುಷ್ಯನಿಗೆ ವಿದ್ಯೆ, ಧನ ಮೊದಲಾದುದರ ಸಂಪಾದನೆ. ನನ್ನಿಂದಲೇ ವಾಗ್ಮಿಯೆಂದು ಲೋಕದಲ್ಲಿ ವಿಖ್ಯಾತನಾಗುತ್ತಾನೆ. ಈತನ ವ್ಯವಹಾರಗಳೆಲ್ಲವಕ್ಕೂ ನಾನೇ ಕಾರಣ. ಆದ್ದರಿಂದ ನಾನೇ ಶ್ರೇಷ್ಠ"– ಎಂದಿತು. ಆಗ ಚಕ್ಷುರಿಂದ್ರಿಯವು ಎದ್ದು ನಿಂತು– "ಸುಮ್ಮನಿರು. ಬಹಳ ಮಾತನಾಡಬೇಡ. ಮನುಷ್ಯನಿಗೆ ಕಣ್ಣಿಲ್ಲದಿದ್ದರೆ ಏನು ಮಾಡಲಾದಿತು? ಕಣ್ಣಿನಿಂದ ನೋಡಿಯಲ್ಲವೇ ಎಲ್ಲ ಕಾರ್ಯಗಳನ್ನೂ ನಡೆಸಲು ಮನುಷ್ಯನು ಸಮರ್ಥನಾಗುತ್ತಾನೆ. ನಾನಿಲ್ಲದಿದ್ದರೆ ಈತನು ಎಡವಿಬಿದ್ದು ಸತ್ತುಹೋದಾನು! ನನ್ನ ಶ್ರೇಷ್ಠತೆಯನ್ನು ಗಮನಿಸಿಯೇ ನೀತಿಶಾಸ್ತ್ರಕಾರರು "ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ''– ಎಂದಿದ್ದಾರೆ. ಆದ್ದರಿಂದ ನಿಮ್ಮೆಲ್ಲರಿಗಿಂತಲೂ ನಾನೇ ಮುಖ್ಯನಾದವನು" ಎಂದಿತು. ಒಡನೆಯೇ ಶ್ರೋತ್ರೇಂದ್ರಿಯವು ಎದ್ದು ನಿಂತು– "ನೀವೆಲ್ಲರೂ ಜಂಬಗಾರರು. ಮನುಷ್ಯನಿಗೆ ಕಿವಿಯಿಂದ ಕೇಳುವ ಶಕ್ತಿ ಇಲ್ಲದಿದ್ದರೆ ವಿದ್ಯೆಯೂ ಇಲ್ಲ ಹಣವೂ ಇಲ್ಲ, ಅನ್ನವೂ ಇಲ್ಲ. ಗುರು ಹೇಳಿದ್ದೇ ಕೇಳಿಸದೇ ಹೋದಾಗ, ಶಿಷ್ಯನು ವಿದ್ಯಾವಂತನಾಗುವುದು ಹೇಗೆ ? ವಿದ್ಯೆಯಿಲ್ಲದಿದ್ದಾಗ ಹಣವೆಲ್ಲಿ? ಅನ್ನವೆಲ್ಲಿ? ಇನ್ನೊಬ್ಬರು ಹೇಳಿದ್ದೇ ಕೇಳಿಸದೇ ಹೋದಾಗ ಮಾತಾಡಿ ಪ್ರಯೋಜನ ವೇನು? ನಾನಿಲ್ಲದಿದ್ದರೆ ಮನುಷ್ಯನ ವ್ಯವಹಾರವೇ ನಿಂತು ಹೋದೀತು ? ಆದ್ದರಿಂದ ನಾನೇ ಶ್ರೇಷ್ಠ"– ಎಂದಿತು. ಅನಂತರ ಮನಸ್ಸು ಎದ್ದು ನಿಂತು ಕೈ ಬೀಸುತ್ತಾ- ನಿಮ್ಮ ಅಬ್ಬರ ಸಾಕು. ಮನಷ್ಯನಲ್ಲಿ ಬುದ್ಧಿ, ತಿಳುವಳಿಕೆ, ಜ್ಞಾನ- ಎಂಬುದು" ಮುಖ್ಯವಾದದ್ದು. ಇದನ್ನು ಕೊಡತಕ್ಕವನು ನಾನು. ನನ್ನ ಆಜ್ಞೆಯನ್ನು ಪಾಲಿಸ ತಕ್ಕವರು ನೀವು. ನಾನಿಲ್ಲದಿದ್ದರೆ ಮನುಷ್ಯನಿಗೆ ಅನ್ನ ದೊರಕೀತೇ? ಇದು ಸ್ಪಷ್ಟವಾಗಿದ್ದರೂ ನಿಮ್ಮನ್ನು ನೀವೇಹೊಗಳಿಕೊಳ್ಳುತ್ತಿದ್ದೀರಲ್ಲ! ಈದೇಹದಲ್ಲಿ ಸರ್ವೋತ್ತಮನೆಂದರೆ ನಾನೇ"– ಎಂದು ಗಡುಸಾಗಿ ಅಬ್ಬರಿಸಿತು. ಇತರ ಇಂದ್ರಿಯಗಳೂ ತಮ್ಮ ತಮ್ಮ ವಾದಗಳನ್ನು ಮುಂದಿಟ್ಟವು. ಯಾರು ಜಗ್ಗಲಿಲ್ಲ. ಜಗಳ ಬಗೆಹರಿಯಲಿಲ್ಲ. ಇಲ್ಲಿ ಪ್ರಾಣ, ಇಂದ್ರಿಯ– ಅಂದರೆ ಅವುಗಳ ಅಧಿಷ್ಠಾತೃ ದೇವತೆಗಳೆಂದು ತಿಳಿಯಬೇಕು.

ಅನಂತರ ಪ್ರಾಣದೇವತೆ ಹೀಗೆ ಆಲೋಚಿಸಿತು.– "ನಮ್ಮನ್ನು ನಿರ್ಮಿಸಿ ಈ ಮನಷ್ಯ ದೇಹದಲ್ಲಿ ಸೇರಿಸಿ, ನಮ್ಮ ಕರ್ತವ್ಯವನ್ನು ನೆರವೇರಿಸುತ್ತಿರಬೇಕೆಂದು ನಿಯಮಿಸಿದವನು ಪ್ರಜಾಪ್ರತಿಬ್ರಹ್ಮ. ಆತನ ಬಳಿಗೆ ಹೋಗಿ ನೇರವಾಗಿ ಕೇಳಿಬಿಡುತ್ತೇನೆ– "ನಮ್ಮಲ್ಲಿ ಯಾರು ಶ್ರೇಷ್ಠ–ಎಂದು. ಆಗ ಗೊತ್ತಾಗುತ್ತದೆ ಇವರೆಲ್ಲರ ಬಂಡವಾಳ"–

ಎಂದು. ಆದರಂತೆಯೇ ಪ್ರಾಣದೇವತೆ ಬ್ರಹ್ಮನ ಬಳಿಗೆ ಹೋಗಿ- "ಪ್ರಭು ನಮ್ಮನ್ನು ಸೃಷ್ಟಿಸಿದವನು. ನೀನು ಈಗ ಶ್ರೇಷ್ಠತೆಯನ್ನು ಕುರಿತು ನಮಲ್ಲಿ ವಿವಾದ ಎದ್ದಿದೆ. ನಮ್ಮಲ್ಲಿ ಶ್ರೇಷ್ಠರಾರೆಂದು ನೀನೇ ತೀರ್ಪು ಕೊಡಬೇಕು"- ಎಂದು ಪ್ರಾರ್ಥಿಸಿಕೊಂಡಿತು. ಆಗ ಬ್ರಹ್ಮದೇವನು ತನ್ನ ಮನಸ್ಸಿನಲ್ಲಿ- "ಪ್ರಾಣವು ಶ್ರೇಷ್ಠವೆಂಬುದರಲ್ಲಿ ಸಂದೇಹವೆ ಇಲ್ಲ. ಹಾಗೆ ತೀರ್ಪು ಕೊಟ್ಟರೂ ಇವರ ಜಗಳ ಬಗೆ ಹರಿಯುವುದಿಲ್ಲ. ಇದನ್ನು ರುಜು ವಾತು ಮಾಡಿಕೊಟ್ಟಾಗ ಮಾತ್ರ ಉಳಿದವರು ತೆಪ್ಪಗಿರುತ್ತಾರೆ" ಎಂದು ಅಲೋಚಿಸಿ, "ಎಲೈ ಪ್ರಾಣದೇವತೆ, ನಿಮ್ಮಲ್ಲಿ ಒಬ್ಬೊಬ್ಬರೂ ಅನುಕ್ರಮವಾಗಿ ಆ ದೇಹವನ್ನು ಬಿಟ್ಟು ಒಂದು ವರ್ಷ ಕಾಲ ಹೊರಗೆ ಹೋಗಿರಿ. ಆಗ ನಿಮ್ಮಲ್ಲಿ ಯಾರು ಶ್ರೇಷ್ಠರೆಂಬುದು ತಾನಾಗಿಯೇ ತಿಳಿದು ಬರುತ್ತದೆ"- ಎಂದು ಆದೇಶವನ್ನಿತ್ತನು. ಅನಂತರ ಪ್ರಾಣ ದೇವತೆ ಹಿಂದಕ್ಕೆ ಬಂದು ಬ್ರಹ್ಮನ ಈ ತೀರ್ಪನ್ನು ಉಳಿದ ಇಂದ್ರಿಯಗಳಿಗೆ ತಿಳಿಸಿತು.

ಆಗ ವಾಗಿಂದ್ರಿಯವು ಮುಂದೆ ಬಂದು-"ಆಗಲಿ, ನಾನು ಈ ಮನುಷ್ಯ ದೇಹವನ್ನು ಬಿಟ್ಟು ಒಂದು ವರ್ಷಕಾಲ ಹೊರಗೆ ಹೋಗಿರುತ್ತೇನೆ. ಅಷ್ಟರಲ್ಲಿ ನಿಮ್ಮ ಪರಿಸ್ಥಿತಿ ಏನಾಗುತ್ತದೆಯೆಂಬುದು ಗೊತ್ತಾಗುತ್ತದೆ"—"ಎಂದು ಹೇಳಿ ದೇಹವನ್ನು ಬಿಟ್ಟು ಬಿಂಕದಿಂದ ಹೊರಟು ಹೋಯಿತು. ಒಂದು ವರ್ಷ ಕಳೆಯಿತು. ಈಗ ಅವರೆಲ್ಲರ ಗತಿ ಏನಾಗಿರಬಹುದು ?—ಎಂದು ಚಿಂತಿಸುತ್ತ ವಾಗಿಂದ್ರಿಯವು ವಾಪಸ್ಸು ಬಂದು ನೋಡುತ್ತದೆ, ಅವರೆಲ್ಲರೂ ಹಿಂದಿನಂತೆಯೇ ತಮ್ಮ ಕಾರ್ಯಗಳನ್ನು ನಿರ್ವಹಿಸುತ್ತಾ ಸುಖವಾಗಿದ್ದರು. ಆದರೇ ! ಇದೇನು ಆಶ್ಚರ್ಯ! ನಾನಿಲ್ಲದಿದ್ದರೂ ನೀವು ಹೇಗೆ ಬದುಕಿ ಉಳಿದಿದ್ದೀರಿ ?" ಎಂದು ಕೇಳಿತು. ಅದಕ್ಕೆ ಪ್ರಾಣಾದಿಗಳು—"ಯಾವ ಆಶ್ಚರ್ಯವೂ ಇಲ್ಲ. ಮೂಕರು ಹೇಗೆ ಬದುಕುತ್ತಾರೋ ಹಾಗೆ ಬದುಕಿದ್ದೇವೆ. ಮಾತಿಲ್ಲದಿದ್ದರೆ ಏನಾಯಿತು ? ಪ್ರಾಣವು ಉಸಿರಾಡುತ್ತಿತ್ತು. ಕಣ್ಣು ನೋಡುತ್ತಿತ್ತು. ಕಿವಿಯು ಕೇಳುತ್ತಿತ್ತು. ಮನಸ್ಸು ಬುದ್ಧಿಯಿಂದ ನಿಶ್ಚಯಿಸುತ್ತಿತ್ತು. ನಾವು ಸುಖವಾಗಿದ್ದೆವು" ಎಂದವು. ತಾನು ಶ್ರೇಷ್ಠನಲ್ಲವೆಂದೂ, ತಾನಿಲ್ಲದಿದ್ದರೂ ದೇಹ ವ್ಯಾಪಾರ ನಡೆಯುತ್ತದೆಯೆಂದೂ ವಾಗಿಂದ್ರಿಯಕ್ಕೆ ಮನವರಿಕೆಯಾಯಿತು. ಅದು ಸುಮ್ಮನೆ ದೇಹವನ್ನು ಮತ್ತೆ ಪ್ರವೇಶಿಸಿ ಕುಳಿತುಕೊಂಡಿತು. ಆಮೇಲೆ ಚಕ್ಷುರಿಂದ್ರಿಯವು ಹೊರಟು ಹೋಯಿತು. ಒಂದು ವರ್ಷದ ಮೇಲೆ ಹಿಂದಿರುಗಿ ಬರಲಾಗಿ ದೇಹವ್ಯಾಪಾರವು ಮೊದಲಿನಂತೆಯೇ ನಡೆದಿತ್ತು. "ಅರೆ ನಾನಿಲ್ಲದೆ ನೀವು ಹೇಗೆ ಬದುಕಿದ್ದೀರಿ" ಎಂದು ಅಚ್ಚರಿಯಿಂದ ಕೇಳಿತು. ಆಗ ಪ್ರಾಣಾದಿಗಳು—"ಕುರುಡನು ಬದುಕಿರುವುದಿಲ್ಲವೇ. ಹಾಗೆ ಕುರುಡರಿಗೆ ಕಣ್ಣಿಲ್ಲದಿದ್ದರೂ, ಉಸಿರಾಡುತ್ತದೆ. ಕಿವಿ ಕೇಳುತ್ತದೆ. ವಾಕ್ಕು ಮಾತನಾಡುತ್ತದೆ. ಮನಸ್ಸು ಆಲೋಚಿಸುತ್ತದೆ. ನೀನಿಲ್ಲದೆ ಹೋದರೆ ನಮಗೆ ತೊಂದರೆ ಏನು?—ಎಂದವು ಚಕ್ಷುರಿಂದ್ರಿಯವು ಮರುಮಾತಿಲ್ಲದೆ ದೇಹದಲ್ಲಿ ಸೇರಿಕೊಂಡಿತು. ಅನಂತರ ಶ್ರೋತ್ರೇಂದ್ರಿಯವು ಹೊರಟುಹೋಗಿ, ಒಂದು ವರುಷದ ನಂತರ ಬಂದಿತು.

ಉಳಿದವು ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿದ್ದವು. "ನಾನಿಲ್ಲದೆ ನೀವು ಉಳಿದು ಕೊಂಡದ್ದು ಹೇಗೆ"– ಎಂದು ಕೇಳಲಾಗಿ ಪ್ರಾಣಾದಿಗಳು ಹೇಳಿದವು " ಅದಕ್ಕೇನು ? ನಾವು ಯಥಾಪ್ರಕಾರ ಇದ್ದೇವೆ. ಕಿವುಡರು ಜೀವಿಸಿರುವುದಿಲ್ಲವೇ ? ಉಸಿರು ಆಡುತ್ತಿತ್ತು. ಕಣ್ಣು ನೋಡುತ್ತಿತ್ತು. ವಾಕ್ಕು ಮಾತಾಡುತ್ತಿತು. ಮನಸ್ಸು ಚಿಂತನ ಕಾರ್ಯದಲ್ಲಿ ತೊಡಗಿತ್ತು. ನಿನ್ನ ಶ್ರೇಷ್ಠತೆ ಏನೂ ಇಲ್ಲ." ಎಂದು. ಶ್ರೋತ್ರೇಂದ್ರಿಯವು ತೆಪ್ಪಗೆ ದೇಹದಲ್ಲಿ ಬಂದು ಸೇರಿಕೊಂಡಿತು. ತರುವಾಯ ಮನಸ್ಸು "ಈಗ ನಾನು ಹೋಗು ತ್ತೇನೆ. ನೀವು ಹೇಗೆ ಜೀವಿಸುತ್ತೀರಿ ನೋಡ್ತೋಣ" ಎಂದು ನುಡಿದು ನಿರ್ಗಮಿಸಿತು. ಒಂದು ವರ್ಷ ಕಳೆದ ಮೇಲೆ ಬಂದು ನೋಡಿದರೆ ದೇಹ ವ್ಯಾಪರವು ನಡೆಯುತ್ತಲೇ ಇತ್ತು. ಇಂದ್ರಿಯಗಳು ಕೆಲಸ ಮಾಡುತಿದ್ದವು. "ಅರರೆ ! ನಾನಿಲ್ಲದಿದ್ದಾಗ ಬುದ್ಧಿ ಎಲ್ಲಿರುತ್ತದೆ ? ಬುದ್ಧಿ ಇಲ್ಲದೆ ನೀವು ಹೇಗೆ ಉಳಿದುಕೊಂಡಿದ್ದೀರಿ ?" ಎಂದು ಪ್ರಶ್ನೆ ಮಾಡಿತು. "ನೀನಿಲ್ಲದಿದ್ದರೂ ನಾವು ಉಳಿದುಕೊಂಡಿದ್ದೇವೆ, ನೋಡು. ಬುದ್ಧಿ ಬೆಳೆಯದಿದ್ದರೂ ಚಿಕ್ಕ ಮಕ್ಕಳು ಜೀವಿಸಿಕೊಂಡಿರುವುದಿಲ್ಲವೇ ? ಪ್ರಾಣವು ಉಸಿರಾಡು ತ್ತಿತ್ತು. ವಾಕ್ಕು ಮಾತಾಡುತ್ತಿತ್ತು. ಕಣ್ಣು ನೋಡುತ್ತಿತ್ತು. ಕಿವಿ ಕೇಳಿಸಿಕೊಳ್ಳು ತ್ತಿತ್ತು. ನಾವೆಲ್ಲರೂ ಹಾಗೆಯೇ ಕ್ಷೇಮವಾಗಿದ್ದೇವೆ" ಎಂದು ಉತ್ತರ ಬಂದಿತು. ಮನಸ್ಸಿಗೆ ಏನು ಹೇಳಲೂ ತೋರಲಿಲ್ಲ. ಸಪ್ಪೆ ಮೋರೆ ಮಾಡಿಕೊಂಡು ಮತ್ತೆ ದೇಹವನ್ನು ಪ್ರವೇಶಿಸಿತು.

ಅನಂತರ ಪ್ರಾಣವಾಯುವಿನ ಸರದಿ ಬಂದಿತು. "ನಿಮ್ಮೆಲ್ಲರ ಯೋಗ್ಯತೆಯನ್ನು ಪರೀಕ್ಷೆ ಮಾಡಿದ್ದಾಯಿತು. ಈಗ ನಾನು ಹೊರಡುತ್ತೇನೆ"–ಎಂದು ನುಡಿದು ಹೊರಡಲು ಸಜ್ಜಾಯಿತು. ಪ್ರಾಣವು ಸ್ವಲ್ಪ ಚಲಿಸಿದೊಡನೆಯೇ ವಾಗಾದಿಗಳ ಬುಡನೇ ಅಲ್ಲಾಡಿ ಹೋಯಿತು! ಅವು ತಮ್ಮ ಸ್ಥಳದಲ್ಲಿರಲಾರದೆ ತತ್ತರಿಸಿದವು. ಪ್ರಬಲವಾದ ಕುದುರೆಯು ನಾಲ್ಕು ಕಾಲುಗಳನ್ನು ಬೇರೆಬೇರೆ ಹಗ್ಗಗಳಿಂದ ಕಟ್ಟಿ ಹಗ್ಗಗಳಿಗೆ ತಗುಲಿಸಿದ ಚಿಕ್ಕಚಿಕ್ಕ ಮೊಳೆಗಳನ್ನು ನೆಲಕ್ಕೆ ಹೊಡೆದು, ಪರೀಕ್ಷೆಗಾಗಿ ಕುದರೆಯನ್ನು ಚಾಟಿಯಿಂದ ಹೊಡೆದರೆ ಏನಾಗುತ್ತದೆ? ಕುದುರೆ ರಭಸದಿಂದ ಕುಪ್ಪಳಿಸಿ ಹಾರಿದೊಡನೆ ಮೊಳೆಗಳು ಹಗ್ಗ ಸಹಿತ ಕಿತ್ತು ಹಾರಿಹೋಗುತ್ತದೆ. ಆ ಪರಿಸ್ಥಿತಿ ಮನಸ್ಸು ಮೊದಲಾದವುಗಳಿಗಾಯಿತು. ಅವು ಏಕಕಂಠದಿಂದ "ಓ ಪ್ರಾಣದೇವತೆ, ದಮ್ಮಯ್ಯ, ನೀನು ಹೋಗಬೇಡ. ನೀನೇ ಶ್ರೇಷ್ಠ ನೀನೇ ಶ್ರೇಷ್ಠ"– ಎಂದು ಅರಚಿಕೊಂಡವು. ಪ್ರಾಣವು ನಿರ್ಗಮಿಸಲಿಲ್ಲ. ವಾಗಾದಿಗ ಳೆಲ್ಲವೂ ಪ್ರಾಣಕ್ಕೆ ನಮಸ್ಕರಿಸಿ– "ನೀನು ಶ್ರೇಷ್ಠನೆಂಬುದು ರುಜುವಾತಾಯಿತು. ನಿನ್ನಿಂದಲೇ ಈ ದೇಹದಲ್ಲಿರಲು ನಮಗೆ ಶಕ್ತಿ ಬಂದಿದೆ. ಇನ್ನು ಎರಡು ಮಾತಿಲ್ಲ"– ಎಂದು ಹೇಳಿ ಪ್ರಾಣದ ಶ್ರೇಷ್ಠತೆಯನ್ನು ಒಪ್ಪಿಕೊಂಡವು ಪ್ರಾಣವು ಮುಖ್ಯವಾದ್ದರಿಂದ ಅದಕ್ಕೆ ಮುಖ್ಯಪ್ರಾಣವೆಂದು ಹೆಸರು ಬಂದಿದೆ. ಅದರ ಉಪಾಸನೆಯಿಂದ ಮನುಷ್ಯನ ಎಲ್ಲ ಕಾಮನೆಗಳೂ ಸಿದ್ಧಿಸುತ್ತವೆ.

(ಈ ಕಥೆ ಬೃಹದಾರಣ್ಯಕೋಪನಿಷತ್ತಿನಲ್ಲಿಯೂ ಸ್ವಲ್ಪ ವ್ಯತ್ಯಾಸದಿಂದ ಬಂದಿದೆ)

## ೮. ಶ್ವೇತಕೇತು ಮತ್ತು ಪ್ರವಾಹಣರಾಜ (ಛಾಂದೋಗ್ಯ)

ಗೌತಮ ಗೋತ್ರದ ಆರುಣನೆಂಬ ಮುನಿಗೆ ಶ್ವೇತಕೇತುವೆಂಬ ಮಗನಿದ್ದನು. ಆವನ ಪ್ರೌಢವಿದ್ಯಾಭ್ಯಾಸವೂ ಆರುಣನಿಂದಲೇ ನಡೆಯಿತು. ಮಗನು ವಿದ್ವಾಂಸನಾದ ನೆಂದು ತಿಳಿದು ಗೌತಮನು—"ಕುಮಾರ, ನೀನು ವಿದ್ವಾಂಸನಾದೆ. ಇನ್ನು ಗೃಹಸ್ಥನಾಗಿ ಸಂಸಾರವನ್ನು ನಡೆಸಬಹುದು"—ಎಂದನು. ಶ್ವೇತಕೇತು ಸಮಾವೃತ್ತನಾಗಿ ಹಣವನ್ನು ಸಂಪಾದಿಸಬೇಕೆಂದು ಪಂಚಾಲ ದೇಶದ ರಾಜನಾದ ಪ್ರವಾಹಣನ ಬಳಿಗೆ ಹೋದನು. ರಾಜನು ಆತನನ್ನು ಸ್ವಾಗತಿಸಿ,—"ಸೌಮ್ಯ, ನಿನಗೆ ವಿದ್ಯಾಭ್ಯಾಸಮಾಡಿಸಿದವರು ಯಾರು ?"—ಎಂದು ಕೇಳಲಾಗಿ, ತನ್ನ ತಂದೆಯೇ ಎಲ್ಲವನ್ನೂ ಅನುಶಾಸನ ಮಾಡಿದ್ದಾನೆಂದು ತಿಳಿಸಿದನು. ಆಗ ರಾಜನಿಗೂ ಶ್ವೇತಕೇತುವಿಗೂ ಈ ರೀತಿಯಾಗಿ ಪ್ರಶ್ನೋತ್ತರಗಳು ನಡೆದವು.

ರಾಜ :—ಸೌಮ್ಯ ಶ್ವೇತಕೇತು, ಜನರು ಮೃತರಾದ ಮೇಲೆ ಎಲ್ಲಿಗೆ ಹೋಗುತ್ತಾರೆಂಬುದು ಗೊತ್ತಿದೆಯೆ ?

ಶ್ವೇತಕೇತು :—ಗೊತ್ತಿಲ್ಲ.

ರಾಜ :—ಇಲ್ಲಿಂದ ಮೃತರಾಗಿ ಹೋದವರು ಯಾವ ಮಾರ್ಗವಾಗಿ ಹಿಂದಿರುಗುತ್ತಾರೆ?

ಶ್ವೇತಕೇತು :—ಗೊತ್ತಿಲ್ಲ.

ರಾಜ:—ದೇವಯಾನ—ಪಿತೃಯಾನಮಾರ್ಗಗಳು ಎಲ್ಲಿ ಕವಲೊಡೆಯುತ್ತವೆಂಬುದು ತಿಳಿದಿದೆಯೆ ?

ಶ್ವೇತಕೇತು :—ಇಲ್ಲ.

ರಾಜ:—ಒಳ್ಳೆಯದು. ಇಷ್ಟು ಜನರು ಪಿತೃಲೋಕಕ್ಕೆ ಹೋಗುತ್ತಿದ್ದರೂ ಅದು ಏಕೆ ಇನ್ನೂ ತುಂಬಲೇ ಇಲ್ಲವೆಂಬುದರ ಪರಿಚಯುವಿದೆಯೆ ?

ಶ್ವೇತಕೇತು :—ಇಲ್ಲ.

ರಾಜ:—ಆಯಿತು ; ಇದನ್ನಾದರೂ ಹೇಳಬಲ್ಲೆಯಾ ? "ಯಥಾ ಪಂಚಮ್ಯಾಮಾಹುತೌ ಆಪಃ ಪುರುಷವಚಸೋ ಭವಂತೀತಿ"—ಐದನೆಯ ಆಹುತಿಯಲ್ಲಿ ಅಪ್ಪು (ಜಲ) ಪುರುಷ—ಮನುಷ್ಯ ಎನಿಸಿಕೊಳ್ಳುವುದು ಹೇಗೆಂಬುದು ಗೊತ್ತಿದೆಯೆ ?

ಶ್ವೇತಕೇತು :—ಗೊತ್ತಿಲ್ಲ.

ಆಗ ರಾಜನು—"ಅಯ್ಯಾ, ಐದು ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗೂ ನೀನು ಉತ್ತರಹೇಳಲಾರದೇ ಹೋದೆ. "ನನ್ನ ತಂದೆ ಅನುಶಾಸನ ಮಾಡಿದ್ದಾರೆ. ನಾನು

ವಿದ್ವಾಂಸ"—ಎಂದು ಹೇಗೆ ಹೇಳಿದೆ" ?—ಎಂದು ಛೇಡಿಸಲು, ಶ್ವೇತಕೇತುವಿಗೆ ತುಂಬಾ ವಿಷಾದವಾಯಿತು, ಅವನು ಲಜ್ಜೆಯಿಂದ ಹಿಂದಿರುಗಿದನು. ಅವನು ನೇರವಾಗಿ ತಂದೆಯ ಬಳಿಗೆ ಹೋಗಿ—"ಅಪ್ಪ, ನಾನು ವಿದ್ವಾಂಸನಾದನೆಂದು ಅನುಶಾಸನ ಮಾಡಿ ಬಿಟ್ಟದ್ದೀಯೆ ! ನಾನು ಪಂಚಾಲ ದೇಶದ ಪ್ರವಹಣ ರಾಜನ ಬಳಿಗೆ ಹೋದೆ, ಆ ದುಷ್ಟ ನನಗೆ ಐದು ಪ್ರಶ್ನೆಗಳನ್ನು ಕೇಳಿದ, ಒಂದು ಪ್ರಶ್ನೆಗೂ ನಾನು ಉತ್ತರಿಸ ಲಾರದೆ ಹೋದೆ. ನನಗೆ ತುಂಬ ಅವಮಾನವಾಯಿತು. ಅದನ್ನೆಲ್ಲ ನನಗೆ ಏಕೆ ಹೇಳಿ ಕೊಡಲಿಲ್ಲ ?" ಎಂದು ದುಃಖಿಸಿದನು. ಆಗ ಗೌತಮನು—"ಕುಮಾರ ರಾಜನು ಕೇಳಿದ ಪ್ರಶ್ನೆಗಳು ಯಾವುವು ?—" ಎಂದು ವಿಚಾರಿಸಲು, ಶ್ವೇತಕೇತು ಆ ಐದು ಪ್ರಶ್ನೆಗ ಳನ್ನೂ ತಂದೆಗೆ ತಿಳಿಸಿದನು. ಗೌತಮನು ಶಾಂತಿಯಿಂದ—"ಅಪ್ಪ, ಶ್ವೇತಕೇತು, ಈ ಪ್ರಶ್ನೆಗಳಿಗೆ ಉತ್ತರ ನನಗೇ ತಿಳಿದಿಲ್ಲ ! ತಿಳಿದಿದ್ದರೆ ಪ್ರಿಯಪುತ್ರನಾದ ನಿನಗೆ ಹೇಳದೇ ಇರುತ್ತಿದ್ದೆನೇ ? ಇರಲಿ; ನಾನೇ ಆ ರಾಜನ ಹತ್ತಿರಕ್ಕೆ ಹೋಗಿ ಪ್ರಶ್ನೆಗಳಿಗೆ ಉತ್ತರ ಗಳನ್ನು ತಿಳಿದು ಬರುತ್ತೇನೆ"—ಎಂದು ಮಗನನ್ನು ಸಮಾಧಾನ ಪಡಿಸಿದನು.

ಆಮೇಲೆ ಈ ಗೌತಮನಾದ ಅರುಣನು ಪಂಚಾಲ ದೇಶಕ್ಕೆ ಹೋಗಿ ರಾಜನನ್ನು ಭೇಟಿಮಾಡಿದನು. ರಾಜನು ಆತನನ್ನು ಸ್ವಾಗತಿಸಿ, ಸತ್ಕರಿಸಿದನು. ರಾತ್ರಿ ಕಳೆಯಿತು. ಮಾರನೆಯ ಪ್ರಾತಃಕಾಲ ಈ ವಿಪ್ರನು ರಾಜನ ಸಭೆಗೆ ಮೊದಲು ಹೋಗಿ ಕುಳಿತು ಕೊಂಡನು. ಪ್ರವಾಹಣನು ಸಭೆಯನ್ನು ಪ್ರವೇಶಿಸಿದೊಡನೆ ಎದ್ದುನಿಂತು ರಾಜನಿಗೆ ಗೌರವವನ್ನು ಸಲ್ಲಿಸಿದನು. ಆಗ ಪ್ರವಾಹಣನು—"ಬ್ರಾಹ್ಮಣೋತ್ತಮ, ನನ್ನಿಂದ ಏನಾಗಬೇಕು ? ಎಷ್ಟು ಹಣವನ್ನಾದರೂ ಕೇಳು, ಕೊಡುತ್ತೇನೆ"—ಎಂದನು. ಅದಕ್ಕೆ ಈ ಬ್ರಾಹ್ಮಣನು—"ಮಹಾರಾಜ, ನನಗೆ ಯಾವ ಹಣವೂ ಬೇಕಾಗಿಲ್ಲ. ನನ್ನ ಮಗ ನಾದ ಶ್ವೇತಕೇತುವಿಗೆ ನೀನು ಐದು ಪ್ರಶ್ನೆಗಳನ್ನು ಹಾಕಿದೆಯಂತೆ. ಅವುಗಳಿಗೆ ಉತ್ತರ ವೇನೆಂಬುದನ್ನು ನನಗೆ ತಿಳಿಸಿಕೊಡು, ಸಾಕು"—ಎಂದನು.

ಅದನ್ನು ಕೇಳಿ ರಾಜನ ಮನಸ್ಸಿಗೆ ವಿಷಾದವಾಯಿತು. "ಕ್ರಮವಾಗಿ ಶಿಷ್ಯವೃತ್ತಿ ಯನ್ನು ಮಾಡಿದವನಿಗೆ ಮಾತ್ರ ಇಂತಹ ಅಮೂಲ್ಯ ವಿದ್ಯೆಯನ್ನು ಹೇಳಿಕೊಡಬೇಕು. ಕ್ಷತ್ರಿಯನಾದ ನಾನು ಈ ಬ್ರಾಹ್ಮಣನಿಂದ ಸೇವೆಯನ್ನು ಸ್ವೀಕರಿಸುವುದಾದರೂ ಹೇಗೆ ? ಬೇರೊಬ್ಬ ಬ್ರಾಹ್ಮಣನಾದ ಜ್ಞಾನಿಯ ಬಳಿಗೆ ಹೋಗೆಂದು ಹೇಳಲೂ ಬರುವುದಿಲ್ಲ. ಯಾವ ಬ್ರಾಹ್ಮಣನಿಗೂ ಈ ಪ್ರಶ್ನೆಗಳಿಗೆ ಉತ್ತರ ತಿಳಿದಿಲ್ಲ"—ಎಂಬುದೇ ಆತನ ವಿಷಾದಕ್ಕೆ ಕಾರಣ. ಕಡೆಗೆ ಗೌತಮನ ನಿರ್ಬಂಧಕ್ಕೆ ಒಳಗಾಗಿ—"ಒಳ್ಳೆಯದು, ವಿಪ್ರೋತ್ತಮ, ಬೇರೆ ಯಾವ ವಿಪ್ರನಿಗೂ ಈ ವಿದ್ಯೆ ತಿಳಿದಿಲ್ಲ. ಇದು ಕ್ಷತ್ರಿಯರಲ್ಲಿ ಮಾತ್ರ ಉಳಿದುಕೊಂಡು ಬಂದಿದೆ. ನಾನು ಉಪದೇಶ ಮಾಡಬೇಕಾದರೆ ಶಿಷ್ಯನಿಗೆ ಮಾತ್ರ ಉಪದೇಶಿಸಬೇಕಾಗುತ್ತದೆ. ನೀನು ದೀರ್ಘಕಾಲ ನನ್ನ ಸೇವೆ ಮಾಡುತ್ತ ಇರಬೇಕಾಗಿ ಬರುತ್ತದೆ—" ಎಂದನು. ಗೌತಮನು ಒಪ್ಪಿದನು.

ಬಹುಶಃ ಕೆಲವು ಕಾಲ ಈ ರೀತಿ ಕಳೆದಿರಬೇಕು. ಬಳಿಕ ರಾಜನು ಸಂಪ್ರೀತನಾಗಿ ಒಂದು ದಿನ—"ಗೌತಮ, "**ಪಂಚಮ್ಯಾಹುತೌ ಆಪಃ ಪುರುಷ ವಚಸೋ ಭವಂತಿ**"—ಎಂಬ ಪ್ರಶ್ನೆಗೆ ಉತ್ತರ ಹೇಳುತ್ತೇನೆ. ಕೇಳು"—ಎಂದು ವಿವರವಾಗಿ ತಿಳಿಸಿಕೊಟ್ಟನು. ಅದರ ಸಂಕ್ಷಿಪ್ತ ವಿಷಯ ಹೀಗಿದೆ—

(1) ಪ್ರಥಮಾಹುತಿಯಲ್ಲಿ ಪ್ರಾಣಾದಿದೇವತೆಗಳು ಶ್ರದ್ಧೆಯನ್ನು ದ್ಯುಲೋಕ ವೆಂಬ ಅಗ್ನಿಯಲ್ಲಿ ಹೋಮಮಾಡುತ್ತಾರೆ. ಶ್ರದ್ಧೆಯಿಂದ ಸೋಮನು ಹುಟ್ಟುತ್ತಾನೆ.

(2) ಎರಡನೆಯ ಆಹುತಿಯಲ್ಲಿ ಆ ಪ್ರಾಣಾದಿದೇವತೆಗಳು ಸೋಮನನ್ನು ಪರ್ಜನ್ಯನೆಂಬ ಅಗ್ನಿಯಲ್ಲಿ ಹೋಮಮಾಡುತ್ತಾರೆ. ಸೋಮನಿಂದ ವೃಷ್ಟಿ ಉದ್ಭವಿಸುತ್ತದೆ.

(3) ಮೂರನೆಯ ಆಹುತಿಯಲ್ಲಿ ಆ ದೇವತೆಗಳು ವೃಷ್ಟಿಯನ್ನು ಪೃಥ್ವಿ ಎಂಬ ಅಗ್ನಿಯಲ್ಲಿ ಹೋಮಮಾಡುತ್ತಾರೆ. ವೃಷ್ಟಿಯಿಂದ ಅನ್ನಹುಟ್ಟುತ್ತದೆ.

(4) ನಾಲ್ಕನೆಯ ಆಹುತಿಯಲ್ಲಿ ಅವರು ಅನ್ನವನ್ನು ಪುರುಷನೆಂಬ ಅಗ್ನಿಯಲ್ಲಿ ಹೋಮಮಾಡುತ್ತಾರೆ. ಅನ್ನದಿಂದ ರೇತಸ್ಸು ಹುಟ್ಟುತ್ತದೆ.

(5) ಐದನೆಯ ಆಹುತಿಯಲ್ಲಿ ಈ ರೇತಸ್ಸನ್ನು ಸ್ತ್ರೀಯೆಂಬ ಅಗ್ನಿಯಲ್ಲಿ ಹೋಮ ಮಾಡಲಾಗುತ್ತವೆ. ಜಲಮಯವಾದ ಈ ರೇತಸ್ಸಿನಿಂದ ಗರ್ಭವು ಹುಟ್ಟುತ್ತದೆ. ಗರ್ಭವೇ ಮನುಷ್ಯನಾಗುತ್ತದೆಯಷ್ಟೆ. ಹೀಗೆ—"**ಪಂಚಮ್ಯಾಹುತೌ ಆಪಃ ಪುರುಷ ವಚಸೋ ಭವಂತಿ**"—ಎಂಬ ಮಾತು ಉಪಪನ್ನವಾಗುತ್ತದೆ.

"ಆರನೆಯ ಆಹುತಿಯೂ ಒಂದುಂಟು. ಪ್ರಾಣವಿಯೋಗವಾದ ಮೇಲೆ ಈ ದೇಹವನ್ನು ಅಗ್ನಿಯಲ್ಲಿ ಹೋಮ ಮಾಡುತ್ತಾರೆ. ದೇಹವು ತನ್ನ ಮೂಲ ವಸ್ತುವಿನಲ್ಲಿ ಲೀನವಾಗಿ ಬಿಡುತ್ತದೆ.

ಪ್ರವಾಹಣನು ಹೀಗೆ ತಿಳಿಸಿ, ಉಳಿದ ತನ್ನ ನಾಲ್ಕು ಪ್ರಶ್ನೆಗಳಿಗೂ ಉತ್ತರ ಹೇಳುತ್ತಾನೆ.

**ಅಗ್ನೌ ಪ್ರಾಸ್ತಾಹುತಿಃ ಸಮ್ಯಗಾದಿತ್ಯಮುಪತಿಷ್ಠತೇ ।**
**ಆದಿತ್ಯಾಜ್ಜಾಯತೇ ವೃಷ್ಟಿಃ ವೃಷ್ಟೇರನ್ನಂ ತತಃ ಪ್ರಜಾಃ ॥**

—ಎಂದು ಮನುಸ್ಮೃತಿಯಲ್ಲಿಯೂ, (೩–೭೬)

**ಅನ್ನಾದ್ಭವಂತಿ ಭೂತಾನಿ ಪರ್ಜನ್ಯಾದನ್ನ ಸಂಭವಃ ।**
**ಯಜ್ಞಾತ್ ಭವತಿ ಪರ್ಜನ್ಯೋ ಯಜ್ಞಃ ಕರ್ಮಸಮುದ್ಭವಃ ॥**

—ಎಂದು ಭಗವದ್ಗೀತೆಯಲ್ಲಿಯೂ (೩–೧೪) ಇದೇ ವಿಷಯ ಪ್ರಸ್ತುತವಾಗಿದೆ. ಗೂಢಾರ್ಥವನ್ನು ಗುರುಮುಖದಿಂದ ತಿಳಿದುಕೊಳ್ಳಬೇಕು.

ಮೇಲ್ಕಂಡ ಕಥೆಯಿಂದ ತಿಳಿದು ಬರುವ ನೀತಿ—

1. ಎಲ್ಲ ಬಲ್ಲವರಿಲ್ಲ, ಬಲ್ಲವರ ಹಲರಿಲ್ಲ.
2. ಬ್ರಹ್ಮ ವಿದ್ಯೆಯನ್ನು ಕಂಡಕಂಡವರಿಗೆ ಹೇಳತಕ್ಕದ್ದಲ್ಲ.
3. ಮನುಷ್ಯ ಜನ್ಮದ ಯಾತಾಯಾತಗಳನ್ನೂ ಕ್ಲೇಶಗಳನ್ನೂ ಸರಿಯಾಗಿ ತಿಳಿದುಕೊಂಡರೆ ಯಾರಿಗಾದರೂ ವೈರಾಗ್ಯ ಹುಟ್ಟುವುದು.

## ೯–ಯಾಜ್ಞವಲ್ಕ್ಯ ವಿಜಯ (ಬೃಹದಾರಣ್ಯಕ)

ಶುದ್ಧವಾದ ವಿದ್ಯೆ ಸುಲಭವಾಗಿ ದೊರೆಯತಕ್ಕದ್ದಲ್ಲ. ಗುರುಸೇವೆಯಿಂದ ಗುರುವನ್ನು ಒಲಿಸಿಕೊಳ್ಳಬೇಕು, ಇಲ್ಲವೇ ಪುಷ್ಕಳವಾಗಿ ಧನವನ್ನು ಕೊಡಬೇಕು. ವಿದ್ವಜ್ಜನರ ಸಹವಾಸದಿಂದಲೂ ಸಂವಾದದಿಂದಲೂ ವಿದ್ಯೆಯು ವರ್ಧಿಸುತ್ತದೆ. ಬುದ್ಧಿಯು ಚುರುಕುಗೊಳ್ಳುತ್ತದೆ. "ಪ್ರತ್ರಕ್ಷಾಚವಿದ್ವತ್ ಸಂಯೋಗೇ ಪ್ರಜ್ಞಾ ವೃದ್ಧಿಃ"—ಎಂದು ಶ್ರೀಶಂಕರಾಚಾರ್ಯರು ಹೇಳಿದ್ದಾರೆ. ಈ ವಿಷಯವನ್ನು ಸ್ಪಷ್ಟಪಡಿಸುವುದಕ್ಕಾಗಿ ಬೃಹದಾರಣ್ಯಕೋಪನಿಷತ್ತಿನಲ್ಲಿ ಈ ಆಖ್ಯಾಯಿಕೆ ಬಂದಿದೆ.

ವಿದೇಹರಾಜನಾದ ಜನಕನು ಒಮ್ಮೆ ಒಂದು ದೊಡ್ಡಯಾಗವನ್ನು ನಡೆಸಿದನು. ಕುರು–ಪಾಂಚಾಲ ದೇಶಗಳಿಂದ ಯಜ್ಞಕ್ಕೆ ಬಹುಮಂದಿ ಬ್ರಾಹ್ಮಣರು ಆಗಮಿಸಿದ್ದರು. ಜನಕರಾಜನು ಯಾಗದಲ್ಲಿ ವಿಪುಲವಾಗಿ ದಕ್ಷಿಣೆಯನ್ನಿತ್ತನು. ನೆರದಿದ್ದ ವಿದ್ವತ್ ಸಮುದಾಯವನ್ನು ನೋಡಿ ಮಹಾರಾಜನ ಮನಸ್ಸಿನಲ್ಲಿ—"ಇಷ್ಟು ಜನ ವಿದ್ವಾಂಸರು ಸೇರಿದ್ದಾರಲ್ಲ, ಇವರಲ್ಲಿ ಯಾವಾತನು ಶ್ರೇಷ್ಠನಾದ ಬ್ರಹ್ಮಜ್ಞಾನಿಯಾಗಿರಬಹುದು ?"—ಎಂಬ ಜಿಜ್ಞಾಸೆ ಮೂಡಿತು. ಅದಕ್ಕಾಗಿ ಅವನು ಒಂದು ಉಪಾಯವನ್ನು ಯೋಚಿಸಿದನು. ಏನೆಂದರೆ, ಪ್ರಾಯಕ್ಕೆ ಬಂದ ಒಂದು ಸಾವಿರ ಗೋವುಗಳನ್ನು ಒಂದೆಡೆ ಸೇರಿಸಿ, ಅವುಗಳ ಪ್ರತಿಯೊಂದು ಕೊಂಬಿಗೂ ಒಂದೊಂದು ಸುವರ್ಣನಾಣ್ಯವನ್ನು ಕಟ್ಟಿಸಿದನು. ಅನಂತರ ಆ ವಿದ್ವಾಂಸರಿಗೆ ಗೋವುಗಳನ್ನು ತೋರಿಸಿ, "ಪೂಜ್ಯರಾದ ಬ್ರಾಹ್ಮಣರೇ, ನಿಮ್ಮಲ್ಲಿ ಯಾವಾತನು ಸರ್ವಶ್ರೇಷ್ಠನಾದ ಬ್ರಹ್ಮಜ್ಞಾನಿಯೋ ಆತನು ಈ ಎಲ್ಲ ಹಸುಗಳಿಗೂ ಒಡೆಯನಾಗುತ್ತಾನೆ. ಆತನು ಈ ಹಸುಗಳನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಹೋಗಬಹುದು"—ಎಂದನು.

ಆ ಬ್ರಾಹ್ಮಣರಲ್ಲಿ ಯಾರಿಗೂ ಧೈರ್ಯ ಬರಲಿಲ್ಲ. "ನಾನು ಸರ್ವೋತ್ತಮ ಎಲ್ಲರನ್ನೂ ವಾದದಲ್ಲಿ ಗೆಲ್ಲಬಲ್ಲೆ—" ಎಂಬ ಆತ್ಮಪ್ರತ್ಯಯವು ಹುಟ್ಟಲಿಲ್ಲ. ಎಲ್ಲರೂ ಮುಖ ಮುಖ ನೋಡುತ್ತ ಸುಮ್ಮನೆ ಕುಳಿತಿದ್ದರು. ಆಗ ಯಾಜ್ಞವಲ್ಕ್ಯ ಮಹರ್ಷಿಯು ಎದ್ದುನಿಂತು, ತನ್ನ ಶಿಷ್ಯನಾದ ಸಾಮಶ್ರವನನ್ನು ಕರೆದು—"ಸೌಮ್ಯ–

ಸಾಮಶ್ರವ. ಈ ಎಲ್ಲ ಹಸುಗಳನ್ನೂ ನಮ್ಮ ಆಶ್ರಮಕ್ಕೆ ಹೊಡೆದುಕೊಂಡು ಹೋಗು"—ಎಂದು ಆದೇಶವಿತ್ತನು. ಸಾಮಶ್ರವನು ತನ್ನ ಆಚಾರ್ಯರ ಆದೇಶದಂತೆ ಆ ಗೋವುಗಳನ್ನು ಆಶ್ರಮದ ಕಡೆಗೆ ತಿರುಗಿಸಿ ಕರೆದೊಯ್ದನು.

ಅಲ್ಲಿ ನೆರದಿದ್ದ ಇತರ ಬ್ರಾಹ್ಮಣರಿಗೆ ಕೋಪ ಉಂಟಾಯಿತು. "ಶ್ರೇಷ್ಠನಾದ ವಿದ್ವಾಂಸನೆಂದುಕೊಳ್ಳಲು ನಮಗೆ ಧೈರ್ಯವಿಲ್ಲ. ಈ ಯಾಜ್ಞವಲ್ಕ್ಯನು ತಾನೇ ಸರ್ವಶ್ರೇಷ್ಠನೆಂದುಕೊಂಡುಬಿಟ್ಟಿದ್ದಾನೆ! ಇವನನ್ನು ತಡೆಯತಕ್ಕವರು ಯಾರೂ ಇಲ್ಲವೇ? ಇವನಿಗೆ ಎಷ್ಟು ಅಹಂಕಾರ!" ಎಂದು ಗೊಣಗಲಾರಂಭಿಸಿದರು. ಅವರಲ್ಲಿ ಜನಕರಾಜನ ಪುರೋಹಿತನಾದ ಅಶ್ವಲನೆಂಬುವನಿದ್ದನು. ರಾಜಾಶ್ರಯವಿದ್ದುದರಿಂದ ಅಹಂಕಾರಿಯಾಗಿದ್ದ ಅವನು ಎದ್ದು ಬಂದು ಯಾಜ್ಞವಲ್ಕ್ಯಮುನಿಯನ್ನು ತಡೆದು—"ಏನಯ್ಯಾ ಯಾಜ್ಞವಲ್ಕ್ಯ, ನೀನು ಎಲ್ಲರಿಗಿಂತ ದೊಡ್ಡ ಬ್ರಹ್ಮಜ್ಞಾನಿ ಯಾಗಿಬಿಟ್ಟಿದ್ದೀಯೋ?" ಎಂದು ಆಕ್ಷೇಪಿಸಿದನು. ಅದಕ್ಕೆ ಯಾಜ್ಞವಲ್ಕ್ಯನು ವಿನಯ ದಿಂದ "ಬ್ರಹ್ಮಜ್ಞಾನಿಗೆ ನಾವು ಸದಾ ನಮಸ್ಕರಿಸತಕ್ಕವರು. ಪ್ರಕೃತದಲ್ಲಿ ಈ ಹಸು ಗಳನ್ನು ನಾನು ಆಶ್ರಮಕ್ಕೆ ಒಯ್ದು ವ್ಯವಸ್ಥೆಮಾಡಬೇಕಾಗಿದೆ" ಎಂದು ನುಡಿದನು. "ಓಹೋ! ಈತನು ತಾನೇ ಬ್ರಹ್ಮಿಷ್ಠನೆಂದು ತಿಳಿದುಕೊಂಡಿರುವುದು ನಿಜ. ಇವನ ಗರ್ವವನ್ನಿಳಿಸಬೇಕು—" ಎಂದುಕೊಂಡು ಅಶ್ವಲನು—"ಯಾಜ್ಞವಲ್ಕ್ಯ ನಿನಗೆ ಕೆಲವು ಪ್ರಶ್ನೆಗಳನ್ನು ಹಾಕುತ್ತೇವೆ. ಉತ್ತರಕೊಡು" ಎಂದು ಹೇಳಿ, ಪ್ರಶ್ನೆ ಮಾಡಲಾರಂಭಿ ಸಿದನು. ಅಶ್ವಲನ ಎಲ್ಲ ಪ್ರಶ್ನೆಗಳಿಗೂ ಯಾಜ್ಞವಲ್ಕ್ಯನು ಸ್ವಲ್ಪವೂ ತಡವರಿಸದೆ ಉತ್ತರಗಳನ್ನಿತ್ತನು. ಆಮೇಲೆ ಅಶ್ವಲನು ಈ ಯಾಜ್ಞವಲ್ಕ್ಯನನ್ನು ಜಯಿಸುವುದು ಸಾಧ್ಯವಿಲ್ಲ ಎಂದು ಸುಮ್ಮನಾದನು

ಆಗ ಅಲ್ಲಿ ನೆರದಿದ್ದ ಇತರ ವಿದ್ವಾಂಸರಿಗೂ ಧೈರ್ಯ ಬಂದಿತು. ಒಬ್ಬೊಬ್ಬರಾಗಿ ಮುಂದೆ ಬಂದು ಪರಮಾರ್ಥ ವಿಷಯವಾಗಿ ಯಾಜ್ಞವಲ್ಕ್ಯನಿಗೆ ನಾನಾ ಪ್ರಶ್ನೆಗಳನ್ನು ಕೇಳಿದರು. ಆರ್ತಭಾಗ, ಭುಜ್ಯ, ಚಾಕ್ರಾಯಣ, ಕಹೋಲ—ಮೊದಲಾದವರು ಪ್ರಶ್ನಿಸಿದರು. ಯಾಜ್ಞವಲ್ಕ್ಯನು ಯಾರಿಗೂ ಜಗ್ಗಲಿಲ್ಲ. ತಿರುಗಿ ಮಾತಾಡದಂತೆ ಎಲ್ಲರಿಗೂ ಉತ್ತರಗಳನ್ನಿತ್ತು ಬಾಯಿ ಮುಚ್ಚಿಸಿದನು. ನಂತರ ಗಾರ್ಗಿ ಎಂಬ ವಿದುಷಿ ಎದ್ದುನಿಂತು—"ಯಾಜ್ಞವಲ್ಕ್ಯ, ಈ ಪೃಥ್ವಿಯು ಜಲತತ್ತ್ವದಲ್ಲಿ ಓತಪ್ರೋತ ನಿಂತಿದೆಯಷ್ಟೆ. ಈ ಜಲತತ್ತ್ವವು ಯಾವುದರಲ್ಲಿ ನಿಂತಿದೆ?"— ಎಂದು ಕೇಳಿದಳು. ಯಾಜ್ಞವಲ್ಕ್ಯನು "ವಾಯುತತ್ತ್ವದಲ್ಲಿ" ಎಂದು ಉತ್ತರಿಸಿದನು. ಗಾರ್ಗಿಯು— "ವಾಯುತತ್ತ್ವವು ಯಾವುದರಲ್ಲಿ ಓತಪ್ರೋತವಾಗಿ ನಿಂತಿದೆ?" ಎಂದಳು. ಹೀಗೆ ಪ್ರಶ್ನೋತ್ತರಗಳು ನಡೆಯುತ್ತ ಪರಮಕಾರಣವಾದ ಬ್ರಹ್ಮತತ್ತ್ವದವರೆಗೆ ಹೋಯಿತು. ಗಾರ್ಗಿಯು "ಆ ಬ್ರಹ್ಮತತ್ತ್ವವು ಯಾವುದನ್ನು ಅವಲಂಬಿಸಿ ನಿಂತಿದೆ?" ಎಂದು

ಪ್ರಶ್ನೆ ಮಾಡಿದಳು. ಅದಕ್ಕೆ ಯಾಜ್ಞವಲ್ಕ್ಯನು—"ಗಾರ್ಗಿ, ಅಗಮ್ಯಗಮ್ಯವಾದ ರಹಸ್ಯವನ್ನು ಊಹೆಯಿಂದ ಪ್ರಶ್ನೆಮಾಡುತ್ತಿದ್ದಿಯೆ. ಹೀಗೆ, ಇದು ಕೇಳಬಾರದ ಪ್ರಶ್ನೆ. ಅತಿ ಪ್ರಶ್ನೆ ಮಾಡಬೇಡ. ನಿನ್ನ ತಲೆ ಉರುಳಿ ಬಿದ್ದೀತು"—ಎಂದು ಎಚ್ಚರಿಸಿದನು. ಗಾರ್ಗಿ ಸುಮ್ಮನಾದಳು.

ಆಮೇಲೆ ಉದ್ದಾಲಕ ಎಂಬುವನು ಬಂದು—"ಯಾಜ್ಞವಲ್ಕ್ಯ, ಇಹಪರಗಳನ್ನೂ, ಸಮಸ್ತ ಲೋಕಗಳನ್ನೂ ಅಡಗಿಸಿಕೊಂಡಿರುವ ಸೂತ್ರವು ಯಾವುದೆಂಬುದನ್ನು ನಾನು ಬಲ್ಲೆ. ಆ ಸೂತ್ರವನ್ನು ನಿಯಮಿಸತಕ್ಕ ಅಂತರ್ಯಾಮಿಯನ್ನೂ ನಾನು ಬಲ್ಲೆ. ಇದೆಲ್ಲವನ್ನೂ ತಿಳಿದವನು ಬ್ರಹ್ಮಜ್ಞಾನಿಯೆಂದು ಒಬ್ಬ ಗಂಧರ್ವನು ನನಗೆ ತಿಳಿಸಿಕೊಟ್ಟಿದ್ದಾನೆ, "ನಾನು ಬ್ರಹ್ಮಜ್ಞಾನಿ" ಎಂದು ಬಡಾಯಿಕೊಚ್ಚಿಕೊಳ್ಳುತಿದ್ದೀಯಲ್ಲ, ನಿನಗೆ ಗೊತ್ತಿದ್ದರೆ ಸೂತ್ರವು ಯಾವುದು ? ಅಂತರ್ಯಾಮಿ ಯಾರು ? ಅದರ ಸ್ವರೂಪವನ್ನು ಹೇಳು ನೋಡೋಣ ಹೇಳಲಿಕ್ಕಾಗದೆ ಸಾವಿರ ಹಸುಗಳನ್ನು ಒಯ್ದರೆ, ನಿನ್ನ ತಲೆಯೇ ಉರುಳಿ ಬಿದ್ದೀತು ! " ಎಂದನು. ಯಾಜ್ಞವಲ್ಕ್ಯನು ಧೀರವಾಣಿಯಿಂದ ವಿಸ್ತಾರವಾಗಿ ಉತ್ತರವನಿತ್ತು, ಕಡೆಯಲ್ಲಿ—"ಗೌತಮ (ಉದ್ದಾಲಕ), ಈ ಅಂತರ್ಯಾಮಿಯೇ ನಿನ್ನ ಆತ್ಮ" ಎಂದು ಉಪಸಂಹರಿಸಿದನು. ಉದ್ದಾಲಕನು ಸುಮ್ಮನಾದನು.

ಹಿಂದೆ ಪ್ರಶ್ನೆ ಮಾಡಿದ್ದ ಗಾರ್ಗಿಯು ಮತ್ತೆ ಎದ್ದು ನಿಂತು ಬ್ರಾಹ್ಮಣರನ್ನುದ್ದೇಶಿಸಿ—"ಪೂಜ್ಯರೇ, ನೀವು ಒಪ್ಪುವುದಾದರೆ ಈ ಯಾಜ್ಞವಲ್ಕ್ಯನಿಗೆ ಇನ್ನೂ ಎರಡು ಪ್ರಶ್ನೆಗಳನ್ನು ಕೇಳಬೇಕೆಂದಿದ್ದೇನೆ. ಅವುಗಳಿಗೇನಾದರೂ ಈತನು ಸಮರ್ಪಕವಾಗಿ ಉತ್ತರವನ್ನು ನೀಡಿದ್ದಲ್ಲಿ, ಆಗ ಬ್ರಹ್ಮದ ವಿಷಯದಲ್ಲಿ ಯಾಜ್ಞವಲ್ಕ್ಯನನ್ನು ಜಯಿಸಲು ನಿಮ್ಮಲ್ಲಿ ಯಾರಿಗೂ ಸಾಧ್ಯವಿಲ್ಲ ಎಂದು ತಿಳಿಯಬೇಕು"—ಎಂದಳು. ಬ್ರಾಹ್ಮಣರು "ಆಗಬಹುದು-ಗಾರ್ಗಿ, ಪ್ರಶ್ನಿಸಿ"—ಎಂದರು. ಗಾರ್ಗಿಯು—"ಯಾಜ್ಞವಲ್ಕ್ಯ, ವೀರನಾದವನು ಮತ್ತೆ ಹೆದೆಯೇರಿಸಿ ಶತ್ರುಪೀಡಾಕರವಾದ ಎರಡು ನೀಶಿತಾಸ್ತ್ರಗಳನ್ನು ಧನುಸ್ಸಿಗೆ ಹೂಡುವಂತೆ, ಎರಡು ಪ್ರಶ್ನೆಗಳನ್ನು ಕೇಳುತ್ತೇನೆ"—ಎಂದಳು. ಯಾಜ್ಞವಲ್ಕ್ಯನು ಶಾಂತಚಿತ್ತನಾಗಿಯೇ—"ಕೇಳು ಗಾರ್ಗಿ"— ಎಂದನು. ಗಾರ್ಗಿಯು—'ಯಾಜ್ಞವಲ್ಕ್ಯ' ಮೇಲೆ ಕೆಳಗೆ, ವರ್ತಮಾನ ಭೂತಭವಿಷ್ಯತ್-ಈ ಎಲ್ಲ ದ್ವೈತ ರಾಶಿಯೂ ಎಲ್ಲಿ ಪ್ರತಿಷ್ಠಿತವಾಗಿದೆ?" ಎಂದಳು. ಯಾಜ್ಞವಲ್ಕ್ಯನು ಅದೆಲ್ಲವನ್ನೂ ವಿವರಿಸಿ "ಇದೆಲ್ಲವೂ ಅವ್ಯಾಕೃತಾಕಾಶದಲ್ಲಿ ಪ್ರತಿಷ್ಠಿತವಾಗಿದೆ ಎಂದನು. ಗಾರ್ಗಿಯು "ಯಾಜ್ಞವಲ್ಕ್ಯ ನಿನಗೆ ನಮಸ್ಕಾರ; ಇನ್ನೊಂದು ಪ್ರಶ್ನೆ ಇದೆ. ಈ ಅವ್ಯಾಕೃತಾಕಾಶವು ಪ್ರತಿಷ್ಠಿತವಾದ ವಸ್ತುವಿನ ಸ್ವರೂಪವೇನು?" ಎಂದಳು. ಯಾಜ್ಞವಲ್ಕ್ಯನು ಗಾರ್ಗಿ, ಆ ವಸ್ತುವನ್ನು ಅಕ್ಷರ ಅಥವಾ ಬ್ರಹ್ಮ ಎನ್ನುತ್ತಾರೆ. ಅದರ ಸ್ವರೂಪವನ್ನು ನಿಷೇಧಮುಖವಾಗಿ ಮಾತ್ರ ವರ್ಣಿಸಬಹುದು. ಅದು ಸ್ಥೂಲವಲ್ಲ, ಅಣುವಲ್ಲ,

ಹ್ರಸ್ವವಲ್ಲ, ದೀರ್ಘವಲ್ಲ, ರಸವಲ್ಲ, ಗಂಧವಲ್ಲ, ಅದಕ್ಕೆ ಕಣ್ಣಿಲ್ಲ, ಕಿವಿಯಿಲ್ಲ, ಒಳಗಿಲ್ಲ, ಹೊರಗಿಲ್ಲ. ಹೀಗೆ ಇಲ್ಲವೆಂದೂ ಅಲ್ಲದೆಂದೂ ನಿಷೇಧಮುಖವಾಗಿ ಹೇಳಬೇಕಾಗುತ್ತದೆ. ಅದು ನಿರ್ವಿಶೇಷವಾದ್ದರಿಂದ ಯಾವ ಗುಣಕ್ರಿಯೆಗಳನ್ನೂ ಹೇಳಲಾಗುವುದಿಲ್ಲ. ಚಿತ್ತ ವೃತ್ತಿಗೆ ಗೋಚರವಲ್ಲ. ದೊಡ್ಡದು ಎಂಬ ಭಾವನೆಯಿಂದ "ಬ್ರಹ್ಮ" ಎನ್ನಬಹುದು. ನೀನು ಕೇಳಿದ ಸಮಸ್ತ ವಸ್ತುವೂ ಅದರಲ್ಲಿ ಓತಪ್ರೋತವಾಗಿದೆ." ಈ ಬ್ರಹ್ಮವನ್ನು ತಿಳಿದವನು ಬ್ರಾಹ್ಮಣ"—ಎಂದನು.

ಗಾರ್ಗಿಯು ಸಭಾಸದರಿಗೆ ಕೈಮುಗಿದು—ಪೂಜ್ಯರೆ, ಈ ಯಾಜ್ಞವಲ್ಕ್ಯನಿಗೆ ನಮಸ್ಕರಿಸಿಬಿಡಿರಿ। ಇವನನ್ನು ಗೆಲ್ಲಲು ಯಾರಿಗೂ ಸಾಧ್ಯವಿಲ್ಲ"—ಎಂದು ಬಿಟ್ಟಳು. ಇಷ್ಟೆಲ್ಲಾ ತನ್ನ ಕಣ್ಣೆದುರಿಗೇ ನಡೆದರೂ ಶಾಕಲ್ಯನೆಂಬುವನು ಅವಿವೇಕಿಯಾಗಿ ನಡೆದು ಕೊಂಡನು. ಯಾಜ್ಞವಲ್ಕ್ಯನಿಗೆ ನಾನಾ ಬಗೆಯ ಪ್ರಶ್ನೆಗಳನ್ನು ಹಾಕುತ್ತಾ ಹೋದನು. ಪ್ರಶ್ನೆಗೆ ತುದಿಯೋ ಇಲ್ಲವೋ ಎಂಬಂದಾಯಿತು. ಕಡೆಯಲ್ಲಿ ಯಾಜ್ಞವಲ್ಕ್ಯನ ಬ್ರಹ್ಮ ತೇಜಸ್ಸಿನಿಂದ ನಾಶವಾದನು. ಅನಂತರ ಯಾಜ್ಞವಲ್ಕ್ಯನು "ಓ ಬ್ರಾಹ್ಮಣರೆ, ನಿಮಗೊಂದು ಪ್ರಶ್ನೆ ಹಾಕುತ್ತೇನೆ. ಮನುಷ್ಯನು ಸತ್ತಮೇಲೆ ಪುನಃ ಹುಟ್ಟುವುದು ಹೇಗೆ ?" ಎಂದು ಕೇಳಿದನು. ಯಾರಿಗೂ ಉತ್ತರವನ್ನು ಹೇಳಲಾಗಲಿಲ್ಲ. ಯಾಜ್ಞ ವಲ್ಕ್ಯನು ವಿಜಯಶೀಲನಾಗಿ ತನ್ನ ಆಶ್ರಮದತ್ತ ತೆರಳಿದನು.

## ೧೦. ಯಾಜ್ಞವಲ್ಕ್ಯ-ಮೈತ್ರೇಯೀ ಸಂವಾದ
## (ಬೃಹದಾರಣ್ಯಕ)

ಅಜ್ಞಾನದಿಂದ ರಾಗದ್ವೇಷಾದಿಗಳು ಹುಟ್ಟುತ್ತವೆ. ಅಜ್ಞಾನಿಗೆ ಚಿತ್ತಶುದ್ಧಿ ಯಾಗಿರುವುದಿಲ್ಲ. ಅವನು ತಾನು ಕರ್ತಾ, ಭೋಕ್ತಾ—ಎಂದು ತಿಳಿದುಕೊಂಡು ಕರ್ಮ ದಲ್ಲಿ ಪ್ರವೃತ್ತನಾಗುತ್ತಾನೆ. ಫಲಾಪೇಕ್ಷೆಯಿಂದ ಮಾಡುವ ಕರ್ಮವ ಬಂಧಕವೇ. ಫಲಾಪೇಕ್ಷೆಯಿಲ್ಲದೆ ಈಶ್ವರ ಪ್ರೀತ್ಯರ್ಥವಾಗಿ ಆಚರಿಸುವ ನಿಷ್ಕಾಮಕರ್ಮದಿಂದ ಚಿತ್ತ ಶುದ್ಧಿಯಾಗಿ ಆತ್ಮದರ್ಶನವಾಗುವುದಕ್ಕೆ ಅಂತರಂಗದಲ್ಲಿ ತಳಹದಿ ಏರ್ಪಡುತ್ತದೆ. ಯಾವಾತನಿಗೆ ಶಾಸ್ತ್ರಾಚಾರ್ಯೋಪದೇಶಗಳಿಂದ ದ್ವೈತ ಬುದ್ಧಿಯು ಅಳಿದು ಸಮ್ಯಗ್ ದರ್ಶನವಾಗಿರುತ್ತದೆಯೋ, ಅಂಥ ಜ್ಞಾನನಿಷ್ಠನು ಕರ್ಮವನ್ನಾಚರಿಸಬೇಕಾಗು ವುದಿಲ್ಲ. ಏಕೆಂದರೆ, ಕರ್ತೃ, ಕ್ರಿಯೆ, ಕಾರಕ, ಫಲ—ಎಂಬ ಭೇದವೇ ಬಾಧಿತವಾಗಿರು ವುದರಿಂದ ಅವನಿಗೆ ಕರ್ತವ್ಯವಾವುದೂ ಇರುವುದಿಲ್ಲ. ಅವನು ಸಂನ್ಯಾಸವನ್ನು ಸ್ವೀಕರಿಸಿ ಜ್ಞಾನನಿಷ್ಠೆಯಲ್ಲಿ ಇದ್ದುಬಿಡುತ್ತಾನೆ. ಬ್ರಹ್ಮಜ್ಞಾನವಾದ ಮೇಲೆ ಸಂನ್ಯಾಸವು ಸ್ವತಃ ಸಿದ್ಧವಾಗಿರುತ್ತದೆ. ಇದನ್ನು ವಿದ್ವತ್ ಸಂನ್ಯಾಸವೆನ್ನುತ್ತಾರೆ. ಇನ್ನು ಬ್ರಹ್ಮಜ್ಞಾನ ವನ್ನು ಪಡೆಯಲು ಸಹಕಾರಿಯಾಗಲೆಂದು ಆತ್ಮವಿದ್ಯಾಂಗವಾಗಿ ಸಂನ್ಯಾಸವನ್ನು ಸ್ವೀಕರಿಸುವುದೂ ಉಂಟು. ಇದನ್ನು ವಿವಿದಿಷಾ ಸಂನ್ಯಾಸವೆನ್ನುತ್ತಾರೆ.

ಯಾಜ್ಞವಲ್ಕ್ಯಮುನಿಗಳು ಗೃಹಸ್ಥರಾಗಿದ್ದಾಗಲೇ ಬ್ರಹ್ಮಜ್ಞಾನಿಗಳಾಗಿದ್ದರು. ಆದ್ದರಿಂದಲೇ ಅವರು ಜನಕರಾಜನಿಗೆ ಆತ್ಮಬೋಧವನ್ನು ಮಾಡಿದ್ದಾರೆ. ಅವರು ಸ್ವೀಕರಿಸಿದ್ದು ವಿದ್ವತ್ ಸಂನ್ಯಾಸವೇ. ಆದರೂ ಸಂನ್ಯಾಸವು ಆತ್ಮಜ್ಞಾನಕ್ಕೆ ಅಂಗವಾಗಿ ಅದನ್ನು ಪಡೆಯಲು ಸಹಕರಿಸುತ್ತದೆ—ಎಂದು ತೋರಿಸುವುದಕ್ಕಾಗಿ ಉಪನಿಷತ್ತಿನಲ್ಲಿ ಯಾಜ್ಞವಲ್ಕ್ಯ-ಮೈತ್ರೇಯೀ ಸಂವಾದ ರೂಪವಾಗಿ ಒಂದು ಉಪಾಖ್ಯಾನ ಬಂದಿದೆ.

ಯಾಜ್ಞವಲ್ಕ್ಯರಿಗೆ ಮೈತ್ರೇಯಿ, ಕಾತ್ಯಾಯನಿ—ಎಂಬ ಇಬ್ಬರು ಪತ್ನಿಯರಿದ್ದರು. ಅವರಲ್ಲಿ ಮೈತ್ರೇಯಿಯು ವಿಚಾರಶೀಲಳಾಗಿದ್ದು ಪರಮಾರ್ಥವನ್ನರಿಯುವ ಕುತೂಹಲವುಳ್ಳವಳಾಗಿದ್ದಳು. ಬ್ರಹ್ಮವಸ್ತುವನ್ನು ಚಿಂತಿಸುತ್ತ ಬ್ರಹ್ಮವಾದಿನಿಯೆನಿಸಿದ್ದಳು. ಕಾತ್ಯಾಯನಿಯ ಸ್ವಭಾವ ಬೇರೆ. ಅವಳು ಗೃಹಕೃತ್ಯದಲ್ಲಿ ಆಸಕ್ತಳಾಗಿದ್ದಳೇ ಹೊರತು ಆತ್ಮವಿಚಾರವನ್ನು ತಲೆಗೆ ಹಚ್ಚಿಕೊಂಡವಳಲ್ಲ. ಹೀಗಿರುವಾಗ ಒಮ್ಮೆ ಯಾಜ್ಞವಲ್ಕ್ಯರಿಗೆ ಸಂನ್ಯಾಸವನ್ನು ಸ್ವೀಕರಿಸಿ ಪರಿವ್ರಾಜಕರಾಗಿ ಹೊರಟು ಹೋಗಬೇಕೆಂಬ ಇಚ್ಛೆಯುಂಟಾಯಿತು. ಅವರು ಮೈತ್ರೇಯಿಯನ್ನು ಕುರಿತು—"ಮೈತ್ರೇಯಿ, ನಾನು ಗೃಹಸ್ಥಾಶ್ರಮವನ್ನು ತ್ಯಜಿಸಿ ಸಂನ್ಯಾಸವನ್ನು ಸ್ವೀಕರಿಸಬೇಕೆಂದಿದ್ದೇನೆ. ಅದಕ್ಕೆ ನೀನು ಒಪ್ಪಿಗೆಯನ್ನು ಕೊಡು. ಅಲ್ಲದೆ, ನನ್ನ ಹಣ-ಕಾಸು ಮುಂತಾದ್ದನ್ನು ನಿನಗೂ ಕಾತ್ಯಾಯನಿಗೂ ವಿಭಾಗ ಮಾಡಿಕೊಡುತ್ತೇನೆ"—ಎಂದರು. ಸೂಕ್ಷ್ಮಬುದ್ಧಿಯುಳ್ಳ ಮೈತ್ರೇಯಿಯು—"ಆಸ್ತಿ ಹಣ—ಯಾವುದೂ ಬೇಡವೆಂದು ನನ್ನ ಪತಿಯೇ ಬಿಟ್ಟುಹೋಗುತ್ತಿದ್ದಾರೆ. ನಾನೇಕೆ ಇದನ್ನು ಬಯಸಲಿ ? ಇವರಿಗೆ ಯಾವುದು ಪ್ರಿಯವಾಗಿದೆಯೋ, ಯಾವುದಕ್ಕಾಗಿ ಇವರು ಮನೆಯನ್ನು ಬಿಟ್ಟು ಪರಿವ್ರಾಜಕರಾಗಿ ಹೋಗುತ್ತಿದ್ದಾರೋ ಅಂತಹ ಶ್ರೇಷ್ಠ ವಸ್ತುವನ್ನು ನಾನೇಕೆ ಪಡೆಯಬಾರದು ?"—ಎಂದು ಆಲೋಚಿಸಿ, "ಸ್ವಾಮಿ, ನೀವು ಕೊಡುವ ಧನದಂತೆ ಇನ್ನೂ ಬೇಕಾದಷ್ಟು ಧನವನ್ನು ತಂದು ತುಂಬಿಕೊಂಡರೆ, ನಾನು ಅಮೃತಳಾಗುವೆನೋ ? ಸಾವಿನ ಬಲೆಯಿಂದ ತಪ್ಪಿಸಿಕೊಳ್ಳುವೆನೋ ?"—ಎಂದು ಕೇಳಿದಳು. ಈ ಪ್ರಶ್ನೆಯಿಂದ ಯಾಜ್ಞವಲ್ಕ್ಯರಿಗೆ ಸಂತೋಷವಾಯಿತು ಅವರು—"ಮೈತ್ರೇಯಿ, ಧನ ಮುಂತಾದ ಭೋಗ ಸಾಮಗ್ರಿಗಳನ್ನು ತಂದು ತುಂಬಿಕೊಂಡವರಿಗೆ ಮರಣವು ಬಂದೇ ಬರುತ್ತದೆಯಲ್ಲವೇ ? ಹಾಗೆಯೇ, ನಿನ್ನ ಪರಿಸ್ಥಿತಿಯೂ ಆಗುತ್ತದೆ. "ಅಮೃತತ್ವಸ್ಯ ತು ನಾಶಾಸ್ತಿವಿತ್ತೇನ"—ಹಣದಿಂದ ಸಾವನ್ನು ತಪ್ಪಿಸಿಕೊಳ್ಳುತ್ತೇನೆಂಬ ಆಸೆ ಕೂಡ ಸಲ್ಲದು—ಎಂದು ನುಡಿದರು. ಆಗ, ಮೈತ್ರೇಯಿಯು—"ಭಗವನ್, ಸಾವನ್ನು ತಪ್ಪಿಸಿಕೊಳ್ಳಲಾಗದಿದ್ದ ಮೇಲೆ ಈ ಹಣದಿಂದ ನನಗೆ ಆಗಬೇಕಾದ್ದೇನು ? ಹುಟ್ಟು-ಸಾವುಗಳ ಸಂಕಟದಿಂದ ತಪ್ಪಿಸಿಕೊಂಡು ನಾನು ಅಮೃತಳಾಗಬೇಕು. ಅದಕ್ಕೆ ಮಾರ್ಗವೇನೆಂಬುದನ್ನು ಕೃಪೆಯಿಟ್ಟು ಉಪದೇಶಿಸಿರಿ"—ಎಂದಳು. ಯಾಜ್ಞವಲ್ಕ್ಯರು ಆನಂದಪೂರ್ಣರಾಗಿ—"ಮೈತ್ರೇಯಿ, ನನಗೆ ತುಂಬ ಪ್ರಿಯವಾಗಿದ್ದವಳು ನೀನು.

ಈಗಲೂ ನನಗೆ ಪ್ರಿಯವಾದ ವಿಷಯವನ್ನೇ ಕುರಿತು ಕೇಳುತ್ತಿದ್ದೀಯೆ. ಬಾ, ಹತ್ತಿರ ಕುಳಿತುಕೊ. ಎಲ್ಲವನ್ನೂ ವಿವರಿಸಿ ಹೇಳುತ್ತೇನೆ. ತತ್ಪರಳಾಗಿ ಆಲಿಸುತ್ತಿರು"— ಎಂದು ಹೇಳಿ ಹೀಗೆ ಉಪದೇಶಿಸಿದರು

"ಮೈತ್ರೇಯಿ, ಪತಿಯ ಪ್ರಯೋಜನಕ್ಕಾಗಿ–ಪತಿಗೆ ಪ್ರಿಯವಾಗಲೆಂದು ಪತಿಯು ಪ್ರಿಯನಾಗುವುದಿಲ್ಲ. ತನಗಾಗಿ–ಆತ್ಮಸಂತೋಷಕ್ಕಾಗಿ ಪತಿಯು ಪ್ರಿಯನಾಗುತ್ತಾನೆ. ಹಾಗೆಯೇ, ಪತ್ನಿಯ ಪ್ರಯೋಜನಕ್ಕಾಗಿ–ಪತ್ನಿಗೆ ಪ್ರಿಯವಾಗಲೆಂದು ಪತಿಗೆ ಪತ್ನಿಯು ಪ್ರಿಯಳಾಗಿರುವುದಿಲ್ಲ. ತನಗಾಗಿ–ಆತ್ಮಸಂತೋಷಕ್ಕಾಗಿ ಪತ್ನಿಯು ಪ್ರಿಯಳಾಗಿರುತ್ತಾಳೆ. ಅದೇ ರೀತಿಯಲ್ಲಿ ಮಕ್ಕಳಿಗೆ ಸಂತೋಷವಾಗಲೆಂದು ಮಕ್ಕಳು ಪ್ರಿಯರಾಗಿರುವುದಿಲ್ಲ. ತನಗೆ ಸಂತೋಷವಾಗಿರುವುದರಿಂದ ಮಕ್ಕಳು ಪ್ರಿಯರಾಗಿರುತ್ತಾರೆ. ಹಣದ ಸಂತೋಷಕ್ಕಾಗಿ ಹಣವನ್ನು ಯಾರೂ ಪ್ರೀತಿಸುವುದಿಲ್ಲ. ತನಗೆ ಪ್ರಯೋಜನವಿದೆಯೆಂದು ಹಣವನ್ನು ಪ್ರೀತಿಸುತ್ತಾರೆ. ಬ್ರಾಹ್ಮಣ್ಯದ ಸಂತೋಷಕ್ಕಾಗಿ ಜನರು ಬ್ರಾಹ್ಮಣ್ಯವನ್ನು ಪ್ರೀತಿಸುವುದಿಲ್ಲ. ತನಗೆ ಪ್ರಯೋಜನವಿದೆಯೆಂದು ಬ್ರಾಹ್ಮಣ್ಯವನ್ನು ಪ್ರೀತಿಸುತ್ತಾರೆ. ಕ್ಷತ್ರಿಯ ಜಾತಿಗೆ ಪ್ರಿಯವಾಗಲೆಂದು ಕ್ಷತ್ರಿಯರನ್ನು ಪ್ರೀತಿಸುವುದಿಲ್ಲ. ತನಗೆ ಪ್ರಯೋಜನವಿದೆಯೆಂದು ಅದನ್ನು ಪ್ರೀತಿಸುತ್ತಾರೆ. ಜನರಿಗೆ ಸಂತೋಷವಾಗಲೆಂದು ಯಾರೂ ಜನರನ್ನು ಪ್ರೀತಿಸುವುದಿಲ್ಲ. ಅವರಿಗೆ ಹಿತವಾದರೆ ತನಗೆ ಸಂತೋಷವಾಗುತ್ತದೆಯೆಂದು ಪ್ರೀತಿಸುತ್ತಾರೆ. ದೇವತೆಗಳಿಗೆ ತೃಪ್ತಿಯಾಗಲೆಂದು ಯಾರೂ ದೇವತೆಗಳನ್ನು ಅರ್ಚಿಸುವುದಿಲ್ಲ. ಅವರಿಗೆ ತೃಪ್ತಿಯಾದರೆ ತನಗೆ ಪ್ರಯೋಜನವುಂಟೆಂದು ದೇವತೆಗಳನ್ನು ಅರ್ಚಿಸುತ್ತಾರೆ. ಅಂತೆಯೇ ಪ್ರಾಣಿಗಳನ್ನು ಪ್ರೀತಿಸುವುದೂ ಆತ್ಮ ಸಂತೋಷಕ್ಕಾಗಿಯೇ. ಹೀಗೆಯೇ ಸರ್ವ ವಸ್ತುಗಳನ್ನು ಪ್ರೀತಿಸುವುದೂ ಆತ್ಮ ಸಂತೋಷಕ್ಕಾಗಿ. ಇದರಿಂದ ಏನು ಗೊತ್ತಾಗುತ್ತದೆ ? ಸಕಲವೂ ಆತ್ಮಶೇಷವೇ ಎಂದು ಗೊತ್ತಾಗುತ್ತದೆ. ಆತ್ಮಕ್ಕಾಗಿ ಅವು ಇವೆಯೆಂದು ತಿಳಿದುಬರುತ್ತದೆ. ಆದ್ದರಿಂದ ಆತ್ಮನೇ ಸರ್ವರಿಗೂ ಪ್ರಿಯನಾದವನು. ಆತ್ಮನೆಂದರೆ ತಾನೇ ಅಲ್ಲವೇ ? ಹೀಗೆ ಪ್ರಿಯತಮನಾದ ತಾನು–ಆತ್ಮನು ಯಾರು ? ಅವನ ಸ್ವರೂಪವೇನು? ಎಂಬುದನ್ನು ಮಾನವನು ತಿಳಿಯಬೇಕು. "ಆತ್ಮಾವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಧ್ಯಾಸಿತವ್ಯಃ–ಆತ್ಮದರ್ಶನವನ್ನು ಮಾಡಲೇಬೇಕು. ಅದಕ್ಕಾಗಿ ಆತ್ಮ ಸ್ವರೂಪವನ್ನು ಗುರುವಿನಿಂದಲೂ ಶಾಸ್ತ್ರದಿಂದಲೂ ಕೇಳಿ ತಿಳಿಯಬೇಕು. ಅನಂತರ ವಿಚಾರ ಪೂರ್ವಕವಾಗಿ ಮನನ ಮಾಡಬೇಕು. ಆಮೇಲೆ ಆತ್ಮಧ್ಯಾನದಲ್ಲಿ ದೃಢವಾಗಿ ನಿಲ್ಲಬೇಕು. ಈ ರೀತಿಯಾಗಿ ಶ್ರವಣ–ಮನನ–ನಿದಿಧ್ಯಾಸನಗಳಿಂದ ಆತ್ಮಜ್ಞಾನವಾಗುತ್ತದೆ. ಈ ಪ್ರಕಾರದಲ್ಲಿ ಆತ್ಮಜ್ಞಾನವಾದಾಗ, ಮೈತ್ರೇಯಿ, ಈ ವಿಶ್ವದ ಸಮಸ್ತ ರಹಸ್ಯವೂ ತಿಳಿದುಹೋಗುತ್ತದೆ."

"ಆತ್ಮಾತಿರಿಕ್ತವಾಗಿ ತೋರುವ ವಸ್ತುಗಳೆಲ್ಲವೂ ಮಿಥ್ಯೆಯಾದ್ದರಿಂದ ಅವುಗಳಲ್ಲಿ ವೈರಾಗ್ಯವನ್ನುಂಟುಮಾಡುವುದು ಯಾಜ್ಞವಲ್ಕ್ಯರ ಉಪದೇಶದ ಸಾರವಾಗಿರು

ತ್ತದೆ. ಆತ್ಮವನ್ನು ತಿಳಿದರೆ ಸರ್ವಜಗತ್ತಿನ ರಹಸ್ಯವು ಹೇಗೆ ಗೊತ್ತಾಗುತ್ತದೆ ? ಆತ್ಮಾತಿರಿಕ್ತವಾದ ವಸ್ತು ಇಲ್ಲವಾದ್ದರಿಂದ "ಇದಂ ಸರ್ವಂ ಯದಯಮಾತ್ಮಾ." ಭೇರಿಯನ್ನು ಬಡಿಯುವಾಗ ಏರಿಳಿತದ ನಾನಾ ಧ್ವನಿಗಳು ಕೇಳುತ್ತವೆ. ಅವೆಲ್ಲವೂ ಭೇರೀಧ್ವನಿಗಳೇ. ಸಾಮಾನ್ಯವಾದ ಭೇರಿ ಧ್ವನಿಯು ಹೇಗಿರುತ್ತದೆ–ಎಂದು ತಿಳಿದರೆ, ಆದರ ವಿಶೇಷ ಧ್ವನಿಗಳ ಮೂಲಸ್ವರೂಪವು ಗೊತ್ತಾ ಬಿಡುತ್ತದೆ. ಬೆಂಕಿಯಿಂದ ಹೊಗೆಯು ಹೊರಡುವಂತೆ, ಪರಮಾತ್ಮನ ಉಸಿರಿನ ಹಾಗೆ ನಾಲ್ಕು ವೇದಗಳು ಹೊರಟು ಬಂದಿವೆ. ಅವೆಲ್ಲವೂ ಪ್ರಮಾಣ ಗ್ರಂಥಗಳು. ಇರತಕ್ಕದ್ದು ವಿಜ್ಞಾನ ಘನವೂ, ಅದ್ವಯವೂ ಆದ ಆತ್ಮ ಒಂದೇ. ಅದೇ ಪರಬ್ರಹ್ಮ, ಆ ಪರಬ್ರಹ್ಮವೇ ನೀನೆಂದು ತಿಳಿದುಕೊಂಡಾಗ ನೀನು ಅಮೃತಳೇ ಆಗುವೆ. ಮೈತ್ರೇಯಿ ಶ್ರವಣ ಮನನ ನಿದಿಧ್ಯಾಸನಗಳಿಂದ ನಿನ್ನ ಆತ್ಮವನ್ನು ನೀನು ತಿಳಿದುಕೊಳ್ಳುವುದೇ ಅಮೃತಳಾಗುವ ಮಾರ್ಗ"–ಎಂದು ಉಪದೇಶಿಸಿ, ಯಾಜ್ಞವಲ್ಕ್ಯರು ಪರಿವ್ರಾಜಕರಾಗಿ ನಿರ್ಗಮಿಸಿದರು.

## ೧೧. ಪ್ರಜಾಪತಿಯು "ದದದ" ಎಂದು ಉಪದೇಶಿಸಿದುದು (ಬೃಹದಾರಣ್ಯಕ)

ದೇವತೆಗಳೂ ಮನುಷ್ಯರೂ ಅಸುರರೂ ಪ್ರಜಾಪತಿಯ ಮಕ್ಕಳು. ಅವರು ಬ್ರಹ್ಮಚರ್ಯ ವ್ರತವನ್ನು ಪಾಲಿಸುತ್ತಾ ತಂದೆಯ ಸೇವೆ ಮಾಡಿಕೊಂಡಿದ್ದರು. ಒಮ್ಮೆ ತಂದೆಯನ್ನು ಕುರಿತು–"ನಮಗೆ ಹಿತೋಪದೇಶ ಮಾಡು" ಎಂದು ಪ್ರಾರ್ಥಿಸಿದರು. ಆಗ ಪ್ರಜಾಪತಿಯು 'ದ' ಎಂದು ನುಡಿದು "ಅರ್ಥವಾಯಿತೋ ?" ಎಂದು ಕೇಳಿದನು. "ದೇವತೆಗಳು ಹೌದು ಅರ್ಥವಾಯಿತು"–ಎಂದರು. "ಹೇಳಿರಿ ಏನು ಅರ್ಥವಾಯಿತು ?" ಎಂದು ಕೇಳಲಾಗಿ, "ದಾಮ್ಯತ–ದಮವನ್ನು ಅಭ್ಯಾಸ ಮಾಡಿರಿ"–ಎಂದು ಉಪದೇಶಿಸಿದ್ದೀಯೆ ಎಂದರು. ಪ್ರಜಾಪತಿ ಸರಿಯೆಂದನು.

ಅನಂತರ ಮನುಷ್ಯರು ಪ್ರಜಾಪತಿಯನ್ನು ಕುರಿತು–"ನಮಗೂ ಉಪದೇಶವನ್ನು ನೀಡು"–ಎಂದರು. ಪ್ರಜಾಪತಿಯು "ದ" ಎಂದೇ ನುಡಿದು, "ಅರ್ಥವಾಯಿತೋ ?" ಎಂದು ಕೇಳಿದನು. ಮನುಷ್ಯರು "ಹೌದು ಅರ್ಥವಾಯಿತು" ಎಂದರು. "ಹೇಳಿರಿ, ಏನು ಅರ್ಥವಾಯಿತು ?" ಎಂದು ಪ್ರಶ್ನಿಸಲಾಗಿ–"ದತ್ತ–ದಾನ ಮಾಡುವುದನ್ನು ಕಲಿಯಿರಿ" ಎಂದು ಬೋಧಿಸಿದ್ದೀಯೆ" ಎಂದರು. ಹೌದೆಂದು ಪ್ರಜಾಪತಿಯು ಹೇಳಿದನು.

ಆಮೇಲೆ ಅಸುರರು–"ನಮಗೂ ಉಪದೇಶಿಸು" ಎಂದು ಪ್ರಾರ್ಥಿಸಿದರು. ಪ್ರಜಾಪತಿಯು ಮತ್ತೆ "ದ" ಎಂದೇ ನುಡಿದು, "ಅರ್ಥವಾಯಿತೋ ?" ಎಂದು ಕೇಳಿದನು. ಅಸುರರು–"ಹೌದು ಅರ್ಥವಾಯಿತು" ಎಂದರು. "ಏನು ಅರ್ಥ

ವಾಯಿತು ? ಹೇಳಿರಿ" ಎಂದು ಪ್ರಜಾಪತಿಯು ಕೇಳಲಾಗಿ, "ದಯಧ್ವ–ದಯಾವಂತರಾಗುವುದನ್ನು ಕಲಿಯಿರಿ" ಎಂದು ಉಪದೇಶಿಸಿದ್ದೀಯೆ ಎಂದರು. "ಸರಿಯಾಗಿ ತಿಳಿದುಕೊಂಡಿರಿ"–ಎಂದು ಪ್ರಜಾಪತಿಯು ನುಡಿದನು.

ಬ್ರಹ್ಮನು ಮೂರು ವರ್ಗದವರಿಗೂ "ದ" ಎಂದೇ ಉಪದೇಶಿಸಿದ್ದಾನೆ. ಇದು ಬಹಳ ಮುಖ್ಯವಾದ ಉಪದೇಶ. ಆದ್ದರಿಂದಲೇ ಇಂದಿಗೂ ಮೇಘವು "ದದದ" ಎಂದು ಗುಡುಗುತ್ತ ಆದಿತ್ಯವಾಣಿಯನ್ನು ಉಪದೇಶಿಸುತ್ತಿದೆ. ದಾಮ್ಯತ ದತ್ತ, ದಯಧ್ವಂ" ಎಂದು ಮತ್ತೆ ಮತ್ತೆ ಬೋಧಿಸುತ್ತಿದೆ.

ಬ್ರಹ್ಮನು ಎಲ್ಲರಿಗೂ "ದ" ಎಂದೇ ಉಪದೇಶಿಸಿದಾಗ ಮೂರು ವರ್ಗದವರೂ ಬೇರೆ ಬೇರೆಯಾಗಿ ಅರ್ಥಮಾಡಿಕೊಂಡಿದ್ದಾರೆ, ಇದು ಹೇಗೆ ಸಾಧ್ಯ ? ಎಂಬ ಪ್ರಶ್ನೆ ಹುಟ್ಟಬಹುದು. ಹಿರಿಯರ ಉಪದೇಶವು ನಮ್ಮ ದುರ್ಗುಣಗಳನ್ನು ಹೋಗಲಾಡಿಸಿಕೊಂಡು ಸದ್ಗುಣವನ್ನು ಬೆಳೆಸಿಕೊಳ್ಳುವುದಕ್ಕಾಗಿರುತ್ತದೆ. ನಮ್ಮಲ್ಲಿರುವ ದುರ್ಗುಣವೇನು ? ದೋಷವೇನು ? ದೌರ್ಬಲ್ಯವೇನು ? ಎಂಬುದು ನಮಗೆ ಗೊತ್ತಿರುತ್ತದೆ. ಹೊರಗೆ ಹೇಳಿಕೊಳ್ಳುವುದಿಲ್ಲ ಅಷ್ಟೆ. ಭರ್ತೃಹರಿಯು ವಾಕ್ಯಪದೀಯದಲ್ಲಿ–

**ಇದಂ ಪುಣ್ಯಮಿದಂ ಪಾಪ ಮಿತ್ಯೇ ತಸ್ಮಿನ್ ಪದದ್ವಯೇ ।**
**ಆ ಚಂಡಾಲಂ ಮನುಷ್ಯಾಣಾಮಲ್ಪಂ ಶಾಸ್ತ್ರ ಪ್ರಯೋಜನಮ್ ॥**

ಎಂದು ಹೇಳಿದ್ದಾನೇ "ಇದು ಪುಣ್ಯ, ಇದು ಪಾಪ ಎಂಬುದು ಸರ್ವರಿಗೂ ತಿಳಿದೇ ಇರುತ್ತದೆ. ಅಜ್ಞರಾದ ಅಂತ್ಯಜರವರೆಗೂ ಈ ವಿಷಯದಲ್ಲಿ ಶಾಸ್ತ್ರದಿಂದಾಗುವ ಪ್ರಯೋಜನ ಅತ್ಯಲ್ಪ–ಎಂದು ಅದರ ಅಭಿಪ್ರಾಯ. ದೇವತೆಗಳು ವಿಷಯಲೋಲುಪರು, ಭೋಗಾಸಕ್ತರು, ಇಂದ್ರಿಯ ಚಾಪಲ್ಯ ಅವರಿಗೆ ಅಧಿಕ. ಈ ದೋಷವು ದೇವತೆಗಳಿಗೆ ಗೊತ್ತಿದೆ. ಆದ್ದರಿಂದ "ದ" ಎಂದೊಡನೆ ದಮ (ಇಂದ್ರಿಯ ನಿಗ್ರಹ) ವನ್ನು ಅಭ್ಯಾಸ ಮಾಡಿರಿ ಎಂಬುದೇ ಬ್ರಹ್ಮನ ಉಪದೇಶವೆಂದು ಅವರು ತಿಳಿದುಕೊಂಡುಬಿಟ್ಟರು ? "ಕುಂಬಳಕಾಯಿ ಕಳ್ಳ ಎಂದೊಡನೆ ಹೆಗಲು ಮುಟ್ಟಿ ನೋಡಿಕೊಂಡ"–ಎಂಬ ಗಾದೆ ಹುಟ್ಟಿರುವುದು ಹೀಗೆ.

ಮನುಷ್ಯರಿಗೆ ಲೋಭ ಹೆಚ್ಚು ಇವರ ಕೈ ಜಿಗುಟು. ದೀನರಿಗೆ ಕೊಡುವುದಿರಲಿ, ಇನ್ನಷ್ಟು ಕಿತ್ತುಕೊಳ್ಳಬೇಕೆಂಬ ಬುದ್ಧಿಯೇ ಬೆಳೆದಿರುತ್ತದೆ. ಲೋಭವನ್ನು ವರ್ಜಿಸಿ ದಾನಗುಣವನ್ನು ರೂಢಿಸಿಕೊಳ್ಳಬೇಕೆಂದು ಅವರಿಗೆ ಬ್ರಹ್ಮನ ಉಪದೇಶ.

ಇನ್ನು ಅಸುರರ ಸ್ವಭಾವ ಗೊತ್ತೇ ಇದೆ. ಹಿಂಸೆ, ಕ್ರೌರ್ಯ, ಅವರಿಗೆ ಸಹಜವಾದುದು. ಅವರು ದಯಾವಂತರಾಗಬೇಕೆಂದು ಬ್ರಹ್ಮನ ಉಪದೇಶ.

ವಾಸ್ತವವಾಗಿ ಇವೆಲ್ಲವೂ ಮನುಷ್ಯನಿಗೆ ಮಾಡಿದ ಉಪದೇಶಗಳೇ. ಮನುಷ್ಯರಲ್ಲಿ ಇಂದ್ರಿಯ ಲೋಲುಪರಿದ್ದಾರೆ. ಲೋಭಿಗಳಿದ್ದಾರೆ. ಕ್ರೂರಿಗಳಿದ್ದಾರೆ. ದೇವತೆಗಳೂ ರಾಕ್ಷಸರೂ ಮನುಷ್ಯರಲ್ಲಿಯೇ ಇದ್ದಾರೆ. ಈ ಅಭಿಪ್ರಾಯದಿಂದ ಶ್ರೀ ಶಂಕರ ಭಗವತ್ಪಾದರು–**"ನ ದೇವಾ ಅಸುರಾವಾ ಅನ್ಯೇಕೇಚನ ವಿದ್ಯಂತೇ ಮನುಷ್ಯೇಭ್ಯಃ"**–ಎಂದು ತಮ್ಮ ಬೃಹದಾರಣ್ಯಕ ಭಾಷ್ಯದಲ್ಲಿ ಅಪ್ಪಣೆ ಕೊಡಿಸಿದ್ದಾರೆ. ಭಗವದ್ಗೀತೆಯಲ್ಲಿಯೂ–

**ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನ ಮಾತ್ಮನಃ ।**
**ಕಾಮಃ ಕ್ರೋಧಸ್ತಥಾ ಲೋಭಸ್ತಸ್ಮಾದೇತತ್ತ್ರಯಂ ತ್ಯಜೇತ್ ॥**

–ಎಂದು ಹೇಳಿದೆ. ಕಾಮ, ಕ್ರೋಧ, ಲೋಭ–ಇವು ಮೂರು ನರಕದ ದಾರಿಗಳೆಂದೂ, ಮನುಷ್ಯನ ಸರ್ವನಾಶಕ್ಕೆ ಕಾರಣಗಳೆಂದೂ ವರ್ಣಿಸಲಾಗಿದೆ. ಇವು ಮೂರನ್ನು ಅವಶ್ಯಕವಾಗಿ ಜಯಿಸಲೇಬೇಕೆಂದು "ದದದ" ಉಪದೇಶ.